RNI:KAR/KAN/2021/27600

# ಕರುನಾಡ ಕಂದ

ಸಂಪುಟ-03 ಸಂಚಿಕೆ-02 ದಿನಾಂಕ: 16-11-2023 ಪುಟಗಳು: 16

ಬೆಲೆ: 20/-

ಪಾಕ್ಷಿಕ

Editor : KARIBASAPPA BALIGAR

ಸಂಪಾದಕರು : ಕರಿಬಸಪ್ಪ ಬಳಿಗಾರ





## ಯಾರೂ ಹೇಳಂಗಿಲ್ಲ, ಏನೂ ಕೇಳಂಗಿಲ್ಲ ಉತ್ತರ ಮಾತ್ರ ಸಿಗೋದೆ ಇಲ್ಲ!? ಹೀಗೂ ಉಂಟಾ...



## ನಮ್ಮ ಹೆಮ್ಮೆಯ ಯೋಧರು ಭಾರತಾಂಬೆಯ ವೀರಪುತ್ರರಿಗೆ ದೀಪಾವಳಿಯ ಶುಭಾಶಯಗಳು

## ಹೆಸರಿಗೆ ಮಾತ್ರ ಸರ್ಕಾರಿ ಆಸ್ಪತ್ರೆ-ಚಿಕಿತ್ಸೆ ಕೊಡೋ ವೈದ್ಯರೇ ನಾಪತ್ತೆ!?

## ಸರ್ವರೋಗಕ್ಕೂ ದುಡ್ಡೇ ಮದ್ದು




## ರಾಷ್ಟ್ರ ಧ್ವಜ ಹರಿದವರ ವಿರುದ್ಧ ದೂರು ದಾಖಲು

## ಸರ್ಕಾರಕ್ಕೆ ಅತಿಥಿ ಉಪನ್ಯಾಸಕರ ಪ್ರಶ್ನೆಗಳ ಸರಮಾಲೆ, ಉತ್ತರ ಸಿಗುವುದು ಯಾವಾಗ?

## ರೈತರ ಸಂಕಷ್ಟಕ್ಕೆ ಸ್ಪಂಧಿಸುವವರು ಯಾರು ಶಿವ?






### ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

ನಮ್ಮ-ನಿಮ್ಮೆಲ್ಲರ **"ಕರುನಾಡ ಕಂದ"** ಪಾಕ್ಷಿಕ ಪತ್ರಿಕೆಯು ನಿಮ್ಮೆಲ್ಲರ ಸಹಕಾರದಿಂದ ಎರಡು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಮೂರನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ ಪತ್ರಿಕೆಯ ಎಲ್ಲಾ ಜಿಲ್ಲೆಗಳ ವರದಿಗಾರರು, ಜಾಹೀರಾತುದಾರರು, ಚಂದಾದಾರರು, ಓದುಗರು ಹಾಗೂ ಎಲ್ಲಾ ಹಿತೈಷಿಗಳಿಗೆ ತಮ್ಮ ಬೆಂಬಲ ಸದಾ ಹೀಗೆ ಇರಲೆಂದು ಕರುನಾಡ ಕಂದ ಪತ್ರಿಕಾ ಬಳಗದ ವತಿಯಿಂದ ಆಶಿಸುತ್ತೇನೆ.

ಇಂತಿ ನಿಮ್ಮ-

**"ಕರುನಾಡ ಕಂದ"** ಬಸವರಾಜ ಬಳಿಗಾರ, 9986366909




ಕರುನಾಡ ಕಂದ
ಸಂಪುಟ-03 | ಸಂಚಿಕೆ-02
ದಿನಾಂಕ: 16-11-2023 | ಪುಟಗಳು: 16

# ಸರ್ಕಾರಕ್ಕೆ ಅತಿಥಿ ಉಪನ್ಯಾಸಕರ ಪ್ರಶ್ನೆಗಳ ಸರಮಾಲೆ, ಉತ್ತರ ಸಿಗುವುದು ಯಾವಾಗ?

ಶಿಕ್ಷಕರು ವಿದ್ಯಾರ್ಥಿ ಬಾಳಿನ ರಕ್ಷಕರು ರಾಜ್ಯದಲ್ಲಿ430 ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆಯನ್ನು ನೀಗಿಸಲು ಉನ್ನತ ಶಿಕ್ಷಣ ಇಲಾಖೆ ಕಂಡುಕೊಂಡ ಸುಲಭವಾದ ಮಾರ್ಗ ಈ 'ಅತಿಥಿ ಉಪನ್ಯಾಸಕ'ಈ ವೃತ್ತಿಯ ಇತಿಹಾಸವನ್ನು ಸ್ವಲ್ಪ ಕೆದಕಿ ನೋಡಿದಾಗ ಸು 1970-72ರ ಅಸು ಪಾಸಿನಲ್ಲಿ ಇಲಾಖೆಯು ಪದವಿ ಕಾಲೇಜುಗಳಲ್ಲಿ ?ಲೋಕಲ್ ಕ್ಯಾಂಡಿಡೇಟ್? ಎನ್ನುವ ಹುದ್ದೆಯನ್ನು ತಾತ್ಕಲಿಕವಾಗಿ ಸೃಜಿಸಿ ರಾಜ್ಯಾದ್ಯಂತ ಪದವಿ ಕಾಲೇಜುಗಳಲ್ಲಿ ನೇಮಕ ಮಾಡಿತ್ತು ಸುಮಾರು ವರ್ಷ ದುಡಿದ ಲೋಕಲ್ ಕ್ಯಾಂಡಿಡೇಟ್ ಉಪನ್ಯಾಸಕರುಗಳ ಪ್ರತಿಭಟನೆ ಹೋರಾಟದ ಪ್ರತಿಫಲದಿಂದ ಅಂದಿನ ಸರಕಾರ ಅವರನ್ನು ಖಾಯಂಗೊಳಿಸಿತ್ತು ನಂತರ ಇಲಾಖೆಯು 'ಕಾಂಟ್ರಾಕ್ಟ ಬೇಸಿಸ್? ಮೇಲೆ ರಾಜ್ಯದಲ್ಲಿ ಉಪನ್ಯಾಸಕರನ್ನು ತಾತ್ಕಾಲಿಕ ವ್ಯವಸ್ಥೆಯಡಿಯಲ್ಲಿ ಪದವಿ ಕಾಲೇಜುಗಳಲ್ಲಿ ನೇಮಕ ಮಾಡಲಾಯಿತು ಮುಂದೆ ಇವರ ಹೋರಾಟ,ಪ್ರತಿಭಟನೆ ಮಾಡಿ ಅಂದಿನ ಸರಕಾರಕ್ಕೆ ಮನವೊಲಿಸಿದ ಹೋರಾಟದ ಪ್ರತಿಫಲವಾಗಿ ಅಂದಿನ ಸರಕಾರ ಅವರನ್ನು ಸಹ ಖಾಯಂಗೊಳಿಸಿತು ತದನಂತರ 'ಅರೆಕಾಲಿಕ? ಉಪನ್ಯಾಸಕರು ಎಂದು ಹೆಸರು ಬದಲಿಸಿ ಪುನಃ ರಾಜ್ಯದ ಪದವಿ ಕಾಲೇಜುಗಳಲ್ಲಿ ನೇಮಿಸಿ ಹತ್ತು ಹದಿನೈದು ವರ್ಷಗಳ ಕಾಲ ಪ್ರತಿಭಟನೆ ಹೋರಾಟ ಮಾಡಿ ಸರಕಾರದ ಎಷ್ಟೇ ಮನವೊಲಿಸುವ ಪ್ರಯತ್ನ ಮಾಡಿದರೂ ಸರಕಾರ ಕಿವಿಗೊಡಲಿಲ್ಲ ಹೈಕೋರ್ಟ್ ಮೊರೆ ಹೋದರು ಹೈಕೋರ್ಟ್ ಇವರನ್ನು ಒನ್ ಟೈಂ ಮೇಜರ್ ಎಂದು ಪರಿಗಣಿಸಿ ಮಾನವೀಯ ಆಧಾರದ ಮೂಲಕ ಖಾಯಂ ಮಾಡಲು ಆದೇಶವನ್ನು ಸರಕಾರಕ್ಕೆ ಆದೇಶ ಮಾಡಿತು. ಸರಕಾರ ಅವರನ್ನು 2003 ರಲ್ಲಿ ಖಾಯಂ ಮಾಡಿತ್ತು.

ಇವುಗಳೆಲ್ಲದರ ನಂತರ ಬಂದದ್ದೆ ?ಅತಿಥಿ ಉಪನ್ಯಾಸಕರು? 2004 ರಿಂದ ಈಚೆ ಸುಮಾರು 19-20 ವರ್ಷಗಳ ಕಾಲ ಆಧುನಿಕ ಜೀತದಾಳುಗಳಂತೆ ಸರಕಾರಗಳು ಅವರನ್ನು ದುಡಿಸಿಕೊಂಡು ಬಂದರೂ ಇವರಿಗೆ ಖಾಯಂ ಭಾಗ್ಯ ಇಲ್ಲದಂತಾಗಿ ಅವರ ಪರಿಸ್ಥಿತಿಯು ಡೋಲಾಯಮಾನವಾಗಿದೆ ಕೆಲವರು ನಿವೃತ್ತಿ ಹೊಂದಿದ್ದಾರೆ ಇನ್ನೂ ಕೆಲವರು ವಯೋಮಾನ ಅಂಚಿನಲ್ಲಿ ತಲುಪಿ,ಬೇರೆ ದಾರಿಯೇ ಇಲ್ಲದಂತಾಗಿ ಮಾನಸಿಕವಾಗಿ ಅಸ್ವಸ್ಥರಾಗಿ ಎಷ್ಟೋ ಅತಿಥಿ ಉಪನ್ಯಾಸಕರು ಸಾವನ್ನಪ್ಪಿದ್ದಾರೆ ಕೆಲವರು ಈ ಆಧುನಿಕ ಭರಾಟೆಯಲ್ಲಿ ಬೆಲೆ ಏರಿಕೆಯಿಂದ ಕುಟುಂಬ ನಿರ್ವಹಣೆ ಮಾಡಲು ಪರ್ಯಾಯವಾಗಿ ಇದರ ಜೊತೆಗೆ ಬೇರೆ ಬೇರೆ ಕೆಲಸ ಮಾಡುತ್ತಿರುವುದು ಶೋಚನೀಯವಾಗಿದೆ ಈ ಹುದ್ದೆಯನ್ನೇ ಅವಲಂಬಿತರಾಗಿರುವ ಎಷ್ಟೋ ಕುಟುಂಬಗಳು ಮಕ್ಕಳ ಶಾಲೆ ಫೀಜ್,ಬಟ್ಟೆಬರೆ ಒಟ್ಟಿನಲ್ಲಿ ಕುಟುಂಬ ನಿರ್ವಹಿಸಲು ಪರದಾಡುವಂತಾಗಿದೆ.

ದೇಶದಲ್ಲೇ ಪ್ರಥಮವಾಗಿ ?ರಾಷ್ಟ್ರೀಯ ಶಿಕ್ಷಣ ನೀತಿ?(ಓಇಕ)ಯನ್ನು ಜಾರಿಗೊಳಿಸಲು ಆತುರ ತೋರುವ ಹಿಂದಿನ ಬಿಜೆಪಿ ಸರಕಾರವು ಅತಿಥಿ ಉಪನ್ಯಾಸಕರ ಸಮಸ್ಯೆಯನ್ನು ಆಲಿಸದೆ ವಸ್ತುಶಃ ಮರೆತು ಬಿಟ್ಟಿತ್ತು ಇತ್ತೀಚೆಗೆ ನಡೆದ ಅಧಿವೇಶನದಲ್ಲಿ ಮಾನ್ಯ ಸಭಾಪತಿಗಳು,ಉನ್ನತ ಶಿಕ್ಷಣ ಸಚಿವರು, ಶಾಸಕರ ಆದಿಯಾಗಿ ಹೊಸ ವಿಶ್ವವಿದ್ಯಾಲಯಗಳ ಬಗ್ಗೆ ವಿಶ್ವವಿದ್ಯಾಲಯಗಳ ಗುಣಮಟ್ಟದ ಬಗ್ಗೆ ಹೊಸ ಶಿಕ್ಷಣ ನೀತಿಯ ಬಗ್ಗೆ ಸಾಕಷ್ಟು ಚರ್ಚೆಗಳನ್ನು ಮಾಡಿದರು ಆದರೆ ಉಪನ್ಯಾಸಕರುಗಳ ನೇಮಕಾತಿ ಬಗ್ಗೆ,ಕಳೆದ ಸುಮಾರು ಎರಡು ದಶಕಗಳಿಂದ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶೇ.70-80 ರಷ್ಟು ಇರುವ ಅತಿಥಿ ಉಪನ್ಯಾಸಕರ ಬಗ್ಗೆ ಕಿಂಚಿತು ಚರ್ಚೆ ಮಾಡದಿರುವುದು ಖೇದಕರ ವಿಚಾರವಾಗಿದೆ.



ಅತಿಥಿ ಉಪನ್ಯಾಸಕರ ಸಮಸ್ಯೆಯ ಕುರಿತು ಅಂದಿನ ಸರಕಾರದ ಗಮನ ಸೆಳೆದಿದ್ದ ವಿರೋಧ ಪಕ್ಷದ ನಾಯಕರಾಗಿದ್ದ ಹಾಗೂ ಇಂದಿನ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಹೇಬ್ರು ಕಳೆದ ಸರಕಾರದ ಅಧಿವೇಶನದಲ್ಲಿಅತಿಥಿ ಉಪನ್ಯಾಸಕರ ಜ್ವಲಂತ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿ ಸರಕಾರಿ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಿ ಅವರಿಗೂ ಹತ್ತು ಹದಿನೈದು ವರ್ಷಗಳ ಅನುಭವವಿದೆ ಕಾಲೇಜುಗಳನ್ನು ಖಾಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಹೇಗಿದ್ದರೂ ಉಪನ್ಯಾಸಕರು ಬೇಕೆ ಬೇಕು,ಅವರಲ್ಲಿ ಡಬಲ್ ಡಿಗ್ರಿ,ಪಿಹೆಚ್.ಡಿ,ನೀಟ್ ಮಾಡಿಕೊಂಡಿದ್ದಾರೆ ಅವರ ಅನುಭವ ಮತ್ತು ಮಾನವೀಯ ಆಧಾರದ ಮೇಲೆ ಅವರನ್ನು ಖಾಯಂ ಮಾಡಿ ಎಂದು ಧ್ವನಿ ಎತ್ತಿ ಅಂದಿನ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆದಿದ್ದರು.ಪ್ರಸ್ತುತ ಅವರದೇ ಸರಕಾರ ಇದೆ ಯಾಕೆ ಇನ್ನೂ ಅತಿಥಿ ಉಪನ್ಯಾಸಕರ ಬಗ್ಗೆ ನಿರ್ಲಕ್ಷ್ಯ ಧೋರಣೆ ತೋರಿಸುತ್ತಿರುವುದು ಎಷ್ಟು ಸರಿ? ಎನ್ನುವುದು ಪ್ರಶ್ನೆಯಾಗಿದೆ.

ಸರಿಯಾಗಿ ಪಾಠ ಪ್ರವಚನ ಮಾಡೋದು ಇವರೇ

ರಾಜ್ಯದ 430 ಪ್ರಥಮ ದರ್ಜೆ ಕಾಲೇಜುಗಳಲ್ಲಿ 6 ಸಾವಿರ ಖಾಯಂ ಉಪನ್ಯಾಸಕರಿದ್ದಾರೆ ಆದರೆ ಇಷ್ಟೇ ಉಪನ್ಯಾಸಕರಿಂದ ಪಾಠ ಪ್ರವಚನ ಸಾಧ್ಯವಿಲ್ಲ ಹೀಗಾಗಿ ಹೆಚ್ಚುವರಿ ಕಾರ್ಯಭಾರಕ್ಕೆ 10 ಸಾವಿರಕ್ಕೂ ಆಧಿಕ ಸಂಖ್ಯೆಯಲ್ಲಿ ಅತಿಥಿ ಉಪನ್ಯಾಸಕರನ್ನು ಕಾಲೇಜು ಶಿಕ್ಷಣ ಇಲಾಖೆಯಿಂದ ನೇಮಿಸಿಕೊಳ್ಳಲಾಗಿದೆ ನಿಜವಾದ ಪಾಠ ಪ್ರವಚನ ನಡೆಯುತ್ತಿರುವುದು ಈ ಅತಿಥಿ ಉಪನ್ಯಾಸಕರಿಂದಲೇ,ಇಂತಹ ಸಮೂಹಕ್ಕೆ ಸರಕಾರಗಳು ನಡೆಸುಕೊಳ್ಳುತ್ತಿರುವ ಪರಿ ಅಷ್ಟಿಷ್ಟಲ್ಲ,ಈ ಹುದ್ದೆ ಪ್ರಾರಂಭವಾದಾಗಿನಿಂದ ಇಂದಿನವರೆಗೂ ಶೋಷಣೆಗೆ ಒಳಗಾಗುತ್ತಿರುವುದು ನಮಗೆ ಜ್ವಲಂತ ನಿದರ್ಶನಗಳು ಕಾಣುತ್ತವೆ.

ಈಗ್ಗೆ ಸುಮಾರು ಮೂರು ನಾಲ್ಕು ವರುಷಗಳ ಹಿಂದೆ ಮಹಾಮಾರಿ ಕರೋನಾ ಸಂದರ್ಭದಲ್ಲಿ ಮಾರಕ ದಿನಗಳನ್ನು ನೆನಪಿಸಿಕೊಂಡರೆ ಈ ಹುದ್ದೇನೇ ಬೇಡ ಎನ್ನುವಷ್ಟರ ಮಟ್ಟಿಗೆ ಅವರ ಜೀವನ ಪಾತಾಳಕ್ಕೆ ಕೊಂಡೊಯ್ಯುದಿತ್ತು ಆ ಸಮಯದಲ್ಲಿ ಕೆಲಸ ಕಳೆದುಕೊಂಡು ಹೊಟೇಲ್,ಬಾರ್,ರೆಸ್ಟೋರೆಂಟ್ ಗಳಲ್ಲಿ ಸರ್ವರ್ ಕೆಲಸಕ್ಕೆ ಕೈ ಚಾಚುವಂತಾಯಿತು. ಚಾಕ್ ಪೀಸ್ ಹಿಡಿದು ಪಾಠ ಪ್ರವಚನ ಮಾಡುವ ಕೈಯಲ್ಲಿ ಮದ್ಯ ಬಾಟಲಿ ಹಿಡಿದು ಸಪ್ಲೇಯರ್ ಆಗಿ ಕೆಲಸ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವ ಅಮಾನವೀಯ ದೃಶ್ಯಗಳು ಎಲ್ಲಾ ಮೀಡಿಯಾಗಳಲ್ಲಿ ಹರಿದಾಡಿದವು ಆದರೂ ಸರಕಾರಕ್ಕೆ ಯಾವುದೂ ಕೇಳಿಸಲಿಲ್ಲ,ಕಾಣಿಸಲಿಲ್ಲ. ಹೋರಾಟ ಮನವಿ ನೀಡಿದಾಗ ಅಂದಿನ ಮುಖ್ಯಮಂತ್ರಿಯವರು ಮೂರು ತಿಂಗಳು ವೇತನ ನೀಡಿದರು.ಕರೋನ ಮಹಾಮಾರಿಗೆ ಸುಮಾರು ಅತಿಥಿ ಉಪನ್ಯಾಸಕರು ಸಾಲು ಸಾಲಾಗಿ ಈ ಮಹಾಮಾರಿಗೆ ತುತ್ತಾಗಿ ಆಸ್ಪತ್ರೆಗೆ ತೋರಿಸಿಕೊಳ್ಳಲು ಕಾಸಿಲ್ಲದೆ ಸಾವನ್ನಪ್ಪಿದರು. ಸರಕಾರಕ್ಕೆ ಸುದ್ದಿ ಗೊತ್ತಿದ್ದರೂ ಗೊತ್ತಿಲ್ಲದಂತೆ ಜಾಣ ಕುರುಡುತನದಿಂದ ವರ್ತಿಸಿ ಅತಿಥಿ ಉಪನ್ಯಾಸಕರ ಸಮೂಹಕ್ಕೆ ಅನ್ಯಾಯವೆಸಗಿದೆ ಇಂತಹ ಅಭದ್ರತೆಯ ಹುದ್ದೆ ಅತಿಥಿ ಉಪನ್ಯಾಸಕರ ಸಮೂಹಕ್ಕೆ ಇಂತಹ ಮಾನಸಿಕ ಕಿರುಕುಳ ಹುದ್ದೆಯಿಂದ ಜೀವನ ನಡೆಸಲು ಮಾರಕವಾಗಿದೆ ಎನ್ನುವುದು ಅತಿಥಿ ಉಪನ್ಯಾಸಕರ ಅಳಲು.

ಹಿಂದಿನ ಬಿಜೆಪಿ ಸರಕಾರವು ಅತಿಥಿ ಉಪನ್ಯಾಸಕರ ಪ್ರತಿಭಟನೆ,ಹೋರಾಟದ ಮನವಿಯನ್ನು ಸ್ವೀಕರಿಸಿ ತಕ್ಕಮಟ್ಟಿಗಾದರೂ ಸರಕಾರವು ಕೊಂಚ ಸ್ಪಂದಿಸಿ ಅವರ ವೇತನ ಹೆಚ್ಚಿಸಿ ನಿಟ್ಟುಸಿರು ಬಿಡುವಂತೆ ಸಡಿಲಗೊಳಿಸಿತ್ತು.ಪಾರ್ಟ್ ಟೈಂ ಇಂದ ಫುಲ್ ಟೈಂ ಅಂದರೆ 15,19 ಗಂಟೆ ಮಾಡಿ 32 ಸಾವಿರ 28 ಸಾವಿರ 26 ಸಾವಿರ ಮೂರು ಸ್ಲಾಬ್ ಗಳನ್ನು ಮಾಡಿ ವೇತನ ನೀಡಿ ಅವರ ಬಾಳಿಗೆ ನಾಂದಿ ಹಾಡಿದ್ದಾರೆ. ಎಂದು ಸ್ವಲ್ಪ ಮಟ್ಟಿಗಾದರೂ ಸಂತೋಷ ಪಡುವಂತೆ ಮಾಡಿದೆ ಎಂದು ಹೇಳುತ್ತಿದ್ದಾರೆ. ವೇತನ ಹೆಚ್ಚಿಸಿರುವುದು ಅತಿಥಿ ಉಪನ್ಯಾಸಕರ ಬಾಳಿಗೆ ಅಭಿಲಾಷೆ ಮೂಡಿಸಿದೆ ಈ ಹುದ್ದೆಯನ್ನೆಅವಲಂಬಿತ ಎಷ್ಟೋ ಉಪನ್ಯಾಸಕರು ಇನ್ನೂ ನಮ್ಮನ್ನು ಮುಂದಿನ ದಿನಮಾನದಲ್ಲಿ ಸರಕಾರವೂ ಖಾಯಂ,ಸೇವಾ ಸಕ್ರಮಾತಿ,ಭದ್ರತೆ ಕೊಡುತ್ತಾರೆ,ಮಾಡುತ್ತಾರೆ ಎನ್ನುವ ಆಕಾಂಕ್ಷೆ ಹೆಚ್ಚಿಸಿತು ಪಾಠ ಪ್ರವಚನ ಮಾಡಲು ಹುರಿದುಂಬಿಸುವಂತಾಯಿತು ಹೆಚ್ಚು ಹೆಚ್ಚು ಪ್ರಭಾವಿಯಾಗಿ ಕಾಲೇಜಿನ ಒಂದು ಭಾಗ ಎನ್ನುವಂತೆ ಬಾಡಿ ಹೋದ ಅವರ ಮನಸ್ಸು ಅರಳುವಂತೆ ಮಾಡಿತು ವಿದ್ಯಾರ್ಥಿಗಳ ಜೊತೆ ಇನ್ನೂ ಹೆಚ್ಚಿನ ಅನೋನ್ಯತೆಯಿಂದ ಇರುವಂತೆ ಮಾಡಿತು.

ರವಿಂದ್ರನಾಥ ಟ್ಯಾಗೋರ್ ರವರು ಹೇಳಿರುವಂತೆ "ಬೋಧನೆಯ ಮುಖ್ಯ ಉದ್ದೇಶವು ವಿವರಣೆ ನೀಡುವುದಲ್ಲ ವಿದ್ಯಾರ್ಥಿಗಳ ಮನಸ್ಸಿನ ಬಾಗಿಲುಗಳನ್ನು ತಟ್ಟುವುದು"ನಿಜವಾಗಿಯೂ ಫುಲ್ ಟೈಂ ಅತಿಥಿ ಉಪನ್ಯಾಸಕರು ವಿದ್ಯಾರ್ಥಿಗಳ ಮನಸ್ಸನ್ನು ತಟ್ಟಿ ಓದುವಿಕೆಯಲ್ಲಿ ಹೆಚ್ಚಿನ ಗಮನ ಹರಿಸುವಂತೆ ಪ್ರೇರೆಪಿಸಿ ಗುಣಮಟ್ಟ ಶಿಕ್ಷಣ ನೀಡುವಲ್ಲಿ ಯಶಸ್ವಿಯಾದರು,ಆದರೆ ಸರಕಾರಗಳು ನಮ್ಮ ಬೇಡಿಕೆ ಈಡೇರಿಸಲು ಯಶಸ್ವಿಯಾಗಲಿಲ್ಲ.

2022-23 ಶೈಕ್ಷಣಿಕ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯು ಕೌನ್ಸಿಲಿಂಗ್ ಮೂಲಕ ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತಿರುವ ನಡುವೆಯೇ ಕೇವಲ ಏಳು ತಿಂಗಳು ಅವರ ಸೇವೆಯನ್ನು ಬಳಸಿಕೊಂಡು ಮತ್ತೆ ಈ ವರ್ಷ 2023-24ಶೈಕ್ಷಣಿಕ ಸಾಲಿನಲ್ಲಿ ಮತ್ತೆ ಹೊಸ ಅರ್ಜಿಯನ್ನು ಕರೆದು ಪ್ರಸ್ತುತ ವರ್ಷದಿಂದ ಕಲ್ಯಾಣ ಕರ್ನಾಟಕ ಮೀಸಲಾತಿಯನ್ನು ನೀಡಿ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಿಕೊಂಡಿದೆ. ಇದು ಯಾಕೆ ಎನ್ನುವುದು ಹಲವು ಅತಿಥಿ ಉಪನ್ಯಾಸಕರ ಪ್ರಶ್ನೆಯಾಗಿದೆ ಇಲಾಖೆಯ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಕಲ್ಯಾಣ ಕರ್ನಾಟಕ ಮೀಸಲಾತಿ ನೀಡಿರುವುದು ಶ್ಲಾಘನೀಯ ಆದರೆ ಈ ಮೀಸಲಾತಿಯು ಸರಿಯಾದ ಮಾನದಂಡಗಳನ್ನು ಪಾಲನೆ ಮಾಡಿಲ್ಲ ಎನ್ನುವ ಕೂಗು ಎಲ್ಲೆಡೆ ಕೇಳಿಬರುತ್ತಿದೆ ಪ್ರಸ್ತುತ ಆಯ್ಕೆಯಾಗಿರುವ ಉಪನ್ಯಾಸಕರನ್ನು ಎಲ್ಲರನ್ನೂ ಕರ್ತವ್ಯಕ್ಕೆ ವರದಿ ಮಾಡಿಸಿಕೊಂಡು ಅವರನ್ನು ಬಳಸಿಕೊಳ್ಳದೇ ವಿಶ್ವವಿದ್ಯಾಲಯಗಳ ಕ್ಯಾಲೆಂಡರ್ ಆಫ್ ಇವೆಂಟ್ ನಲ್ಲಿ ಯಾವುದು ಮೊದಲೋ ಅಷ್ಟಕ್ಕೆ ಸೀಮಿತಗೊಳಿಸಿ ರಾಜ್ಯದ ಕೆಲವು ವಿ ವಿ ಯಲ್ಲಿ ಇನ್ನೂ ಸೆಮಿಸ್ಟರ್ ಪರೀಕ್ಷೆಗಳು ನಡಿಯುತ್ತಿದೆ,ಇನ್ನೂ ಈ ವರ್ಷ ಪ್ರವೇಶ ಪಡೆದಿರುವ ಪ್ರಥಮ ಸೆಮ್ ಬಿಎ ಬಿಕಾಂ ಬಿಎಸ್ಸಿ ಬಿಸಿಎ ತರಗತಿಗಳು ಮಾತ್ರ ನಡೆಯುತ್ತಿವೆ ಪ್ರಥಮ ಸೆಮ್ ಕಾರ್ಯಭಾರಕ್ಕೆ ಅನುಗುಣವಾಗಿ ಕೆಲವೇ ಕೆಲವು ಅತಿಥಿ ಉಪನ್ಯಾಸಕರನ್ನು ಕೆಲಸಕ್ಕೆ ತಗೊಂಡು ಉಳಿದ ಉಪನ್ಯಾಸಕರನ್ನು ಉಳಿದ ಸೆಮ್ ತರಗತಿ ಪ್ರಾರಂಭ ಆದಾಗ ನಿಮ್ಮನ್ನು ತಗೊಳ್ಳುತ್ತೇವೆ ಎಂದು ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಯಾಕೆ ಸರ್ ಹೀಗೆ ಎಂದು ಕೇಳಿದಾಗ ಇಲಾಖೆಯಿಂದ ನಮಗೆ ಮೌಖಿಕ ಆದೇಶ ಇದೆ ಎಂದು ಹೇಳುತ್ತಿದ್ದಾರೆ ಒಂದು ಕಡೆ ಸುಣ್ಣ ಒಂದು ಕಡೆ ತುಪ್ಪ ಈ ರೀತಿಯ ತಾರತಮ್ಯ ಮಾಡಿ ನಮ್ಮನ್ನು ಮುಜುಗರಕ್ಕೆ ಒಳಪಡಿಸಿದೆ ಎಂದು ಹಲವು ಉಪನ್ಯಾಸಕರು ನಮ್ಮನ್ನು ಇಲಾಖೆ ಬೀದಿಗೆ ತಳ್ಳಿದೆ ಎಂದು ಪುನಃ ಇಲಾಖೆಯ ವಿರುದ್ಧ ಪ್ರತಿಭಟಿಸಿ ಆಗ್ರಹಿಸುತ್ತಿದ್ದಾರೆ ರಾಜ್ಯ ನಿಯೋಗವು ಉನ್ನತ ಶಿಕ್ಷಣ ಸಚಿವರನ್ನು ಭೇಟಿ ಮಾಡಿ ಈ ಧೋರಣೆಯನ್ನು ತಕ್ಷಣದಿಂದಲೇ ಕೈ ಬಿಟ್ಟು ಸಮಸ್ಯೆಯನ್ನು ಬಗೆಹರಿಸಲು ಮನವಿ ಸಲ್ಲಿಸಿದ್ದಾರೆ.

ಪ್ರಸ್ತುತ ಕಾಂಗ್ರೆಸ್ ಸರಕಾರವು ತಮ್ಮ ಚುನಾವಣೆ ಪೂರ್ವ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿರುವಂತೆ ರಾಜ್ಯದ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಯೋಜನೆ ರೊಪಿಸಲಾಗುವುದು ಎಂದು ಪ್ರಕಟಿಸಿದೆ ಈ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಸಾಮಾಜಿಕ ನ್ಯಾಯ ಒದಗಿಸುವಲ್ಲಿ ನುಡಿದಂತೆ ನಡೆಯುವ ಸರಕಾರ ನಮ್ಮನ್ನು ಇಂದಲ್ಲಾ ನಾಳೆ ಯಶಸ್ವಿಯಾಗಿ ಖಾಯಂ ಮಾಡೇ ಮಾಡುತ್ತಾರೆ ಎನ್ನುವ ಆಶಾಭಾವನೆಯನ್ನು ಹಾಗೂ ಭರವಸೆಯನ್ನು ಇಟ್ಟುಕೊಂಡಿದ್ದೇವೆ ಎಂದು ಅತಿಥಿ ಉಪನ್ಯಾಸಕರುಗಳು ಹೇಳುತ್ತಿದ್ದಾರೆ.

**ಲೇಖಕರು-ಶ್ರೀ ಶಿವಕುಮಾರ್ ಎಲ್**
**ಉಪನ್ಯಾಸಕರು, ಹಗರಿಬೊಮ್ಮನಹಳ್ಳಿ.**

**ಕರ್ನಾಟಕದ ಪ್ರತಿ ತಾಲೂಕಿನಲ್ಲಿ ಪಾರ್ಟ್ ಟೈಮ್ (ಗೌರವ ಧನ)**
**ಫುಲ್ ಟೈಮ್‌ಗೆ (ಸಂಬಳ) ಸ್ಥಳೀಯ ವರದಿಗಾರರಾಗಿ ಕಾರ್ಯ ನಿರ್ವಹಿಸಲು ಆಸಕ್ತ ಯುವಕ-ಯುವತಿಯರು ತಮ್ಮ ಹೆಸರು ಹಾಗೂ ತಾಲ್ಲೂಕು ವಾಟ್ಸ್ ಆಪ್ ಅಥವಾ ಕರೆ ಮಾಡಿ**
**ಬಸವರಾಜ ಬಳಿಗಾರ** ಸಂಪಾದಕರು,
**'ಕರುನಾಡ ಕಂದ'** ಮೊ : 9986366909
**ಈಗಾಗಲೇ ಮಾಧ್ಯಮದ ಅನುಭವ ಇದ್ದವರು ಹಾಗೂ ಹೊಸದಾಗಿ ಸೇರಬಯಸುವವರು ಸಂಪರ್ಕಿಸಬಹುದು.**
**ನಿಮ್ಮ ಸ್ಥಳೀಯ ಸುದ್ದಿ ಹಾಗೂ ಎಲ್ಲಾ ರೀತಿಯ ಜಾಹೀರಾತುಗಳಿಗಾಗಿ ಕರೆ ಮಾಡಿ 9986366909**


ಕರುನಾಡ ಕಂದ
ಸಂಪುಟ–03 | ಸಂಚಿಕೆ–02
ದಿನಾಂಕ: 16–11–2023 | ಪುಟಗಳು: 16

# ನಹೀ ಜ್ಞಾನೇನ ಸದೃಶಂ..!!!

ಶಿಕ್ಷಣ ಅಂದರೆ ಜ್ಞಾನ.ಈ ಜ್ಞಾನವು ಪ್ರಪಂಚದಲ್ಲಿಯೇ ಅತ್ಯಮೂಲ್ಯವಾದ ಸಿರಿ–ಸಂಪತ್ತು ಇದರಿಂದಲೇ ಜೀವನದಲ್ಲಿ ಸುಖ,ಶಾಂತಿ,ನೆಮ್ಮದಿ ಹಾಗೂ ಎಲ್ಲಾ ಪ್ರಕಾರದ ಅಭ್ಯುದಯಕ್ಕೂ ಕೂಡಾ ಶಿಕ್ಷಣವೇ ಕಾರಣ, ವಿಕಾಸವಾದ ಸಿದ್ಧಾಂತದ ಪ್ರಕಾರ ಕಾಲ ಕಾಲಕ್ಕೆ ಮಾನವನ ದೇಹವಷ್ಟೇ ವಿಕಾಸವಾಗಲಿಲ್ಲ. ಅದರೊಂದಿಗೆ ಜ್ಞಾನವೂ ವಿಕಾಸವಾಯಿತು ತನು, ಮನ,ಬುದ್ಧಿ ಇವು ನಮ್ಮಲ್ಲಿರುವ ಜ್ಞಾನಸಾಧನಗಳು. ಅವುಗಳನ್ನು ನಾವು ಲೌಕಿಕ ಸಿರಿ ಸಂಪದದ ಗಳಿಕೆಗಾಗಿ ಬಳಸುತ್ತೇವೆ ಹಗಲು ರಾತ್ರಿ ಪ್ರಾಪಂಚಿಕ ಸುಖಕ್ಕಾಗಿಯೇ ದುಡಿಯುತ್ತೇವೆ ಆದರೆ ಮಹಾತ್ಮರು ಸತ್ಯದ ಸಂಶೋಧನೆಗಾಗಿ,ಜ್ಞಾನವೃದ್ಧಿಗಾಗಿ ಹಗಲು ರಾತ್ರಿ ಶ್ರಮಿಸುತ್ತಾರೆ ಅವರು ಪಡೆದುಕೊಂಡ ಶಿಕ್ಷಣದ ಪರಿಶ್ರಮದಿಂದ ಪ್ರಪಂಚವೇ ಸಂಪದ್ಭರಿತವಾಯಿತು ಹೀಗಾಗಿ ಶಿಕ್ಷಣ ಅತ್ಯಗತ್ಯವಾಗಿ ಇಂದು ಎಲ್ಲರಿಗೂ ಸಮಾನ ರೀತಿಯಲ್ಲಿ ಸಿಗುವಂತಾದಾಗ ಮಾತ್ರ ಸಾಮಾಜಿಕ ಪಿಡುಗುಗಳು ನಿರ್ನಾಮವಾಗುತ್ತವೆ. ಅದಕ್ಕೇ ಹೇಳುವುದೇನೆಂದರೆ "ನಹೀ ಜ್ಞಾನೇನ ಸದೃಶಂ..!!" ಅಂದರೆ ಜ್ಞಾನಕ್ಕಿಂತ ಮಿಗಿಲಾದದ್ದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ ಎಂಬುದು ಅಕ್ಷರಶಃ ಸತ್ಯವಾದ,ನ್ಯಾಯೋಚಿತವಾದ ಮಾತು.

ಇಂದಿನ ಆದುನಿಕ ಜಗತ್ತಿನಲ್ಲಿ ಸಾಧನೆಗೆ ನೂರಾರು ಅವಕಾಶವಿದೆ,ಸಾವಿರಾರು ದಾರಿಗಳಿವೆ. ಕೈಯಲ್ಲಿಯೇ ಜಗತ್ತನ್ನು ನೋಡಬಹುದಾದಷ್ಟು ಅದು ಕಿರಿದಾಗಿದೆ ಎಂದೆನಿಸುತ್ತದೆ.ಹಿಂದಿನ ಕಾಲದಲ್ಲಿ ಒಂದು ಸುದ್ದಿಯನ್ನು ತಲುಪಿಸಲು ತಿಂಗಳಾನುಗಟ್ಟಲೇ ಸಮಯ ಬೇಕಾಗುತ್ತಿತ್ತು. ಇಂದಿನ ವೈಜ್ಞಾನಿಕ ಯುಗದಲ್ಲಿ ವಿದೇಶದಲ್ಲಿರುವ ವ್ಯಕ್ತಿಗಳನ್ನು ಕ್ಷಣಾರ್ಧದಲ್ಲಿಯೇ ನೋಡಬಹುದಾದ ಪ್ರಬಲವಾದ ಸಂಪರ್ಕ ಸೇತು ಇಂದು ನಮ್ಮಲ್ಲಿದೆ.

ಆಗಿನ ಕಾಲದಲ್ಲಿ ಯಾವುದಾದರೊಂದು ವಿಷಯದ ಬಗ್ಗೆ ತಿಳಿದುಕೊಳ್ಳಲು ಗ್ರಂಥಾಲಯಗಳಿಗೆ ಅಥವಾ ವಿಷಯ ತಜ್ಞರ ಮೊರೆ ಹೋಗಬೇಕಾಗುತ್ತಿತ್ತು. ಆದರೆ ಇಂದು ಗೂಗಲ್ ಎಂಬ ತಂತ್ರಾಂಶವು ಎಲ್ಲಾ ಮಾಹಿತಿಯನ್ನು ನೀಡುತ್ತಿದೆ ಅದರೂ ಕೂಡಾ



ಮೇಡಂ ಕ್ಯೂರಿ ಒಬ್ಬ ಮಹಾವಿಜ್ಞಾನಿ ಆದರೆ ಅವರಿಗೆ ಮೈತುಂಬ ಬಟ್ಟೆ,ಹೊಟ್ಟೆ ತುಂಬ ಊಟವೂ ಒಮ್ಮೊಮ್ಮೆ ಇರುತ್ತಿರಲಿಲ್ಲ ಅಂಥ ಬಡತನದಲ್ಲಿಯೇ ಅವಳು ಅದೆಷ್ಟು ನಿಷ್ಠೆಯಿಂದ ಸತ್ಯದ ಸಂಶೋಧನೆಗೆ ತೊಡಗಿದಳು ಅದರಿಂದ ಅವರ ಮನೆತನಕ್ಕೆ ಐದು ನೊಬೆಲ್ ಪಾರಿತೋಷಕ, ಪುರಸ್ಕಾರಗಳು ದೊರೆತವು. ಆಕೆಗೆ ಎರಡು, ಗಂಡನಿಗೆ ಒಂದು,ಮಗಳಿಗೆ ಒಂದು,ಅಳಿಯನಿಗೂ ಒಂದು.ಬಹುಶಃ ಪ್ರಪಂಚದಲ್ಲಿಯೇ ಇದೊಂದು ಅಪರೂಪದ ಘಟನೆ ಇದು ಶಿಕ್ಷಣದ ಅಗಾಧವಾದ ಶಕ್ತಿ ಎಂಥದ್ದು ಎನ್ನುವದನ್ನು ಸಾರುವ ಅತ್ಯುತ್ತಮ ನಿದರ್ಶನವಾಗಿದೆ.

ಸಾಧಿಸುವ ತೀವ್ರತೆ ಹಿಂದೆಂದಿಗಿಂತಲೂ ಇಂದು ಕ್ಷೀಣವಾಗುತ್ತಿದೆ ಎಂದೆನಿಸುತ್ತದೆ ಕಾರಣ ಹುಡುಕುತ್ತಾ ಹೋದಾಗ ಸಿಕ್ಕ ಒಂದು ವಿಶ್ಲೇಷಣೆಯ ಪ್ರಕಾರ ನಾವು ಇನ್ನೊಬ್ಬರ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿರುವುದೇ ಮುಖ್ಯ ಕಾರಣ ಎಂದು ದೃಡೀಕರಿಸಲಾಗಿದೆ.

ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳಬೇಕು ನಮ್ಮ ಭವಿಷ್ಯವನ್ನು ಇನ್ನೊಬ್ಬರು ಬಂದು ಬದಲಾಯಿಸುತ್ತಾರೆ ಎಂಬ ಭ್ರಮೆಯಲ್ಲಿ ಕುಳಿತರೆ ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ.

ಅನಂತ ಭವಿಷ್ಯ ನಮ್ಮೆದುರಿಗೇ ಇದೆ ಪ್ರತಿಯೊಂದು ಮಾತು,ಆಲೋಚನೆ,ಕೆಲಸ ಮಾಡುವ ಕ್ರಮಗಳೆಲ್ಲವನ್ನೂ ಧನಾತ್ಮಕವಾಗಿ ತೆಗೆದುಕೊಂಡಾಗ ಅವು ನಮಗಾಗಿ,ನಮ್ಮ ಅವಕಾಶಕ್ಕಾಗಿ ಕಾದುಕುಳಿತಿರುತ್ತವೆ.

ಕೆಟ್ಟ ಆಲೋಚನೆ,ಕೆಟ್ಟ ಕೆಲಸ ಇವು ರಕ್ಕಸರಂತೆ ನಮ್ಮ ಮೇಲೆ ಬೀಳಲು ಕಾಯ್ದುಕೊಂಡಿರುತ್ತವಂತೆ ಆದ್ದರಿಂದ ನಾವು ಒಳ್ಳೆಯ ಆಲೋಚನೆ,ಒಳ್ಳೆಯ ಕಾರ್ಯಗಳನ್ನು ಮಾಡುತ್ತಾ ಹೋದರೆ ಇವು ಸಾವಿರಾರು ದೇವದೂತರ ಶಕ್ತಿಯೊಂದಿಗೆ ನಮ್ಮನ್ನು ಎಂದೆಂದಿಗೂ ರಕ್ಷಿಸಲು ಕಾಯ್ದುಕೊಂಡಿರತ್ತವೆ ಎನ್ನುವ ಅಂಶವೇ ಉತ್ತೇಜನಕಾರಿಯಾದ ಭರವಸೆಯಾಗುತ್ತದೆ ಹಾಗಾಗಿ ಒಳ್ಳೆಯ ಕೆಲಸಕ್ಕೆ ಮುಂದಾಗಿ,ಹೇಡಿಯಂತೆ ಆತ್ಮಹತ್ಯೆಯಂಥಹ ಹೀನ ಕೃತ್ಯಕ್ಕೆ ಎಂದೆಂದೂ ಮನಸ್ಸು ಮಾಡಬೇಡಿ. ಸಾದಿಸುವ ಛಲವನ್ನು ರೂಡಿಸಿಕೊಳ್ಳಲು ನಾವು ನಿರಂತರ ಪ್ರಯತ್ನವನ್ನು ಮಾಡುತ್ತಲೇ ಇರಬೇಕು. ಅದು ಕ್ಷಣಮಾತ್ರದಲ್ಲಿಯೇ ದುತ್ತೆಂದು ಸಿಕ್ಕುಬಿಡುವ ನಿಧಿಯಲ್ಲ ಹಾಗಾಗಿ ಸಾಧನೆಯ ಹಾದಿ ಸುಗಮವಾಗಲು ಭಗಿರಥ ಪ್ರಯತ್ನವು ಪ್ರಾಥಮಿಕ ಹಂತದಿಂದಲೇ ಪ್ರಾರಂಭವಾಗಬೇಕು ಆಗ ಮಾತ್ರ ಸಾಧನೆಯ ಶಿಖರವನ್ನೇರುವುದು ಸುಲಭವಾಗುತ್ತದೆ.

ಮತ್ಸರ ಬಾವನೆ ಬೇಡ:ಯಾರಾದರೂ ಸಾಧನೆ ಮಾಡಿ ಸಫಲರಾದಾಗ ಮತ್ಸರ ಪಡದೇ ಆ ಸಾಧನೆಯ ಹಿಂದಿರುವ ಶ್ರಮ ಮತ್ತು ಸಾರ್ಥಕತೆಯನ್ನು ಅರಿಯಬೇಕು, ಅರ್ಥೈಸಿಕೊಳ್ಳಬೇಕು ಬಡತನ ಬವಣೆಯಲ್ಲಿ ನೊಂದು ಬೆಂದು ಅದೆಷ್ಟೋವ್ಯಕ್ತಿಗಳು ಸಾಧನೆ ಮಾಡಿ ಸಾರ್ಥಕ ಬದುಕು ಸಾಗಿಸುತ್ತಿರುತ್ತಾರೆ. ಅಂಥವರನ್ನು ಆದರ್ಶವಾಗಿಟ್ಟುಕೊಂಡು ಜೀವನ ಸಾಗಿಸಿದರೆ ಯಶಸ್ಸು ಸಿಗುವುದೇನು ಕಷ್ಟವಾಗಲ್ಲ ಸಾಧಿಸಿದವರ ಶ್ರಮಕ್ಕೆ ಹೆಮ್ಮೆ ಪಡಬೇಕೇ ಹೊರತು ಹೊಟ್ಟೆಕಿಚ್ಚು ಪಟ್ಟರೆ ಸಿಗುವ ಲಾಭವಾದರೂ ಏನು? ಅವರ ಕಾಲು ಹಿಡಿದು ಕೆಳಕ್ಕೆ ಬೀಳಿಸುವ ಪ್ರಯತ್ನಕ್ಕೆ ಕೈ ಹಾಕಿದರೆ ಅವರೆಂದೂ ಮಣಿಯುವುದಿಲ್ಲ. ಯಾಕೆಂದರೆ ಬಡತನವು ಅವರಿಗೆ ಸೋಲು,ಹತಾಶೆ, ನೋವು ಹಾಗೂ ಕಷ್ಟಗಳನ್ನು ಹೇಗೆ ಮೆಟ್ಟಿ ನಿಲ್ಲಬೇಕು ಎಂಬುದನ್ನು ಕಲಿಸಿರುತ್ತದೆ ಅದಕ್ಕೆ ಹೇಳುವುದು"ಬಡತನವು ಆರನೇಯ ಜ್ಞಾನೇಂದ್ರಿಯವಿದ್ದಂತೆ"ಎಂದು.

ಅದೇ ಶ್ರೀಮಂತಿಕೆಯಲ್ಲಿ ಬೆಳೆದು ಲಂಚ ನೀಡಿ, ಭ್ರಷ್ಟಾಚಾರ ನಡೆಸಿ,ಅರ್ಹ ಪ್ರತಿಭೆಗಳಿಗೆ ದ್ರೋಹವೆಸಗಿ ಅನ್ಯಾಯದ ಹುದ್ದೆಯನ್ನು ಗಿಟ್ಟಿಸಿಕೊಂಡು ಮೋಸ ಮಾಡಿ ಬೆಳೆದ ವ್ಯಕ್ತಿಗೆ ಬದುಕಿನಲ್ಲಿ ಸ್ವಲ್ಪ ಕಷ್ಟವಾದರೂ ಸಹಿಸಿಕೊಳ್ಳುವುದು ಸಾಧ್ಯವೇ ಇಲ್ಲ...ಹೀಗಾಗಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸದೃಢರಾಗಿರುವ ಅನೇಕಾನೇಕ ಸಾಧಕರು ಬಡತನದ ಮತ್ತು ಗ್ರಾಮೀಣ ಪ್ರದೇಶದ ಹಿನ್ನಲೆಯುಳ್ಳವರಾಗಿರುತ್ತಾರೆ ಇಂಥಹ ಸದೃಡ ಸಾಧಕರಿಂದ ಮಾತ್ರ ರಾಷ್ಟ್ರದ ಪ್ರಗತಿ, ಅಭಿವೃದ್ಧಿಯಾಗಲು ಸಾಧ್ಯ ಎಂದು ಹೇಳಬಹುದಾಗಿದೆ ಉದಾಹರಣೆಗೆ ನಮ್ಮ ದೇಶಕ್ಕಾಗಿ ಪ್ರಾಣ ನೀಡಿ ದೇಶ ಸೇವೆಗೆ ಕಂಕಣಬದ್ಧರಾಗಿ ನಿಂತಿರುವ ಸೈನಿಕರ ಹಾಗೂ ರೈತರ ನೋವು,ಬವಣೆ,ಸಂಕಟ,ಕಷ್ಟ–ನಷ್ಟಗಳು ಪ್ರತಿಯೊಬ್ಬರಿಗೂ ಗೊತ್ತಾಗುವಂತೆ ಆಗಬೇಕು ಈ ಎಲ್ಲಾ ಸಂಗತಿಗಳನ್ನು ಅರ್ಥೈಸಲು ಮಾಧ್ಯಮಗಳು ಮುಂಚೂಣಿಯಲ್ಲಿ ಕಾರ್ಯಪ್ರವೃತ್ತರಾಗಬೇಕು. ಬಡವ–ಬಲ್ಲಿದ ಎಂಬ ಭೇದಭಾವವಿಲ್ಲದ ಸಮಾಜವು ನಿರ್ಮಾಣವಾಗಬೇಕಾದ ಅನಿವಾರ್ಯತೆ,ಅವಶ್ಯಕತೆ ಹಾಗೂ ಅಗತ್ಯತೆ ಇಂದಿನ ವಾಸ್ತವಿಕ ಜಗತ್ತಿಗೆ ತುರ್ತಾಗಿ ಬೇಕಾಗಿದೆ.

ಒಟ್ಟಿನಲ್ಲಿ ಈ ಪ್ರಪಂಚದ ಎಲ್ಲಾ ದೇಶಗಳಲ್ಲೂ ಅಪ್ರತಿಮ ಸೇವೆ ಸಲ್ಲಿಸುತ್ತಿರುವ ಕೋಟ್ಯಾಂತರ ಭಾರತೀಯ ಸಂಜಾತರೊಡಗೂಡಿ ಎಲ್ಲರೂ ಸುಂದರ,ಸದೃಡ ಭಾರತವನ್ನು ನಿರ್ಮಾಣ ಮಾಡಬೇಕಾದಲ್ಲಿ ವಿದ್ಯೆ,ಜ್ಞಾನ, ತಿಳುವಳಿಕೆ,ಪರಿಶ್ರಮದ ಸಾಧನೆಗೆ ಒತ್ತುಕೊಟ್ಟು ಪ್ರತಿಭಾವಂತ ಭಾರತವನ್ನು ಕಟ್ಟೋಣ, ಗಾಂಧಿಜಿಯವರ ರಾಮರಾಜ್ಯದ ಕನಸನ್ನು ನನಸು ಮಾಡಲು ಎಲ್ಲರೂ ಒಗ್ಗೂಡಿ ಕಾರ್ಯಪ್ರವೃತ್ತರಾಗೋಣ ಬನ್ನಿ...! ಭವ್ಯ ಭಾರತವನ್ನು ನಿರ್ಮಾಣ ಮಾಡೋಣ ಬನ್ನಿ...!!



**– ಶ್ರೀನಿವಾಸ.ಎನ್.**
**ದೇಸಾಯಿ,ಶಿಕ್ಷಕರು ತಲ್ಲೂರ**
**ಮೊ.ನಂ:– 9845808941.**

# ಕರಾಟೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ




ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ನಡೆದ ಎಂಟನೆಯ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಮಂಜು ಡೈಮಂಡ್ ಮಿಕ್ಸ್ ಮಾರ್ಷಲ್ ಆರ್ಟ್ಸ್ ಅಕಾಡೆಮಿ ಮುಂಡರಗಿ ಕರಾಟೆ ಕ್ರೀಡಾಪಟು ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಕವಲೂರು ಗ್ರಾಮದ ವಿರುಪಾಕ್ಷಪ್ಪ ತಂದೆ ಸುಂಕಪ್ಪ ಸುಂಕಣ್ಣವರು ಪದಕ ಪಡೆದು ಕೀರ್ತಿ ಹೆಚ್ಚಿಸಿದ್ದಾನೆ,ಗೃಹರಕ್ಷಕ ದಳದಲ್ಲಿ ಕೆಲಸ ಮಾಡುತ್ತಾ ಅದರ ಜೊತೆಗೆ ಕರಾಟೆ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿ ಕರಾಟೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಕಾತ ಪ್ರಥಮ ಸ್ಥಾನ ಮತ್ತು ಫೈಟ್ ಪ್ರಥಮ ಸ್ಥಾನ ಪಡೆದುಕೊಳ್ಳುವ ಮೂಲಕ ಜಯಗಳಿಸಿದ್ದಾನೆ ಕ್ರೀಡಾಪಟುವಿನ ಈ ಸಾಧನೆಗೆ ಮುಖ್ಯ ತರಬೇತುದಾರರಾದ ಮಾಸ್ಟರ್ ಮಂಜುನಾಥ ಭಜಂತ್ರಿ ಮತ್ತು ರಾಜೇಶ್ವರಿ ಮಂಜುನಾಥ ಭಜಂತ್ರಿ,ಕೃಷ್ಣ,ಅಭಿಷೇಕ,ಶ್ವಾತಿ ಕಡಾಕಡಿ,ಆಫ್ರಿನ್ ಬಾನು,ಚಕ್ಕಡಿ ಸುರೇಶ್ ಅವರು ಅಭಿನಂದಿಸಿದ್ದಾರೆ.

**ವರದಿ–ಹನುಮಂತಪ್ಪ ನಾಯಕ**

# ಸಮಸ್ಯೆಗಳನ್ನು ಬಗೆಹರಿಸಿ ಇಲ್ಲವಾದರೆ ಶಾಸಕರೇ ರಾಜೀನಾಮೆ ನೀಡಿ

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮುದಗಲ್ ಪಟ್ಟಣದಲ್ಲಿ ವಾರ್ಡ್ ನಂಬರ್ 6 ಚಲವಾದಿ ಓಣಿಯ ಜನತಾ ಕೇರಿಯ ನಿವಾಸಿಗಳು ಮೂಲಭೂತ ಸೌಕರ್ಯದಿಂದ ವಂಚಿತರಾಗಿದ್ದಾರೆ. ಪ್ರತಿಯೊಂದು ಮನೆಗಳಿಗೆ ಸರಿಯಾದ ವಿದ್ಯುತ್ ಸಂಪರ್ಕ ಇಲ್ಲ,ಚರಂಡಿ ಸಮಸ್ಯೆ,ತಗ್ಗು ಪ್ರದೇಶದಿಂದ ಕೂಡಿದ ಮನೆಗಳು,ಮಳೆಯಾದರೆ ಸಾಕು ಮನೆ ಮುಂದೆ ಚರಂಡಿನೀರು ನಿಲ್ಲುತ್ತದೆ.2018 ರ ವಿಧಾನಸಭಾ ಚುನಾವಣೆಯಲ್ಲಿ ಮಾನ್ಯ ಶ್ರೀ ಬಿ.ಎಸ್. ಹೂಲಗೇರಿ ಹಾಗೂ ಧರ್ಮಪತ್ನಿ ಮೂಲಭೂತ ಸೌಕರ್ಯಗಳು ಒದಗಿಸಿ ಕೊಡುತ್ತೇವೆ ಎಂದು ಸುಳ್ಳು ಆಶ್ವಾಸನೆ ಕೊಟ್ಟು ಗೆದ್ದರು 2023ರ ಚುನಾವಣೆಯಲ್ಲಿ ಶ್ರೀ ಮಾನಪ್ಪ ವಜ್ಜಲ್ ಹಾಗೂ ಸಂಬಂಧಿಕರು ಚುನಾವಣೆ ಪ್ರಚಾರದಲ್ಲಿ ಪ್ರತಿಯೊಂದು ಮನೆಗೆ ಭೇಟಿ ನೀಡಿ ಮೂಲಭೂತ



ಸೌಕರ್ಯಗಳನ್ನು ಒದಗಿಸಿ ಒದಗಿಸಿಕೊಡುತ್ತೇವೆ ಎಂದು ಸುಳ್ಳು ಭರವಸೆ ನೀಡಿದ್ದಾರೆ ಹಾಗೂ ಪುರಸಭೆಯ ಮುಖ್ಯ ಅಧಿಕಾರಿಗಳು ಮುದಗಲ್ಲಿನ ಜನತಾ ಕಾಲೋನಿಗೂ ನನಗೂ ಸಂಬಂಧವಿಲ್ಲವೆಂದು ಬೇಜವಾಬ್ದಾರಿತನದಿಂದ ಗಮನಹರಿಸುತ್ತಿಲ್ಲ ಆದ್ದರಿಂದ ಪ್ರತಿಯೊಂದು ಚಲವಾದಿ ಓಣಿಯ ಜನತಾ ಕಾಲೋನಿಯ ನಿವಾಸಿಗಳು ಲಿಂಗಸುಗೂರು ತಾಲೂಕಿನ ಶಾಸಕರಾದ ಮಾನಪ್ಪ ವಜ್ಜಲ್ ಅವರೇ ಆದಷ್ಟು ಬೇಗ ನಮ್ಮ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಿ ಇಲ್ಲ ನಿಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ವರದಿ–ಬಸವರಾಜ್ ಬಡಿಗೇರ್**

ಕರುನಾಡ ಕಂದ
ಸಂಪುಟ-03 । ಸಂಚಿಕೆ-02
ದಿನಾಂಕ: 16-11-2023 । ಪುಟಗಳು: 16

# 2023-24 ಅಂತರಾಷ್ಟ್ರ ಮಟ್ಟದ ಪಾನ್ ಮಾಸ್ಟರ್ಸ್ ಅಥ್ಲೆಟಿಕ್ ಗೇಮ್ಸಗೆ ಆಯ್ಕೆ




2023 ಕರ್ನಾಟಕ ಮಾಸ್ಟರ್ಸ್ ಗೇಮ್ಸ್ ಅಸೋಸಿಯೇಷನ್ ವತಿಯಿಂದ ದಿನಾಂಕ 4 ಮತ್ತು 5 ನವಂಬರ್ 2023 ರಂದು ಆರ್ ಎನ್ ಶೆಟ್ಟಿ ಕ್ರೀಡಾಂಗಣ ಧಾರವಾಡದಲ್ಲಿ ನಡೆಸಲಾಯಿತು.

ಇದರಲ್ಲಿ ಭಾಗವಹಿಸಿದ ರನ್ನರ್ಸ್ ಯುನಿಟಿ ಟೀಮ್ ಗಂಗಾವತಿಯ ಒಟ್ಟು ನಾಲ್ಕು ಸ್ಪರ್ಧಾಳುಗಳು ಭಾಗವಹಿಸಿ ಮೂರು ಚಿನ್ನದ ಪದಕ ಐದು ಬೆಳ್ಳಿ ಪದಕ ಪಡೆದು ವಿಜೇತರಾಗಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ ಎಂದು ಸಂಸ್ಥೆಯ ಮುಖ್ಯ ತರಬೇತಿದಾರರಾದ ಷಣ್ಮುಖಪ್ಪನವರು ತಿಳಿಸಿದ್ದಾರೆ.

40 ವರ್ಷದ ವಯೋಮಿತಿಯ ಒಳಗಡೆ ಷಣ್ಮುಖಪ್ಪನವರು 400 ಮೀಟರ್ ಓಟದಲ್ಲಿ ಬೆಳ್ಳಿ ಪದಕ.800 ಮೀಟರ್ ಓಟದಲ್ಲಿ ಬಂಗಾರದ ಪದಕ.

5000ಮೀಟರ್ ಓತದಲ್ಲಿ ಬೆಳ್ಳಿ ಪದಕ ಹಾಗೂ

10,000ಮೀಟರ್ ಓಟದಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ ಚಿರಂಜೀವಿ ಸಿದ್ದಾಪುರ ಅವರು 35 ವರ್ಷದ ವಯಮಿತಿಯಲ್ಲಿ 5 ಕಿ.ಮೀ ಓಟದಲ್ಲಿ ಬೆಳ್ಳಿ ಪದಕ.

400 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ ಶಿವರಾಜ್ ಹೊಸಮನಿ(ಬೇವಿನಾಳ) ಕಾರಟಗಿ 30 ವರ್ಷದ ವಯೋಮಿತಿಯ ಒಳಗಡೆ 5 ಕಿ.ಮೀ ಓಟದಲ್ಲಿ ಬಂಗಾರದ ಪದಕ ಹಾಗೂ 10 ಕಿ.ಮೀ ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ ಹಾಗೂ ಅಂತಿಮವಾಗಿ ಪ್ರವೀಣ್ ಕುಮಾರ್ ಚಳ್ಳಮರದ 40 ವರ್ಷದ ವಯೋಮಿತಿಯ ಒಳಗಡೆ 5 ಕಿಲೋಮೀಟರ್ ವಲ್ಕ್ ರೇಸ್ನಲ್ಲಿ,ನೂರು ಮೀಟರ್ ಓಟ ಹಾಗೂ ಅರವತ್ತು ಮೀಟರ್ ಓಟದಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರ ಪಡೆದುಕೊಂಡಿದ್ದಾರೆ ಸಾಧನೆ ಮಾಡಿದ ಎಲ್ಲಾ ಕ್ರೀಡಾಪಟುಗಳಿಗೆ ಸಂಸ್ಥೆಯ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ತರಬೇತಿದಾರರು ಸಹಪಾಠಿಗಳು ಅಭಿನಂದನೆಯನ್ನು ತಿಳಿಸಿದ್ದಾರೆ.

**ವರದಿ-ಹನುಮಂತಪ್ಪ ನಾಯಕ**

# ರಾಷ್ಟ್ರ ಧ್ವಜ ಹರಿದವರ ವಿರುದ್ಧ ದೂರು ದಾಖಲು



ಬೆಂಗಳೂರು:ನಗರದ ಕೆ.ಆರ್.ಪುರಂ ತೂಗು ಸೇತುವೆ ಮೇಲೆ ಹಾಕಿದ ರಾಷ್ಟ್ರ ಧ್ವಜವನ್ನು ಹರಿದು ರಾಷ್ಟ್ರ ಧ್ವಜಕ್ಕೆ ಅವಮಾನ ಎಸಗಿರುವವರ ವಿರುದ್ಧ ರಾಮಮೂರ್ತಿನಗರ ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಗಿದೆ ಎಂದು ಸಾಮಾಜಿಕ ಹೋರಾಟಗಾರ ಸುಭಾಷ್ ಕರುನಾಡ ಕಂದ ಚಾನೆಲ್ ಗೆ ತಿಳಿಸಿದ್ದಾರೆ. ರಾಷ್ಟ್ರ ಧ್ವಜಕ್ಕೆ ಅವಮಾನ ಎಸಗಿರುವ ಘಟನೆ ನಡೆದಿರುವುದು ತಿಳಿದು ಬಹಳ ಬೇಸರವಾಗಿದೆ. ರಾಷ್ಟ್ರ ಧ್ವಜವನ್ನು ಸೂರ್ಯಾಸ್ತದ ಮುಂಚಿತವಾಗಿ ಗೌರವದಿಂದ ಕೆಳಗೆ ಇಳಿಸಿ ಮಡಚಿ ಇಡುವುದು ಪದ್ದತಿಯಾಗಿದೆ ತೂಗು ಸೇತುವೆಗೆ ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನ ವಹಿಸಿರುವುದೆ ಮುಖ್ಯಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಗೆಯೇ ಧ್ವಜ ಸಂಹಿತೆಯ ನಿಬಂಧನೆಗಳನ್ನು ಉಲ್ಲಂಘಿಸುವ ರೀತಿಯಲ್ಲಿ ಅದನ್ನು ಬಳಸುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ, ಧ್ವಜವನ್ನು ಶೀಘ್ರಗತಿಯಲ್ಲಿ ಏರಿಸಬೇಕು ಮತ್ತು ಇಳಿಸುವಾಗ ನಿಧಾನಗತಿಯಲ್ಲಿ ಇಳಿಸಬೇಕು ಎನ್ನುವುದು ನಿಯಮವಾಗಿದೆ.

# ಮನವಿಗೆ ಸ್ಪಂದಿಸಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು



ಯಾದಗಿರಿ/ವಡಗೇರಾ:ಗ್ರಾಮದ ಎಲ್ಲಾ ವಾರ್ಡಗಳಲ್ಲಿ ಚರಂಡಿ,ಸಿ.ಸಿ.ರಸ್ತೆ,ಕುಡಿಯುವ ನೀರಿನ ಬಗ್ಗೆ ಮಾನ್ಯ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಮ್ಮ ಕರ್ನಾಟಕ ಸೇನೆ ತಾಲೂಕ ಘಟಕ ವತಿಯಿಂದ ಮನವಿ ಸಲ್ಲಿಸಲಾಗಿತ್ತು. ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಗ್ರಾಮದ ಎಲ್ಲಾ ವಾರ್ಡ್ ಗಳಿಗೆ ಸ್ಥಳಕ್ಕೆ ಹೋಗಿ ಅಲ್ಲಿರುವ ಸಮಸ್ಯೆಗಳನ್ನು ಆಲಿಸಿದರು.15ನೇ ಹಣಕಾಸಿನ ಯೋಜನೆಯಲ್ಲಿ ಕ್ರಿಯಾ ಯೋಜನೆ ರೂಪಿಸಿ ವಾರ್ಡಿನ ಎಲ್ಲಾ ಸಮಸ್ಯೆಗಳನ್ನು ಆದಷ್ಟು ಬೇಗನೆ ಪರಿಹರಿಸುವುದಾಗಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಲ್ಲಿಕಾರ್ಜುನ ಗಿರಿ ಹೇಳಿದರು.ಈ ಸಂದರ್ಭದಲ್ಲಿ ನಮ್ಮ ಕನ್ನಡ ಸೇನೆಯ ತಾಲೂಕ ಅಧ್ಯಕ್ಷರಾದ ಸಂತೋಷ ಬೊಜ್ಜಿ,ತಿಮ್ಮಣ್ಣ ಕಡೆಚೂರ,ಸಂತೋಷ ಭಜಂತ್ರಿ,ಕಿರಣ ಕುಮಾರ, ಮರಿಲಿಂಗ ಗೋನಾಲ,ರಾಯಪ್ಪ ರಖಾ,ಶರಣು ಮಾದಿಗ ದಂಡೋರ ಅಧ್ಯಕ್ಷರು ಹಾಗೂ ಇನ್ನಿತರರು ಇದ್ದರು.

**ವರದಿ:ಶಿವರಾಜ ಸಾಹುಕಾರ,ವಡಗೇರಾ**

**ಉದ್ಘಾಟನೆಯಾದರೂ ಕುಡಿಯುವ ನೀರು ಕಾಣದ ಅಂಬೇಡ್ಕರ್ ನಗರದ ಜನತೆ**

# ಜನಪ್ರತಿನಿಧಿಗಳ ನಿರ್ಲಕ್ಷ್ಯ,ಅಧಿಕಾರಿಗಳ ಬೆಜವಾಬ್ದಾರಿ ಇದಕ್ಕೆ ಕಾರಣ ನಾ.!?






ಯಾದಗಿರಿ:ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ನೀರಿನ ದಾಹವನ್ನು ತೀರಿಸಲು ಸರಕಾರ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಾನಾ ರೀತಿಯ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಯೋಜನೆಗಳನ್ನು ರೂಪಿಸಿ ಜನರಿಗೆ ತಲುಪಲು ಸಾಕಷ್ಟು ಪ್ರಯತ್ನವನ್ನು ಮಾಡುತ್ತಿದ್ದಾರೆ ಆದರೆ ಸರಕಾರದ ಅಡಿಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಅದನ್ನು ಕಾರ್ಯರೂಪಕ್ಕೆ ತರಲು ಇಚ್ಛಾಶಕ್ತಿಯಿಂದ ಕೆಲಸ ಮಾಡದೆ ಬೇಜವಾಬ್ದಾರಿತನ ತೋರುವುದು ಎಷ್ಟು ಸರಿ ಎನ್ನುವುದು ಸಾರ್ವಜನಿಕ ಮಾತು.

ನಗರದ ಅಂಬೇಡ್ಕರ್ ವಾರ್ಡ್ ನಲ್ಲಿ ನಿರ್ಮಿಸಿದ ಲಕ್ಷಾಂತರ ರೂಪಾಯಿ ವೆಚ್ಚದ ಯೋಜನೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಮುಗಿದು ಮಾಜಿ ಶಾಸಕರ ಅಮೃತ ಹಸ್ತದಿಂದ ಉದ್ಘಾಟನಾ ಭಾಗ್ಯ ಕಂಡಿದೆ ಆದರೆ ಸದ್ಯ ಜನರಿಗೆ ಕುಡಿಯಲು ನೀರಿನ ಭಾಗ್ಯ ಕಾಣುತ್ತಿಲ್ಲ ಎಂದು ನಗರದ ಜನ ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಸುಮಾರು ಬಾರಿ ಕೆಲವು ಹಳ್ಳಿಗಳಲ್ಲಿ ಕಲುಷಿತ ನೀರು ಸೇವಿಸಿ ಪ್ರಾಣ ಕಳೆದುಕೊಂಡಿದ್ದಾರೆ ಮತ್ತು ಮೊನ್ನೆ ತಾನೆ ಕಲುಷಿತ ನೀರು ಸೇವಿಸಿ ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಅಸ್ವಸ್ಥಗೊಂಡಿರುವ ಘಟನೆ ಸುರಪುರ ತಾಲೂಕಿನ ಕೆಂಭಾವಿ ಹೋಬಳಿಯ ಯಕ್ತಾಪುರ ಗ್ರಾಮದ ಕಸ್ತೂರ ಬಾ ವಸತಿ ನಿಲಯದಲ್ಲಿ ನಡೆದಿದೆ ಇದಕ್ಕೆ ಹಲವು ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ.ಆಸ್ಪತ್ರೆಯಲ್ಲಿ ಮಕ್ಕಳು ನರಳಾಡುತ್ತಿದ್ದರೂ ಇನ್ನೂ ಇವರಿಗೆ ಅರಿವು ಮೂಡುವುದು ಯಾವಾಗ ಎಂದು ನಗರದ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

**ವರದಿ:ಶಿವರಾಜಸಾಹುಕಾರ ವಡಗೇರಾ**

# ಕರುನಾಡ ಕಂದ

ಸಂಪುಟ-03 । ಸಂಚಿಕೆ-02
ದಿನಾಂಕ: 16-11-2023 । ಪುಟಗಳು: 16





# ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಷಯಗಳು

## ಗ್ರಾಮ ಪಂಚಾಯತಿ ಕಾರ್ಯಾಲಯ, ಹುಲಿಹೈದರ, ತಾ.ಕನಕಗಿರಿ ಜಿ.ಕೊಪ್ಪಳ



ಅಧ್ಯಕ್ಷರು:
ಶ್ರೀಮತಿ ಶರಣಮ್ಮ/ಯಮನಪ್ಪ ಕೆಲ್ಲೂರು



ಉಪಾಧ್ಯಕ್ಷರು:
ಶ್ರೀ ಜಗದೀಶ್/ತಿಮ್ಮಪ್ಪ ಗದ್ದಿ



ಪಿಡಿಓ:
ಶ್ರೀ ಅಮರೇಶ ರಾಠೋಡ

**ಸದಸ್ಯರುಗಳು :**

ಶ್ರೀಮತಿ ಮಾಳಮ್ಮ/ಉಡಚಪ್ಪ
ಶ್ರೀ ಶಿವಶಂಕರಪ್ಪ/ಶೇಷಪ್ಪ
ಶ್ರೀ ಶಿವಪುತ್ರಪ್ಪ/ಯಮನಪ್ಪ
ಶ್ರೀಮತಿ ಪಾರ್ವತೆಮ್ಮ/ಶ್ಯಾಮಣ್ಣ
ಶ್ರೀಮತಿ ಹುಲಿಗೆಮ್ಮ/ಕನಕಪ್ಪ ಸುಂಡಿ
ಶ್ರೀಮತಿ ಸುನಿತಾ/ಹನುಮೇಶ
ಶ್ರೀಗಂಗಮ್ಮ/ಶರಣಪ್ಪ ಹೂಗಾರ

ಶ್ರೀಮತಿ ದುರುಗಮ್ಮ/ಕಂಠೆಪ್ಪ
ಶ್ರೀಮತಿ ರೇಣುಕಮ್ಮ/ದುರುಗಪ್ಪ ಹರಿಜನ
ಶ್ರೀ ರಾಜಾಸಾಬ/ಗೌಸಸಾಬ
ಶ್ರೀಮತಿ ಬೇಗಂ/ಶ್ಯಾಮಿದ್ ಸಾಬ್
ಶ್ರೀಮತಿ ದೇವಮ್ಮ/ಚಂದ್ರಶೇಖರ
ಶ್ರೀ ಕುಂಟೆಪ್ಪ/ರುದ್ರಪ್ಪ
ಶ್ರೀ ಯಮನೂರಪ್ಪ ಬಂಗಾರಿ
ಶ್ರೀ ತಿರುಪತಿ ತಳವಾರ
ಶ್ರೀ ಫಾಲಾಕ್ಷ ಗೌಡ/ಮಲ್ಲನಗೌಡ ಪೋ.ಪಾ
ಶ್ರೀ ಸಣ್ಣ ತೊಂಡೆಪ್ಪ/ಹನುಮಪ್ಪ
ಶ್ರೀ ಬಾಳನಗೌಡ/ಸಿದ್ದನಗೌಡ
ಶ್ರೀಮತಿ ಲಕ್ಷ್ಮೀ/ಕನಕಪ್ಪ
ಶ್ರೀ ಅಮರೇಶಪ್ಪ/ಹನುಮಪ್ಪ
ಶ್ರೀಮತಿ ಹನುಮಮ್ಮ/ಹನುಮಂತಪ್ಪ

**ಹಾಗೂ ಸರ್ವ ಸಿಬ್ಬಂದಿ ವರ್ಗ**


# ಬೀದರ್ ಪೊಲೀಸರಿಂದ 94 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳ ವಶ



ಬೀದರ್ ಜಿಲ್ಲೆಯ ಐದು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ದರೋಡೆ,ಮನೆ ಕಳ್ಳತನ,ಅಕ್ರಮ ಗಾಂಜಾ ಪ್ರಕರಣಗಳನ್ನು ಕಳೆದ 10 ದಿನಗಳಲ್ಲಿ ಪತ್ತೆ/ದಾಳಿ ಮಾಡಿ 94 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳ ವಶ ಪಡಿಸಿಕೊಳ್ಳಲಾಗಿದೆ.

ವ ೦ ೀ ಲ ಾ ದಿ, ಕ ಾ ರಿ ಗ ಳ ಮಾರ್ಗದರ್ಶನದಂತೆ, ಹುಮನಾಬಾದ ಡಿ.ಎಸ್ಪಿ ಶ್ರೀ,ನ್ಯಾಮೆಗೌಡ,ಶ್ರೀ, ಶಿವನಗೌಡ ಪಾಟೀಲ್,ಶ್ರೀ ಶಿವಾನಂದ ಪವಾಡಶೆಟ್ಟಿ ರವರ ನೇತೃತ್ವದಲ್ಲಿ ತಮ್ಮ ತಮ್ಮ ಉಪ-ಭಾಗದ ವೃತ್ತ ನಿರೀಕ್ಷಕರಾದ ಶ್ರೀ,ಮಹೇಶ ಗೌಡ ಪಾಟೀಲ್, ಶ್ರೀ,ಫುಲಯ್ಯಾ ರಾಠೋಡ್,ಶ್ರೀ ರಘುವೀರಸಿಂಗ್ ಠಾಕೂರ್,ಶ್ರೀ ಹನುಮರೆಡ್ಡೆಪ್ಪಾ ಪಿ.ಐ ರವರ ತಂಡವನ್ನು ರಚಿಸಿದ್ದು,ಅಧಿಕಾರಿ ಹಾಗೂ ಸಿಬ್ಬಂದಿಯವರ ಸತತ ಪ್ರಯತ್ನದಿಂದ

1)ಬೇಮಳಖೇಡಾ ಠಾಣೆಯ ದರೋಡೆ ಪ್ರಕರಣದಲ್ಲಿ ಕೇವಲ 48 ಗಂಟೆಗಳಲ್ಲಿ ಕಳುವಾದ 694 ಜಿ.ಎಮ್ ಕಂಪನಿಯ ಫ್ಯಾನ್ ಬಾಕ್ಸ್,ಒಂದು ಕಂಟೆನರ್ 50,76,156=00 ರೂಪಾಯಿ ಮೌಲ್ಯದವುಗಳು

2)ಬೀದರ ನಗರ ಠಾಣೆಯ ದರೋಡೆ,ಕೊಲೆ ಯತ್ನ, ಆರ್ಮ್ಸ್ ಪ್ರಕರಣದಲ್ಲಿ ನಗದು ಹಣ,ಒಂದು ಕಾರು, ಮೊಬೈಲ್,(ಮಹಾರಾಷ್ಟ್ರ ಪೊಲೀಸರು ವಶ ಪಡಿಸಿಕೊಂಡ ನಾಡ ಪಿಸ್ತೂಲ್,2 ಜೀವಂತ ಗುಂಡುಗಳು) 5,00,000 ರೂಪಾಯಿ ಮೌಲ್ಯದ ವಸ್ತುಗಳು

3)ಗಾಂಧಿಗಂಜ ಪೊಲೀಸ್ ಠಾಣೆ ಮತ್ತು

4)ಮಾರ್ಕೇಟ್ ಪೊಲೀಸ್ ಠಾಣೆಯ ಮನೆ ಕಳ್ಳತನ ಪ್ರಕರಣಗಳಲ್ಲಿ 180 ರಟ ಬಂಗಾರದ ಆಭರಣ,2 ಇಂ ಬೆಳ್ಳಿಯ ಆಭರಣ,ನಗದು ಹೀಗೆ ಒಟ್ಟು 12,82,000 ರೂಪಾಯಿ ಮೌಲ್ಯದವುಗಳು,

5)ಸಂತಪೂರ ಠಾಣೆಯ ಬಾರ್ಡರ ತಾಂಡಾದಲ್ಲಿ 179 (63.86 ಇಂ) ಹಸಿ ಗಾಂಜಾದ ಗಿಡ 25,54,400=00 ರೂಪಾಯಿ ಮೌಲ್ಯದ ಗಾಂಜಾ ಹೀಗೆ ಒಟ್ಟು 5 ಠಾಣೆಯಲ್ಲಿ ಒಟ್ಟು 94,12,556=00 ಮೌಲ್ಯದವುಗಳನ್ನು ಜಪ್ತಿ ಮಾಡಿಕೊಂಡು ಆರೋಪಿತರಿಗೆ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.

ಇಂತಹ ಘೋರ ಪ್ರಕರಣದ ಪತ್ತೆ ಹಚ್ಚುವಲ್ಲಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸಿದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರ ಕಾರ್ಯಕ್ಕೆ ಶಾಘಿಸಿ,ಬಹುಮಾನ ಮತ್ತು ಪ್ರಶಂಸನಾ ಪತ್ರ ನೀಡಿಲಾಗಿದೆ.

ಬೀದರ ಜಿಲ್ಲೆಯಲ್ಲಿ ಅಪರಾಧ ನಿಯಂತ್ರಣಕ್ಕಾಗಿ ಜಿಲ್ಲೆಯ ಪೊಲೀಸರ ಕಾರ್ಯಾಚರಣೆಯು ಮುಂದುವರೆಯುತ್ತಿದೆ.

**ವರದಿ-ರೋಹನ್ ವಾಘಮಾರೆ**

# ಅಮೋಘಸಿದ್ದ ಶಿರಸಗಿ ಮಯೂರ ರವರಿಗೆ ತಾಲ್ಲೂಕ ಅಧ್ಯಕ್ಷ ಪಟ್ಟ




ಕಲಬುರಗಿ:ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ಜೇವರ್ಗಿ ತಾಲ್ಲೂಕು ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅಮೋಘಸಿದ್ದ ಶಿರಸಗಿ ಮಯೂರ ರವರಿಗೆ ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷರು ಹಾಗೂ ತಾಲ್ಲೂಕು ಪದಾಧಿಕಾರಿಗಳು ನೇಮಕ ಮಾಡಿ ಆದೇಶ ಹೊರಡಿಸಿ ಶುಭ ಹಾರೈಸಿದ್ದಾರೆ.

**ವರದಿ:ಚಂದ್ರಶಾಗೌಡ ಮಾಲಿಪಾಟೀಲ್**

ಕರುನಾಡ ಕಂದ
ಸಂಪುಟ-03 | ಸಂಚಿಕೆ-02
ದಿನಾಂಕ: 16-11-2023 | ಪುಟಗಳು: 16

# ಭ್ರಷ್ಟಾಚಾರದಿಂದ ದೇಶದ ಪ್ರಗತಿ ಕುಂಠಿತ:ವಿಜಯಾ ಪಾಟೀಲ

ಕಲಬುರಗಿ:ಭ್ರಷ್ಟಾಚಾರ ದೇಶಕ್ಕೆ ಮಾರಕವಾಗಿದ್ದು ಇದರಿಂದ ದೇಶದ ಪ್ರಗತಿಗೆ ಅಡ್ಡಿಯಾಗುತ್ತಿದೆ ಎಂದು ಜಿಲ್ಲಾ ನ್ಯಾಯಾಲಯದ ವಕೀಲೆ ವಿಜಯಾ ಪಾಟೀಲ್ ಹೇಳಿದರು.

ಖಾಜಾ ಬಂದಾನವಾಜ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಇತ್ತೀಚಿಗೆ ಏರ್ಪಡಿಸಿದ್ದ ಜಾಗೃತ ಜಾಗೃತಿ ಸಪ್ತಾಹದಲ್ಲಿ ಭ್ರಷ್ಟಾಚಾರ ಬೇಡ ಎಂದು ಹೇಳಿ-ಭ್ರಷ್ಟಾಚಾರ ಮುಕ್ತ ರಾಷ್ಟ್ರಕ್ಕೆ ಬದ್ಧರಾಗಿ' ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ನಮ್ಮ ದೇಶವನ್ನು ಭ್ರಷ್ಟಾಚಾರ ಮುಕ್ತಗೊಳಿಸುವಲ್ಲಿ ಪ್ರಜೆಗಳ ಪಾತ್ರ ಮುಖ್ಯವಾಗಿದೆ ಸಂವಿಧಾನದಲ್ಲಿ ಹಕ್ಕುಗಳ ಜೊತೆಗೆ ಕರ್ತವ್ಯಗಳೂ ಇವೆ ನಾವು ಜವಾಬ್ದಾರಯುತ ನಾಗರಿಕರಾಗಬೇಕು ನಮ್ಮ ಕರ್ತವ್ಯಗಳನ್ನು ಪಾಲಿಸಬೇಕು.

ಲಂಚ ತೆಗೆದುಕೊಳ್ಳುವುದು ಅಷ್ಟೇ ಅಲ್ಲ ಕೊಡುವುದು ಕೂಡಾ ತಪ್ಪು ಭ್ರಷ್ಟಾಚಾರಿಗಳಿಗೆ



ಉತ್ತೇಜನ ಕೊಡದೆ ಅವರ ವಿರುದ್ಧ ಧ್ವನಿ ಎತ್ತಿದಲ್ಲಿ ದೇಶದ ಪ್ರಗತಿ ಸಾಧ್ಯ ಎಂದರು.

ವಿದ್ಯಾರ್ಥಿಗಳು ನಾಳಿನ ಭವಿಷ್ಯ,ಅವರು ಈಗಿನಿಂದಲೇ ಭ್ರಷ್ಟಾಚಾರ ರಹಿತ ರಾಷ್ಟ್ರ ಕಟ್ಟಬೇಕು ಎಂದು ಹೇಳಿದರು.ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಭಾಷಾ,ಕಲಾ,ಮಾನವೀಕತೆ, ಸಮಾಜ ವಿಜ್ಞಾನದ ಡೀನ್ ಡಾ.ನಿಶಾತ್ ಆರೀಫ್ ಹುಸೇನಿ ಅಧ್ಯಕ್ಷತೆ ವಹಿಸಿ ಮಾತನಾಡಿ ಸಮಾಜದ ಪ್ರತಿ ಕರ್ತವ್ಯ ನಿಭಾಯಿಸುವುದು ಅವಶ್ಯ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಜಾಗೃತ ಜಾಗೃತಿ ಸಪ್ತಾಹ ಅಂಗವಾಗಿ ಹಮ್ಮಿಕೊಂಡ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು ಕಾನೂನು ವಿಭಾಗದ ವಿದ್ಯಾರ್ಥಿನಿ ಫಲಿಹಾ ಖಾನ ಪ್ರತಿಜ್ಞೆ ಬೋಧಿಸಿದರು.

ಈ ಕಾರ್ಯಕ್ರಮದಲ್ಲಿ ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಜಾವುದ್ದಿನ್ ಸಫಿ ಅತಿಥಿಗಳನ್ನು ಸ್ವಾಗತಿಸಿ ನಿರೂಪಿಸಿದರೆ,ಆಹಾರ ಮತ್ತು ಪೋಷಣೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿನೋದ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು ಪ್ರಾಣಿ ಶಾಸ್ತ್ರದ ಸಹಾಯಕ ಪ್ರಾಧ್ಯಾಪಕಿ ಡಾ.ಹೀನಾ ಮುಬಿನ ವಂದಿಸಿದರು.

**ವರದಿ:ಅಪ್ಪಾರಾಯ ಬಡಿಗೇರ**

# ಶಾಸಕರ ಭೇಟಿ:ಧರಣಿ ಹಿಂಪಡೆದ ರೈತರು



ಯಾದಗಿರಿ ಜಿಲ್ಲೆಯ ವಡಗೇರಾ ತಾಲೂಕಿನ ಬಿಳ್ಹಾರ ಗ್ರಾಮದ ಬಳಿ ನಡೆಯುತ್ತಿರುವ ಚೆನ್ನೈ-ಸೂರತ್ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಜೊತೆಗೆ ಸರ್ವಿಸ್ ರಸ್ತೆ ನಿರ್ಮಿಸಬೇಕು ಎಂದು ಒತ್ತಾಯಿಸಿ ರೈತರು ಹೆದ್ದಾರಿ ಕಾಮಗಾರಿ ತಡೆದು ಸೋಮವಾರದಿಂದ ಕಾಮಗಾರಿ ನಿರ್ಮಾಣ ಹಂತದಲ್ಲಿರುವ ರಸ್ತೆಯಲ್ಲಿಯೇ ರೈತರು ಟೆಂಟ್ ಹಾಕಿ ಧರಣಿ ನಡೆಸುತ್ತಿರುವ ಪ್ರತಿಭಟನಾ ನಿರತ ರೈತರನ್ನು ಬುಧವಾರ ಭೇಟಿ ಮಾಡಿದ ಶಾಸಕ ಚನ್ನಾರಡ್ಡಿ ತುನ್ನೂರವರವರು ಮಾತನಾಡುತ್ತಾ ಜಿಲ್ಲಾಧಿಕಾರಿಗಳ ಸಭೆ ಕರೆದು ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಈ ಸಭೆಗೆ ನೀವೂ ಸಹ ಪಾಲ್ಗೊಂಡು ಸಮಸ್ಯೆ ಇತ್ಯರ್ಥಕ್ಕೆ ಸಲಹೆ,ಸೂಚನೆ ನೀಡಲು ಮತ್ತು ಧರಣಿ ಸ್ಥಗಿತಗೊಳಿಸಲು ಮನವಿ ಮಾಡಿದರು ಶಾಸಕ ಚನ್ನಾರಡ್ಡಿ ತುನ್ನೂರವರ ಭರವಸೆಗೆ ಸ್ಪಂದಿಸಿದ ರೈತರು ಪ್ರತಿಭಟನೆಯನ್ನು ಹಿಂಪಡೆದರು.

ಈ ಕುರಿತು ಕರುನಾಡ ಕಂದ ಪತ್ರಿಕೆ ಹಾಗೂ ಚಾನೆಲ್ ವರದಿಗಾರಾದ ಶಿವರಾಜ ಸಾಹುಕಾರ ವಡಗೇರಾ ಜೊತೆಗೆ ರೈತರ ಪರವಾಗಿ ಮಾತನಾಡಿದ ಕಾಂಗ್ರೆಸ್ ಮುಖಂಡರಾದ ಬಸ್ಸುಗೌಡ ಬಿಳ್ಹಾರರವರು ರೈತರ ಕೂಗಿಗೆ ನಮ್ಮ ಜನಪ್ರಿಯ ಶಾಸಕರು,ನಮ್ಮ ಜಿಲ್ಲಾ ಪೊಲೀಸ್ ವರಿಷ್ಠ ಅಧಿಕಾರಿಗಳಾದ ಸಂಗಿತಾ ಮೇಡಮ್ ಅವರು ನಮ್ಮ ಎ.ಸಿ,ಸಿಪಿಐ ಸುನಿಲ್,ಪಿಎಸ್ ಐ ಅವರೆಲ್ಲಾ ಬಂದು ಸಮಸ್ಯೆಯನ್ನು ಜಿಲ್ಲಾಧಿಕಾರಿ ಅವರಿಗೆ ತಿಳಿಸಿದ್ದಾರೆ. ನಮ್ಮ ಶಾಸಕರು ನೂರಕ್ಕೆ ನೂರು ರೈತರ ಪರವಾಗಿದ್ದು ಸಮಸ್ಯ ಇತ್ಯರ್ಥ ಆಗುವ ವಿಶ್ವಾಸ ಇದೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ

ಮಲ್ಲಣ್ಣಗೌಡ ಗೌಡರಡ್ಡಿ,ಶಾಂತಗೌಡ ರಾಚರಡ್ಡಿ, ಶಿವಪ್ಪ ಸಾಹುಕಾರ,ಮರೆಪ್ಪ ಕವಡಿ,ವಿಶ್ವನಾಥರಡ್ಡಿ, ಸಿದ್ಧೇಶ,ಮೈನೊದ್ದಿನ ದೇವದುರ್ಗ,ಬಸವರಾಜ ನಿಲ್ಲಹಳ್ಳಿ,ಬಸ್ಸಯ್ಯಸ್ವಾಮಿ ಉಳೆಸೂಗುರು ಹಾಗೂ ಇತರರು ಉಪಸ್ಥಿತರಿದ್ದರು.

**ವರದಿ:ಶಿವರಾಜ ಸಾಹುಕಾರ,ವಡಗೇರಾ**

# ಪುರಾಣಗಳು ತನ್ನದೇ ಆದ ಮಹತ್ವವನ್ನು ಹೊಂದಿವೆ:ಶ್ರೀ ಗಂಗಾಧರ ಮಹಾಸ್ವಾಮಿ




ವಡಗೇರಾ ಆಗಿನ ಕಾಲದಲ್ಲಿ ಪುರಾಣ ಪ್ರವಚನಗಳು ತನ್ನದೇ ಆದ ಮಹತ್ವವನ್ನು ಹೊಂದಿದ್ದವು ಎಂದು ದೇವಿ ಪುರಾಣ ಪ್ರವಚನಕಾರರಾದ ಶ್ರೀ ವೇದಮೂರ್ತಿ ಗಂಗಾಧರ ಮಹಾಸ್ವಾಮಿ ಕಲಬುರ್ಗಿ ಹೇಳಿದರು. ದಸರಾ ಹಬ್ಬದ ನವರಾತ್ರಿ ನಿಮಿತ್ಯ ವಡಗೇರಾ ಪಟ್ಟಣದ ಶ್ರೀ ಅಂಬಾ ಮಹೇಶ್ವರಿ ದೇವಸ್ಥಾನದಲ್ಲಿ ದೇವಸ್ಥಾನ ಸಮಿತಿ ವತಿಯಿಂದ ಪ್ರತಿವರ್ಷದಂತೆ 9 ದಿನಗಳ ದೇವಿ ಪುರಾಣ ಕಾರ್ಯಕ್ರಮದ ಪುರಾಣ ಮುಕ್ತಾಯ ಸಮಾರಂಭದಲ್ಲಿ ಅವರು ಮಾತನಾಡಿ ಪ್ರತಿಯೊಬ್ಬರೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ನೆಮ್ಮದಿಯನ್ನು ಕಾಣಬಹುದು ಒತ್ತಡದ ಜೀವನದಿಂದ ಮನುಷ್ಯ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾನೆ ದಿನದಲ್ಲಿ ಸ್ವಲ್ಪ ಹೊತ್ತಾದರೂ ಯೋಗ ಧ್ಯಾನ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ದಾನ ಧರ್ಮ ಪರೋಪಕಾರಿ ಕೆಲಸದಲ್ಲಿ ತೊಡಗಿಸಿಕೊಳ್ಳಿ ಮೊಬೈಲ್ ಗೀಳಿನಿಂದಾಗಿ ಮಕ್ಕಳು ಅನಾಹುತ ಮತ್ತು ಆತಂಕಕ್ಕೆ ಒಳಗಾಗುತ್ತಿದ್ದಾರೆ ಆದ್ದರಿಂದ ತಾಯಂದಿರು ತಮ್ಮ ಮಕ್ಕಳ ಕೈಗೆ ಮೊಬೈಲ್ ನೀಡದಂತೆ ಕಿವಿ ಮಾತು ಹೇಳಿದರು.

ಸಂಗೀತ ಕಲಾವಿದರಾದ ಸಿದ್ದಣ್ಣ ಮಾಸ್ತರ,ಸಿದ್ದಯ್ಯ ಸ್ವಾಮಿ ಶಹಾಪುರ,ತಬಲಾ ವಾದಕರಾದ ಮಹಾಂತೇಶ ಸುತಾರ ಹಾಗೂ ಪಟ್ಟಣದ ಸಾರ್ವಜನಿಕರು ಹಾಗೂ ಸುತ್ತಮುತ್ತಲ ಗ್ರಾಮದ ಭಕ್ತಾದಿಗಳು ಉಪಸ್ಥಿತರಿದ್ದರು.

ಸಂಗೀತಾ ಕಲಾವಿದರಾದ ಸಿದ್ದಣ್ಣ ಮಾಸ್ತರ,ಸಿದ್ದಯ್ಯ ಸ್ವಾಮಿ ಶಹಾಪುರ,

ತಬಲಾ ವಾದಕರಾದ ಮಹಾಂತೇಶ ಸುತಾರ ಅವರುಗಳಿಗೆ ಸೌಜನ್ಯ ಮತ್ತು ಸಿದ್ಧಾಂಥ ಸುಂಕೇಸರಾಳ ಅವರ ಕುಟಂಬದ ವತಿಯಿಂದ ಹಾರ ಹಾಕಿ ಶಾಲು ಹೊದಿಸಿ ಸನ್ಮಾಯಿಸಲಾಯಿತು. ಮಾರುತಿ ವಿಶ್ವಕರ್ಮ ಹಾಗೂ ಬನ್ನಪ್ಪ ವಿಶ್ವಕರ್ಮ ವಿಶೇಷ ಸೇವೆ ಸಲ್ಲಿಸಿದರು.ಕಾರ್ಯಕ್ರಮವನ್ನು ಕೆ.ಎಸ್.ಆರ್.ಟಿ.ಸಿ.ನಿವೃತ್ತ ಸಂಚಾರಿ ನಿಯಂತ್ರಕರಾದ ಹೊನ್ನಪ್ಪ.ಎಲ್. ವಿಶ್ವಕರ್ಮ ವಡಗೇರಾ ನಿರೂಪಿಸಿದರು,ಶಿಕ್ಷಕ ಕಾಳಪ್ಪ. ಎಮ್.ವಿಶ್ವಕರ್ಮ ವಂದಿಸಿದರು.

**ವರದಿ:ಶಿವರಾಜ ಸಾಹುಕಾರ,ವಡಗೇರಾ**

ಕರುನಾಡ ಕಂದ
ಸಂಪುಟ-03 । ಸಂಚಿಕೆ-02
ದಿನಾಂಕ: 16-11-2023 । ಪುಟಗಳು: 16





# ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್



ಬಳ್ಳಾರಿ:ನವಂಬರ್ ಎರಡರಂದು ವೈದ್ಯಕೀಯ ಶಿಕ್ಷಣ ಸಚಿವರಾದಂತಹ ಡಾ ಶರಣ ಪ್ರಕಾಶ್ ಪಾಟೀಲ್ ಅವರು ಬಳ್ಳಾರಿ ನಗರದ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಬಳ್ಳಾರಿಗೆ ಭೇಟಿ ನೀಡಿದ ಸಮಯದಲ್ಲಿ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದಂತಹ ಡಾಕ್ಟರ್ ಗಂಗಾಧರ ಗೌಡ ಅವರ ಮೇಲೆ ದೂರುಗಳ ಸುರಿಮಳೆ ಬಂದಿದೆ ಇದನ್ನು ಗಮನಿಸಿದ ಸಚಿವರು ನಿರ್ದೇಶಕರಿಗೆ ಸರಿಯಾದ ರೀತಿಯಲ್ಲಿ ಸಂಸ್ಥೆಯನ್ನು ನಡೆಸಿಕೊಂಡು ಹೋಗಿ ಎಂದು ಸೂಚಿಸಿದರು ಇದೇ ಸಮಯದಲ್ಲಿ ಸಚಿವರು ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರ ಜೊತೆ ಸಂಸ್ಥೆಯ ಸಮಸ್ಯೆಗಳ ಬಗ್ಗೆ ಸಭೆಯನ್ನು ನಡೆಸಿದರು ಮತ್ತು ಸಂಸ್ಥೆಯಲ್ಲಿರುವ ರೇಡಿಯೋಥೆರಪಿ ಯಂತ್ರವನ್ನು ದುರಸ್ತಿಗೊಳಿಸಲು ಸೂಚಿಸಿದರು ನಂತರ ಎಲ್ಲಾ ವೈದ್ಯರು ಆಸ್ಪತ್ರೆಯಲ್ಲಿ ಇದ್ದು ಕರ್ತವ್ಯ ನಿರ್ವಹಿಸಬೇಕು ಎಂದು ಸೂಚಿಸಿದರು. ಇದೇ ಸಮಯದಲ್ಲಿ 93 ವೈದ್ಯರ ಹುದ್ದೆ ನೇಮಕಾತಿಯಲ್ಲಿ ಅಕ್ರಮ ನಡೆಸಿ ಸುಮಾರು 19 ಕೋಟಿ ರೂಪಾಯಿಗಳಷ್ಟು ನಿರ್ದೇಶಕರು ವಸೂಲು ಮಾಡಿದ್ದಾರೆ ಎಂದು ಸಚಿವರ ಮುಂದೆ ವೈದ್ಯರುಗಳು ಆರೋಪವನ್ನು ಮಾಡಿದ್ದಾರೆ ಅದಕ್ಕೆ ಸಚಿವರು ತನಿಖೆಯನ್ನು ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆಯನ್ನು ನೀಡಿದರು ಮತ್ತು ಆಯ್ಕೆ ಪಟ್ಟಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದಂತಹ ಬಿ ನಾಗೇಂದ್ರ, ಬಳ್ಳಾರಿ ನಗರ ಶಾಸಕ ಎನ್ ಭರತ್ ರೆಡ್ಡಿ,ಬಳ್ಳಾರಿ ಜಿಲ್ಲಾಧಿಕಾರಿ,ಅಮಿತ್ ಕುಮಾರ್ ಮಿಶ್ರಾ ಮತ್ತು ಕಾಂಗ್ರೆಸ್ ಮುಖಂಡರಾದಂತಹ ಮುಂಡರಗಿ ನಾಗರಾಜ್ ಅವರು ಮತ್ತು ಬಳ್ಳಾರಿ ನಗರದ ಮಹಾಪೌರರಾದಂತಹ ಡಿ ತ್ರಿವೇಣಿ,ಮಾಜಿ ಮಹಾಪೌರರಾದ ಬಸವರಾಜೇಶ್ವರಿ ಸುಬ್ಬರಾಯುಡು ಹಾಗೂ ಇತರರು ಉಪಸ್ಥಿತರಿದ್ದರು.

**ವರದಿ-ಜಾಫರ್ ಸಾಧಿಕ್**

# ಹಲವು ವಿಚಾರಗಳ ಸಿಹಿಯಾದ ವಿನಿಮಯವೇ ಸ್ನೇಹ



ವಿಶ್ವಾಸ,ಕರುಣೆ,ಸಹಕಾರ,ಪ್ರೀತಿ,ಮೌಲ್ಯ,ಹೀಗೆ ಹತ್ತು ಹಲವು ವಿಚಾರಗಳ ಸಿಹಿಯಾದ ವಿನಿಮಯವೇ ಸ್ನೇಹ. ನಾವು ಸ್ನೇಹಕ್ಕೆ ಸೀಮಿತವಾದ ಪರಿಧಿ ಅಥವಾ ಕಕ್ಷೆಯನ್ನ ನಿರ್ಧರಿಸಲು ಸಾಧ್ಯವಿಲ್ಲ,ಒಂದು ವೇಳೆ ಆ ಮಿತಿಯಲ್ಲಿ ಬಂದರೆ ಅದು ಸ್ನೇಹ ಅನ್ನೊಕ್ಕಳ್ಳಲ್ಲ. ಸ್ನೇಹ ಎನ್ನುವುದು ದೇವರುಗಳ ತರಾ ಅಜರಾಮರ,ಸರ್ವಾಂತರಯಾಮಿ, ನಿಸ್ವಾರ್ಥ ಮೂರ್ತಿ ಹಾಗಾಗಿ ಸ್ನೇಹಕ್ಕೆ ಯಾವುದೇ ರೀತಿ-ನೀತಿ,ಕಟ್ಟುಪಾಡು,ಜಾತಿಯ ಭೀತಿ, ಸಂಪ್ರದಾಯಗಳ ಸುರುಳು,ಧರ್ಮಗಳ ಅಧರ್ಮತೆ,ಬಡವ ಶ್ರೀಮಂತನೆಂಬ ವಿಚಾರಗಳಿಂದ ಮುಕ್ತವಾಗಿದ್ದು ಸ್ನೇಹ "ಸ್ನೇಹದ ಮೂಲ ಮಂತ್ರ ವಿಶ್ವಾಸ" ನಾವು ಕೂಡಾ ಸ್ನೇಹಪಾನದಲ್ಲಿ ಕೆಲವೊಂದಿಷ್ಟು ಸಿಹಿಕಹಿಗಳ ಹೂರಣವನ್ನು ಮೆದ್ದವರೆ ಆದ್ದರಿಂದ ನನ್ನ ಜೀವನದಲ್ಲಿ ನನ್ನ ವಿಶ್ವಾಸದ ಉಸಿರು, ಕೆಲವೊಂದಿಷ್ಟು ಸಲ ಕಹಿಯ ಉಣಿಸಿದರು ಕೋಪವ ತಾಳದೆ ಸ್ನೇಹ ನನ್ನದೇ ಎಂದು ಬಂದ ಭಾವನಾ ಜೀವಿ ನಾನು,ನಮ್ಮಲ್ಲಿನ ಮುಗ್ಧತೆಯನ್ನೇ ಅಸ್ತ್ರವಾಗಿಟ್ಟುಕೊಂಡು ಮೋಸಗೊಳಿಸಿದವರು ಹಲವರು ಅತಿ ಆತ್ಮೀಯರು ಇದ್ದಾರೆ,ಅತಿ ಅಮಾನುಷರು ಇದ್ದಾರೆ.

ನಮ್ಮ ಯಶಸ್ಸನ್ನ ಬಯಸುವ ಹಲವು ಮನಗಳು ಮಿಡಿಯುತ್ತಿವೆ ಆದರೂ ಕೂಡಾ ನಮ್ಮನ್ನೇ ನಾವು ಕಳೆದುಹೋಗುವಂತಹ ಸ್ನೇಹ ಇನ್ನು ನನಗೆ ಸಿಕ್ಕಿಲ್ಲ,ಅದು ನಮ್ಮ ದುರಾದೃಷ್ಟ ಇರಬಹುದು ಅಂತ ಕಾಣತ್ತೆ ನೋಡೋಣ ಮುಂದೆ ಏನಾದರೂ ಸಿಗಬಹುದೇನೋ ಅಂತ ಇಂದಿನ ದಿನಮಾನಗಳಲ್ಲಿ ಸ್ನೇಹ ಉಸಿರುಕಟ್ಟಿರುವ ಪರಿಸ್ಥಿತಿಯಂತೆ ಕಂಡು ಬರುತ್ತಿದೆ. ಯಾರು ಕೂಡಾ ಇವತ್ತಿನ ದಿನಗಳಲ್ಲಿ ಮುಕ್ತವಾದ ಮನಸ್ಸಿನಿಂದ ಸ್ನೇಹವನ್ನ ಬಯಸ್ಸುತ್ತಿಲ್ಲ ಆದರೆ ಮುಖವಾಡದ ಸ್ನೇಹ ಎಲ್ಲವನ್ನು ಮರೆಯಲ್ಲೇ ಮುಗಿಸಿಬಿಡುತ್ತಿದೆ ಕೇಳದೆ,ಕಾಣದೆ ಸಾಂತ್ವನ ಹೇಳುವ ಸ್ನೇಹ ಬೆಳಕು ಕಾಣದೆ ಕತ್ತಲೆಯ ಕೋಣೆಯಲ್ಲೇ ಕೊರಗಿ ಕೊರಗಿ ಸೊರಗುತಿದೆ ಈ ತಂತ್ರಜ್ಞಾನದ ಯುಗದಲ್ಲಿ ಭಾವುಕತೆಯು ತಾಂತ್ರಿಕತೆಯ ಸೆರೆಯಾಳಾಗಿ ಸ್ನೇಹದಲ್ಲಿ ಕೂಡಾ ಸ್ಥಿತಿಗತಿಗಳ ಬದಲಾವಣೆ ಕಾಣಬಹುದಾಗಿದೆ. ಅದೇನೇ ಬಂದರುಕೂಡಾ ಮನಷ್ಯನ ಮನಸ್ಥಿತಿ ಬದಲಾಗದಿರಲಿ ಶಾಲಾ ದಿನದ ಮಿತ್ರರು,ಕಾಲೇಜು ದಿನದ ಮಿತ್ರರು,ಪದವಿ,ಸ್ನಾತಕೋತ್ತರ ಪದವಿಯಲ್ಲಿ ಹಾಗೂ ನನ್ನ ಶಿಕ್ಷಕ ಸಹೋದ್ಯೋಗಿ ಮಿತ್ರರಿಗೂ ಹಾಗೂ ಈ ಮಿತ್ರ ಸಮೂಹಕ್ಕೆ ಹೊಸದಾಗಿ ಸೇರ್ಪಡೆಗೊಂಡ ನನ್ನ ಅತಿ ಆತ್ಮೀಯ ವೈ,ಕ್ಯೂ ಮಿತ್ರಬಳಗ ನನ್ನ ಸಹಿಸಿಕೊಂಡು ಪೋಷಿಸಿಕೊಂಡು ಬಂದ ಎಲ್ಲಾ ಹೃದಯವಂತರಿಗೂ ತುಂಬು ಹೃದಯದಿಂದ ಧನ್ಯವಾದಗಳು."ಸಂಘದಲ್ಲಿ ಇದ್ದರೇನೇ ನಿನಗೆ ಬೆಲೆ ಇಲ್ಲಾ ಅಂದರೆ ನಿನಗಿಲ್ಲ ನೆಲೆ"ಎನ್ನುವ ಮಾತಿನೊಂದಿಗೆ ನನ್ನ ಬರಹಕ್ಕೆ ಇತಿ ಶ್ರೀ ಹೇಳುತ್ತೇನೆ.

**ಲೇಖನ:ಶಿವಾನಂದ ಬಿ ಮಾದರ**
**ಶಿಕ್ಷಕರು, ಸಂಸ್ಥಾಪಕರು-ಸ್ಮರಣಾ ಕೋಚಿಂಗ್ ಸೆಂಟರ್.**
**ಹದಲಿ, ತಾ. ನರಗುಂದ, ಜಿ. ಗದಗ**



# ರಾಯಲ್ ವೃತ್ತದಲ್ಲಿ ರೈತರ ಪ್ರತಿಭಟನೆ




ಬಳ್ಳಾರಿ ನಗರದಲ್ಲಿ ಬಳ್ಳಾರಿ ಜಿಲ್ಲಾ ರೈತರು ನೀರಿಗಾಗಿ ತುಂಗಭದ್ರಾ ಜಲಾಶಯದಲ್ಲಿ ನೀರಿನ ಕೊರತೆಯಿಂದ ಎಚ್ ಎಲ್ ಸಿ ಗೆ ಈ ತಿಂಗಳು ಕೊನೆವರೆಗೆ ನೀರು ಸರಬರಾಜು ಮಾಡಬೇಕೆಂದು ಒತ್ತಾಯಿಸಿ ನಗರದ ರಾಯಲ್ ವೃತ್ತದಲ್ಲಿ ನೂರಾರು ರೈತರು ಪ್ರತಿಭಟನೆ ನಡೆಸಿದರು ಈ ಸಂದರ್ಭದಲ್ಲಿ ಸಾಮಾಜಿಕ ಕಾರ್ಯಕರ್ತರಾದ ಮೇಕಲ ಈಶ್ವರ ರೆಡ್ಡಿ ಅವರು ಪ್ರತಿಭಟನಾ ರೈತರ ಜೊತೆ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರ ಪರವಾಗಿ ಸರ್ಕಾರಕ್ಕೆ ನೀರು ಹರಿಸಲು ಒತ್ತಾಯಿಸಿದರು.

**ವರದಿ-ಜಾಫರ್ ಸಾಧಿಕ್**

ಕರುನಾಡ ಕಂದ
ಸಂಪುಟ-03 । ಸಂಚಿಕೆ-02
ದಿನಾಂಕ: 16-11-2023 । ಪುಟಗಳು: 16

# ನಮ್ಮ ಹೆಮ್ಮೆಯ ಯೋಧರು ಭಾರತಾಂಬೆಯ ವೀರ ಪುತ್ರರಿಗೆ ದೀಪಾವಳಿಯ ಶುಭಾಶಯಗಳು




ನಾನು ಕಂಡಂತೆ ಸಾಧಕರೆಂದರೆ ನಮ್ಮ ಭಾರತಾಂಬೆಯ ಹೆಮ್ಮೆಯ ಪುತ್ರರು,ನಮ್ಮ ವೀರಯೋಧರು ಇವರೇ ನಮ್ಮ ಪಾಲಿನ ನಿಜ ನಾಯಕರು ಸೇವೆ ಎಂದು ಹೇಳುತ್ತಾ ಭ್ರಷ್ಟಾಚಾರದ ರಕ್ಷಕ/ಪಾಲುದಾರರಾದ ಕೆಲ ರಾಜಕಾರಣಿಗಳು ಹಾಗೂ ಅಧಿಕಾರಿಗಳನ್ನು ನಾಯಕರನ್ನಾಗಿಸುವ ಎಷ್ಟೋ ಜನರಿಗೆ ಯೋಧರ ನಿಸ್ವಾರ್ಥ ಸೇವೆಯ ಅರಿವಿಲ್ಲ ಎಲ್ಲಾ ಕ್ಷೇತ್ರದಲ್ಲಿ ಕೆಲಸ ಮಾಡಿ ಸಾಧನೆ ಮಾಡೋ ತುಂಬಾ ಜನ ನಮಗೆ ಸಿಗುತ್ತಾರೆ ಆದರೆ ದೇಶ ಸೇವೆ ಮಾಡೋ ಮನಸ್ಸು ಎಲ್ಲರಿಗೂ ಬರಲು ಸಾಧ್ಯವಿಲ್ಲ ದೇಶದ ಗಡಿ ಭಾಗದಲ್ಲಿ ನಿಂತು ಜೀವದ ಹಂಗು ತೊರೆದು ಮಳೆ,ಚಳಿ,ಬಿಸಿಲು,ಹಸಿವು, ಬಾಯಾರಿಕೆ,ತಂದೆ,ತಾಯಿ,ಮನೆ,ಸಂಸಾರ ಎಲ್ಲವನ್ನೂ ಮರೆತು ಯಾವುದನ್ನೂ ಲೆಕ್ಕಿಸದೆ ತನ್ನ ದೇಶ ಮತ್ತು ಜನರ ನೆಮ್ಮದಿಗಾಗಿ ಪ್ರತಿ ಕ್ಷಣ ಹೋರಾಡೋ ಪ್ರತಿ ಯೋಧರು ಸಾಧಕರೆ.

ಗಡಿಯಲ್ಲಿ ಸೈನಿಕರು ನೆತ್ತರು ಹರಿಸಿದರೆನೇ ಇಲ್ಲಿ ನೆಮ್ಮದಿಯಿಂದ ಇರಲು ಸಾಧ್ಯ ಅಲ್ಲಿ ಅವರು ಚಳಿ ಮಳೆಯಲ್ಲಿ ಊಟ ನಿದ್ದೆ ಬಿಟ್ಟು ಕಷ್ಟ ಪಟ್ಟರೇನೇ ಇಲ್ಲಿ ನಾವು ಸುಖ ಸಂತೋಷದಿಂದಿರಲು ಸಾಧ್ಯ. ಇಂತಹ ಸಾಧಕರ ಕೆಲಸದ ಬಗ್ಗೆ ಸಾಕ್ಷಿ ಕೇಳುವ ನಾಯಿ/ಯಕರು ನಮ್ಮ ದೇಶದಲ್ಲಿರುವುದೇ ನಮ್ಮ ದುರಂತ ಕೆಚ್ಚೆದೆಯಿಂದ ತನ್ನ ರಕ್ತಹರಿಸುವ ಸೈನಿಕರೇ ನಮ್ಮೆಲ್ಲರ ನೆಮ್ಮದಿಯ ಜೀವನಕ್ಕೆ ಕಾರಣೀಕರ್ತರು ಎಂಬುವುದು ಇವರಿಗೆ ನೆನಪಾಗುವುದಿಲ್ಲವೇ?

ಈ ದೀಪಾವಳಿಯ ಸಂದರ್ಭದಲ್ಲಿ ನಾ ಕಂಡ ವೀರಸೇನಾನಿಯ ಪರಿಚಯ ಮಾಡಿಕೊಡಲು ಹೆಮ್ಮೆ ಎನಿಸುತ್ತದೆ ಹೌದು ನಾನು ಇವರೊಂದಿಗೆ ಕಳೆದ ಹತ್ತು ದಿನಗಳು ಹಾಗೂ ಆ ಅನುಭವ ನನ್ನ ಜೀವನದ ಮರೆಯಲಾಗದ ಕ್ಷಣಗಳು ಅವರೇ ನಮ್ಮ ವೀರಸೇನಾನಿ ಶ್ರೀ ಶಿವಣ್ಣ ಮಾಯಸಂದ್ರ ರವರು.

ಶಿವಣ್ಣ ಮಾಯಸಂದ್ರ ರವರು "ವಂದೇ ಮಾತರಂ ಶಿವಣ್ಣ" ಎಂದೇ ಹೆಸರಾದವರು ಇವರು ಭಾರತೀಯ ಸೈನ್ಯದ ಗಡಿ ಭದ್ರತಾ ಪಡೆಯ 22ನೇ ಬೆಟಾಲಿಯನ್ ಸದಸ್ಯರು ಹಾಗೂ ಪ್ರಸ್ತುತ ವಿಶ್ವವಿಖ್ಯಾತ ಅಟ್ಟಾರಿ-ವಾಘ ಗಡಿಯಲ್ಲಿರುವ ಏಕೈಕ ಕನ್ನಡಿಗ.

ಶ್ರೀ ಶಿವಣ್ಣ ಮಾಯಸಂದ್ರರವರು ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕಿನ




ಮಾಯಸಂದ್ರ ಗ್ರಾಮದಲ್ಲಿ ಶ್ರೀಮತಿ ಜಯಮ್ಮ ಹಾಗೂ ಶ್ರೀ ಕೆಂಪನಂಜಯ್ಯ ಆರನೇ ಪುತ್ರರಾಗಿ ಒಂದು ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದರು. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಇವರು ಸರ್ಕಾರಿ ಹಾಸ್ಟೆಲ್ ನಲ್ಲಿ ಇದ್ದುಕೊಂಡು ಎಸ್ ಎಸ್ ಎಲ್ ಸಿ ಹಾಗೂ ಪಿ ಯು ಸಿ ಮುಗಿಸಿದರು ಇವರ ವಿದ್ಯಾಭ್ಯಾಸದ ಸಂದರ್ಭದಲ್ಲಿ ನಡೆದ ಕಾರ್ಗಿಲ್ ಯುದ್ಧ ಇವರನ್ನು ಸೇನೆಗೆ ಸೇರಲು ಪ್ರೇರೇಪಿಸಿತ್ತು. ಈ ಸಂದರ್ಭದಲ್ಲಿ ನಮ್ಮ ಸೈನಿಕರು ವೀರಾವೇಶದಿಂದ ಹೋರಾಡಿ ಪಾಪಿ ಪಾಕಿಸ್ತಾನದ ಉಗ್ರರನ್ನು ಹೊಡೆದೋಡಿಸುತ್ತಿದ್ದ ಸುದ್ದಿಯನ್ನು ದೂರದರ್ಶನದಲ್ಲಿ,ಪತ್ರಿಕೆಗಳಲ್ಲಿ ಓದುತ್ತಿದ್ದ ಇವರ ಮನಸ್ಸು ತಾನೂ ಕೂಡಾ ಸೈನ್ಯ ಸೇರಬೇಕು, ಶತ್ರುಗಳನ್ನು ಹೊಡೆದೋಡಿಸಬೇಕೆಂದು ಹಂಬಲಿಸುತ್ತಿತ್ತು ಈ ಸಂದರ್ಭದಲ್ಲಿ ಉತ್ಸಾಹದಿಂದ ಸೇನೆ ಸೇರುವ ಅರ್ಜಿ ತುಂಬಿದರು.

ಎಷ್ಟೇ ಕಷ್ಟವಿದ್ದರೂ ನನ್ನ ಮಗ ನಮ್ಮೆದುರಲ್ಲಿ ಇರಲಿ ಎಂದು ತಂದೆ ತಾಯಿ ಪ್ರಾರ್ಥಿಸುತ್ತಿದ್ದರೆ, ದೇಶದ ಶತ್ರು ನಿಗ್ರಹ ಮಾಡುವ ಸೈನ್ಯದ ಕೆಲಸ ಸಿಗಲೆಂದು ಶಿವಣ್ಣನವರು ಪ್ರಾರ್ಥಿಸುತ್ತಿದ್ದರು ಈ ಹೊತ್ತಿಗೆ ಶಿವಣ್ಣನವರಿಗೆ ಭಾರತೀಯ ಸೇನೆಯ ಗಡಿ ಭದ್ರತಾ ಪಡೆಯ ಟೋಪಿ ಧರಿಸುವ ಅವಕಾಶ ಒದಗಿ ಬಂದಿತ್ತು.

ಮೊದಲಿಗೆ ಪಂಜಾಬ್ ನಲ್ಲಿ ತರಬೇತಿ ಶುರುವಾಯಿತು ತುಮಕೂರಿನ ವಾತಾವರಣದಲ್ಲಿ ಬೆಳೆದಿದ್ದ ಶಿವಣ್ಣನವರಿಗೆ ಪಂಜಾಬ್ ನ ಮೈ ಕೊರೆಯುವ ಚಳಿ ಮಧ್ಯಾಹ್ನದ ವಿಪರೀತ ಬಿಸಿಲು ಆರೋಗ್ಯದಲ್ಲಿ ಏರುಪೇರು ಮಾಡಿತಾದರೂ,ದೇಶ ಸೇವೆಯ ಹುಮ್ಮಸ್ಸು ಇದನ್ನು ಅರಗಿಸಿಕೊಂಡಿತು ಎನ್ನುತ್ತಾರೆ ವೀರಯೋಧ ಶಿವಣ್ಣ.

ನಂತರ ಗುಜರಾತಿನ ಭೂಕಂಪದಲ್ಲಿ ಸಂತ್ರಸ್ತರ ಸೇವೆ,ಗೋದ್ರಾ ದಂಗೆಯ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಿದ ಇವರು ನಂತರ ಈಶಾನ್ಯ ರಾಜ್ಯಗಳಲ್ಲಿ ಮಾವೋ ಉಗ್ರವಾದಿಗಳ ಅಟ್ಟಹಾಸವನ್ನು ಅಡಗಿಸುವ ಕಾರ್ಯಕ್ಕೆ ನಿಯೋಜನೆಯಾದರು. ಇದರಲ್ಲಿ ತನ್ನೊಡನೆ ಇದ್ದ ಹತ್ತಕ್ಕೂ ಹೆಚ್ಚು ಜನ ಸೈನಿಕರು ತಮ್ಮ ಕಣ್ಣೆದುರಲ್ಲೇ ಹುತಾತ್ಮರಾಗಿದ್ದನ್ನು ಎಂದೂ ಮರೆಯಲು ಸಾಧ್ಯವಿಲ್ಲವೆನ್ನುತ್ತಾರೆ ಈ ಕಾರ್ಯಾಚರಣೆಯಲ್ಲಿ ಶಿವಣ್ಣನವರು ಕೂದಲೆಳೆಯಲ್ಲಿ ಪಾರಾದರು ಈ ಕಾರ್ಯಾಚರಣೆ ಸಂದರ್ಭದಲ್ಲಿ ತಿಂಗಳಿಗೊಮ್ಮೆ ಹೆಲಿಕಾಪ್ಟರ್ ನಲ್ಲಿ ಆಹಾರ ಪದಾರ್ಥಗಳನ್ನು ಮೇಲಿನಿಂದ ಡ್ರಾಪ್ ಮಾಡಲಾಗುತ್ತಿತ್ತಂತೆ ಆದರೂ ಅಚಲವಾಗಿ ಸೇವೆ ಸಲ್ಲಿಸಿದ್ದಾರೆ ನಂತರ ಛತ್ತೀಸ್ ಘಡದ ಅಭಯಾರಣ್ಯದಲ್ಲಿ ನಕ್ಸಲ್ ನಿಗ್ರಹ ಕಾರ್ಯ ಪಡೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

2019 ರಿಂದ ಪಂಜಾಬ್ ನ ವಿಶ್ವವಿಖ್ಯಾತ ಅಟಾರಿ ವಾಘ ಗಡಿಯಲ್ಲಿ ಕಮಾಂಡರ್ ಆಗಿ ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ ಭಾರತ ಪಾಕಿಸ್ತಾನ ನಡುವಿನ ಅಟಾರಿ-ವಾಘ ಗಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಏಕೈಕ ಕನ್ನಡಿಗ ನಮ್ಮ ಶಿವಣ್ಣ ಮಾಯಸಂದ್ರ ರವರು ಕರ್ನಾಟಕದಿಂದ ಯಾರೇ ಹೋದರೂ ಉತ್ಸಾಹದಿಂದ ಅಲ್ಲಿಯ ಇತಿಹಾಸವನ್ನು ಹೇಳುತ್ತಾ ಗಡಿಯ ಕೆಲವು ಸ್ಥಳಗಳನ್ನು ಪರಿಚಯಿಸುತ್ತಾರೆ.

ಇಷ್ಟೆಲ್ಲಾ ಸೇವೆ ಸಲ್ಲಿಸುತ್ತಿರುವ ದಣಿವರಿಯದ ವೀರಸೇನಾನಿ,ಭಾರತಾಂಬೆಯ ವೀರ ಪುತ್ರ, ಕರುನಾಡಿನ ಹೆಮ್ಮೆ,ನಮ್ಮ ಸೈನಿಕ ಶಿವಣ್ಣನವರಿಗೆ ಹಾಗೂ ಭಾರತ ಸೇನೆಯ ಎಲ್ಲಾ ಸೈನಿಕರಿಗೆ ದೀಪಾವಳಿ ಹಬ್ಬದ ಶುಭಾಶಯಗಳು.

**ವರದಿ-ಸಿಡ್ಲೆಹಳ್ಳಿ ಮನು,ತಿಪಟೂರು**

ತಂದೆಯ ವಾತ್ಸಲ್ಯ,ತಾಯಿಯ ಮಮತೆ, ಸಹೋದರ-ಸಹೋದರಿ,ಹೆಂಡತಿ-ಮಕ್ಕಳ ಪ್ರೀತಿಯಿಂದ ದೂರಾಗಿ ಮನಸ್ಸನ್ನು ಕಲ್ಲಾಗಿಸಿ ಪ್ರಾಣದ ಹಂಗನ್ನು ತೊರೆದು ದೇಶಕ್ಕಾಗಿ ಹೋರಾಡುವ ಪ್ರತಿಯೊಬ್ಬ ಯೋಧನ ಜೀವನ ನಮಗೆ ಸ್ಪೂರ್ತಿದಾಯಕವಾಗಬೇಕು ಈ ದೀಪಾವಳಿಯಲ್ಲಿ ನೀವು ನಿಮ್ಮ ಮನೆಯಿಂದ ದೂರವಿದ್ದೀರಿ ಆದರೆ ನಾವು ನಿಮ್ಮ ಕುಟುಂಬ ಮತ್ತು ಇಡೀ ರಾಷ್ಟ್ರವೇ ನಿಮ್ಮ ಮನೆ ಎಂದು ಭರವಸೆ ನೀಡುತ್ತಾ ನಿಮಗೆ ಸುರಕ್ಷಿತ ಮತ್ತು ದೀಪಾವಳಿಯ ಶುಭಾಶಯಗಳನ್ನು ಇಡೀ ದೇಶ ಕೋರುತ್ತದೆ.



## "ಅಮೆರಿಕಾದಲ್ಲಿ ಕನ್ನಡಿಗ ಶಿವಣ್ಣ"

ಭಾರತಾಂಬೆಯ ಸೇವೆ ಸಲ್ಲಿಸಲೆಂದು ಸೇನೆ ಸೇರಿದ ಶಿವಣ್ಣನವರ ಕಾರ್ಯದಕ್ಷತೆ,ಪ್ರಾಮಾಣಿಕತೆ ದೂರದ ಅಮೆರಿಕಾದಲ್ಲೂ ಸೇವೆ ಸಲ್ಲಿಸಲು ಅವಕಾಶ ನೀಡಿತು.2014ರಲ್ಲಿ ವಿಶ್ವಸಂಸ್ಥೆಯ ಸೇನಾ ಪಡೆಗೆ ಆಯ್ಕೆಯಾದ ಇವರು ಅಮೆರಿಕಾದ ಸಮೀಪವಿರುವ "ಹೈತಿ" ಎಂಬ ದೇಶದಲ್ಲಿ 29 ರಾಷ್ಟ್ರಗಳ ಸೇನೆಗಳೊಂದಿಗೆ ಶಾಂತಿ ಕಾಪಾಡುವ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಇವರದ್ದು ಮೂರು ವರೆ ಲಕ್ಷ ಸೈನಿಕರು ಇರುವ ಭಾರತೀಯ ಗಡಿ ಭದ್ರತಾ ಪಡೆಯಿಂದ ಆಯ್ಕೆ ಮಾಡಿದ 140 ಜನ ಸೈನಿಕರಲ್ಲಿ ನಮ್ಮ ಕರುನಾಡಿನ ಶಿವಣ್ಣ ಕೂಡಾ ಒಬ್ಬರು ಇವರ ಸೇವೆಗಾಗಿ ವಿಶ್ವ ಶಾಂತಿ ಸೇನಾ ಪದಕವನ್ನು ಕೊಟ್ಟು ವಿಶ್ವ ಸಂಸ್ಥೆ ಇವರನ್ನು ಗೌರವಿಸಿದೆ.

## ಪ್ರಶಸ್ತಿ,ಪದಕಗಳು

ಭಾರತಾಂಬೆಯ ವೀರ ಪುತ್ರ ಕನ್ನಡಿಗರ ವೀರ ಕುವರ ಶಿವಣ್ಣನವರು ಪಡೆದ ಪ್ರಶಸ್ತಿ ಪದಕಗಳು ಹಲವಾರು.

ಅದರಲ್ಲಿ ಪ್ರಮುಖವಾದವು

1ಆಪರೇಷನ್ ಪರಾಕ್ರಮ ಪದಕ
2 ಕಠಿಣ ಸೇವಾ ಪದಕ
3 ಸ್ವರ್ಣ ಜಯಂತಿ ಪದಕ
4 ವಿಶ್ವಶಾಂತಿ ಸೇನಾ ಪದಕ
5 ಪೊಲೀಸ್ ಆಂತರಿಕ ಸುರಕ್ಷಾ ಸೇವಾ ಪದಕ

ಸೇರಿದಂತೆ ಹಲವಾರು ಸಂಘ ಸಂಸ್ಥೆಗಳಿಂದ ಹತ್ತಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ ಇವರ ಬಗ್ಗೆ ದೇಶದ ಪ್ರತಿಷ್ಠಿತ ಪತ್ರಿಕೆಗಳು ಅನೇಕ ಲೇಖನಗಳನ್ನು ರಾಷ್ಟ್ರಮಟ್ಟದ ಟಿವಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿವೆ

ಇವರ ಹುಟ್ಟೂರು ಮಾಯಸಂದ್ರದಲ್ಲಿ ಪ್ರಮುಖ ವೃತ್ತವೊಂದಕ್ಕೆ ಯೋಧ ಶಿವಣ್ಣ ವೃತ್ತ ಎಂದು ಹೆಸರಿಟ್ಟು ಇವರನ್ನು ಹುಟ್ಟೂರಿನ ಜನ ಗೌರವಿಸಿದ್ದಾರೆ ಇಷ್ಟೇ ಅಲ್ಲದೆ ಅಟ್ಟಾರಿ ವಾಘ ಗಡಿಯ ಮ್ಯೂಸಿಯಂನಲ್ಲಿ ಇವರ ಪ್ರತಿಮೆ ನಿರ್ಮಿಸಿ ಸೇನೆ ಗೌರವ ಸೂಚಿಸಿರುವುದು ಇವರ ಸೇವಾ ನಿಷ್ಠೆಯನ್ನು ತೋರುತ್ತದೆ ಹಾಗೂ ವಾಘ ಗಡಿಯಲ್ಲಿರುವ ದೇಶದ ಎತ್ತರದ ಧ್ವಜ ಸ್ಥಂಭದ ಧ್ವಜ ಆರೋಹಣ-ಅವರೋಹಣದ ಜವಾಬ್ದಾರಿ ನಮ್ಮ ತುಮಕೂರು ಜಿಲ್ಲೆಯ ಸೈನಿಕರಿಗೆ ಸಿಕ್ಕಿರುವುದು ಹೆಮ್ಮೆಯ ವಿಷಯ.



ಕರುನಾಡ ಕಂದ
ಸಂಪುಟ-03 | ಸಂಚಿಕೆ-02
ದಿನಾಂಕ: 16-11-2023 | ಪುಟಗಳು: 16

# ರೈತರು ಧರಣಿ ನಡೆಸುತ್ತಿದ್ದ ಸ್ಥಳಕ್ಕೆ ಶಾಸಕ ಚನ್ನಾರೆಡ್ಡಿಗೌಡ ಪಾಟೀಲ್ ತುನ್ನೂರ ಭೇಟಿ



ಯಾದಗಿರಿ / ವಡಗೇರಾ : ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಚೆನ್ನೈ ಮತ್ತು ಸೂರತ್ ಎಕ್ಸ್ ಪ್ರೆಸ್ ರಸ್ತೆ ನಿರ್ಮಾಣ ಮಾಡುತ್ತಿರುವ ಪರಿಣಾಮವಾಗಿ ಈ ಭಾಗದ ರೈತರು ಜಮೀನಿಗೆ ತೆರಳಲು ತುಂಬಾ ಸಮಸ್ಯೆ ಅನುಭವಿಸುತ್ತಿದ್ದಾರೆ. ವಡಗೇರಾ ತಾಲೂಕಿನ ಬಿಳಾರ ಗ್ರಾಮದ ರೈತರು ಸುಮಾರು ನಾಲ್ಕು ದಿನಗಳಿಂದ ನಮ್ಮ ಹೊಲಗಳಿಗೆ ತೆರಳಲು ಸರ್ವಿಸ್ ರಸ್ತೆ ಹಾಗೂ ಅಂಡರ್ ಪಾಸ್ ಬ್ರಿಡ್ಜ್ ನಿರ್ಮಾಣ ಮಾಡಬೇಕೆಂದು ಆಗ್ರಹಿಸಿ ನಾಲ್ಕು ದಿನಗಳಿಂದ ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ಸ್ಥಳಕ್ಕೆ ಯಾದಗಿರಿ ಶಾಸಕರಾದ ಚನ್ನಾರೆಡ್ಡಿ ಗೌಡ ಪಾಟೀಲ್ ತುನ್ನೂರ ಅವರು ಭೇಟಿ ನೀಡಿ ಧರಣಿ ಮಾಡುತ್ತಿರುವ ರೈತರ ಸಮಸ್ಯೆಯನ್ನು ಆಲಿಸಿದರು. ಕಳೆದ ನಾಲ್ಕು ದಿನಗಳಿಂದ ರೈತರು ಬಿಳಾರ ಗ್ರಾಮದ ಹೊರ ಭಾಗದ ರಸ್ತೆ ನಿರ್ಮಾಣದ ಹಂತದ ಹೆದ್ದಾರಿಯಲ್ಲಿ ಧರಣಿ ನಡೆಸುತ್ತಿರುವ ಮಾಹಿತಿಯನ್ನು ತಿಳಿದು ಶಾಸಕ ಚೆನ್ನಾರೆಡ್ಡಿಗೌಡ ಪಾಟೀಲ್ ತುನ್ನೂರು ಭೇಟಿ ನೀಡಿ ರೈತರ ನೋವು ಆಲಿಸಿದರು.ಈ ಸಂದರ್ಭದಲ್ಲಿ ರೈತರು ಶಾಸಕರಿಗೆ ಕೈಮುಗಿದು ತಾವುಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿದರು.

ಈ ವೇಳೆ ಈ ಕುರಿತು ಕರುನಾಡ ಕಂದ ಪತ್ರಿಕೆ ಹಾಗೂ ಚಾನೆಲ್ ವರದಿಗಾರಾದ ಶಿವರಾಜ ಸಾಹುಕಾರ ವಡಗೇರಾ ಜೊತೆಗೆ ಮಾತನಾಡಿದ ಶಾಸಕ ತುನ್ನೂರ ಚನ್ನಾರೆಡ್ಡಿರವರು ನಾನು ನಿಮ್ಮ ಪರವಾಗಿ ಬೆಂಬಲಕ್ಕೆ ಇದ್ದೇನೆ ನಿಮ್ಮ ಕಷ್ಟವನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಈ ಕುರಿತು ಅಧಿಕಾರಿಗಳ ಸಭೆ ಕರೆದು ಸಮಗ್ರ ಮಾಹಿತಿ ಸಂಗ್ರಹಿಸಿ ನಿಮ್ಮ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಎಸ್ ಪಿ ಜಿ.ಸಂಗೀತಾ,ಸಹಾಯಕ ಆಯುಕ್ತರಾದ ಹಂಪಣ್ಣ ಸಜ್ಜನ್,ವಡಗೇರಾ ತಹಶೀಲ್ದಾರ್ ಶ್ರೀನಿವಾಸ್ ಚಾಪಾಲ್, ಸಿ.ಪಿ.ಐ ಸುನಿಲ್ ಮೂಲಿಮನಿ, ಪಿ.ಎಸ್.ಐ.ಜೈಶ್ರೀ ಮಲ್ಲಿಕಾರ್ಜುನ್ ಗೌಡ ಬೀಳಾರ, ಬಸುಗೌಡ ಬಿಳಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮರೇಪ್ಪ ಬಿಳಾರ, ಶಾಸಕರ ಆಪ್ತ ಸಹಾಯಕರಾದ ರೇವಣಸಿದ್ದಯ್ಯ ಹೊರಪೇಟ ಮಠ,ಶಿವಪ್ಪ ಸಾಹುಕಾರ,ಅಂಬರೀಶ ಸಾಹುಕಾರ ಜಾಕಾ ಮೈನೊದ್ದಿನ ದೇವದುರ್ಗ, ಬಸವರಾಜ ನಿಲ್ಲಹಳ್ಳಿ, ಬಸ್ಸಯ್ಯಸ್ವಾಮಿ ಉಳ್ಳೆಸೂಗುರು ಸೇರಿದಂತೆ ಅನೇಕ ರೈತರು ಮುಖಂಡರು ಉಪಸ್ಥಿತರಿದ್ದರು.

**ವರದಿ:ಶಿವರಾಜ ಸಾಹುಕಾರ ವಡಗೇರಾ**

# ಹೆಸರಿಗೆ ಮಾತ್ರ ಸರ್ಕಾರಿ ಆಸ್ಪತ್ರೆ- ಚಿಕಿತ್ಸೆ ಕೊಡೋ ವೈದ್ಯರೇ ನಾಪತ್ತೆ!?




ಯಾದಗಿರಿ / ವಡಗೇರಾ: ವೈದ್ಯೋ ನಾರಾಯಣೋ ಹರಿಃ ಎಂಬ ಮಾತಿನಂತೆ ವೈದ್ಯನನ್ನು ದೇವರಂತೆ ನೋಡಲಾಗುವುದು ಆದರೆ,ವಡಗೇರಾ ಸರ್ಕಾರಿ ಆಸ್ಪತ್ರೆಯಲ್ಲಿ ಡಾಕ್ಟರ್ ಸರಿಯಾದ ಸಮಯಕ್ಕೆ ಬಾರದೆ ಇರುವುದರಿಂದ ಇದು ಹೆಸರಿಗೆ ಮಾತ್ರ ಸರ್ಕಾರಿ ಆಸ್ಪತ್ರೆ ಇಲ್ಲಿ ಚಿಕಿತ್ಸೆ ಕೊಡಲು ವೈದ್ಯರೇ ಇಲ್ಲವಾಗಿದೆ ಇದರಿಂದಾಗಿ ವೈದ್ಯರಿಲ್ಲದೇ ರೋಗಿಗಳು ಹೈರಾಣಾಗುತ್ತಿದ್ದಾರೆ.

ವಡಗೇರಾ ಆಸ್ಪತ್ರೆಗೆ ಇಬ್ಬರು ವೈದ್ಯರು ಹಾಗೂ ಒಬ್ಬರು ದಂತ ವೈದ್ಯರಿದ್ದು ಡಾ.ಜಗನಾಥರೆಡ್ಡಿ ಅವರಿಗೆ ತಡಿಬಿಡಿ ಹಾಗೂ ಬೆಂಡೆಬೆಂಬಳಯ ಹೆಚ್ಚಿನ ಉಸ್ತುವಾರಿಯನ್ನು ವಹಿಸಿದ್ದು ಅದರಿಂದಾಗಿ ಅವರು ಅಮವಾಸ್ಯ ಹುಣ್ಣಿಮೆಗೆ ಬರುತ್ತಾರೆ ಹಾಗು ಡಾ.ಸುರೇಶರವರು ಆಸ್ಪತ್ರೆಯಲ್ಲಿ ಯಾವಾಗ ಬಂದು ಹೋಗುತ್ತಾರೆ ದೇವರಿಗೆ ಗೊತ್ತು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ದಿನಾಲೂ ಸರಿಸುಮಾರು 200 ರಿಂದ 300 ಜನ ರೋಗಿಗಳು ಆಸ್ಪತ್ರೆಗೆ ಬಂದು ಹೋಗುತ್ತಾರೆ ಹೆಚ್ಚಾಗಿ ಸಿಸ್ಟರುಗಳೇ ರೋಗಿಗಳಿಗೆ ಚಿಕಿತ್ಸೆ ನೀಡುತ್ತಾರೆ.

ಸರಿಯಾದ ಸಮಯಕ್ಕೆ ವೈದ್ಯರ ಬಾರದ ಹಿನ್ನಲೆ ಪ್ರಾಥಮಿಕ ಆರೋಗ್ಯ ಕೇಂದ್ರ ಖಾಲಿ ಖಾಲಿಯಾಗಿ, ಆಸ್ಪತ್ರೆಯಲ್ಲಿ ನೋಡಲು ಸಿಗುವುದು ವೈದ್ಯರ ಚೇರ್ ಮಾತ್ರ.ಈ ಆರೋಗ್ಯ ಕೇಂದ್ರಕ್ಕೆ ಹತ್ತಾರು ಹಳ್ಳಿಗಳು ಒಳಪಡುತ್ತದೆ ಬೇರೆ ಬೇರೆ ಊರುಗಳಿಂದ ಬಂದು ವೈದ್ಯರಿಗಾಗಿ ಕಾದು ಕಾದು ಸುಸ್ತಾಗುತ್ತದೆ ತುರ್ತು ಆರೋಗ್ಯ ಸೇವೆ ಎಂದು ನಂಬಿಕೊಂಡು ಬಂದರೆ ನರಕಯಾತನೆ ಕಟ್ಟಿಟ್ಟ ಬುತ್ತಿ ಹೆರಿಗೆಯಾದ ಮಹಿಳೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ ಆಕೆಯ ಆರೈಕೆಗೆ ಯಾರೂ ಇಲ್ಲ. ಇದರಿಂದಾಗಿ ಸ್ಥಳೀಯರು ಬೇಸತ್ತು ಹೋಗಿದ್ದಾರೆ.

ಸಾರ್ವಜನಿಕವಾಗಿ ವ್ಯಾಪಕ ಟೀಕೆಗೆ ಗುರಿಯಾದರೂ ತಾಲೂಕು ಆರೋಗ್ಯ ಅಧಿಕಾರಿ ಕ್ಯಾರೇ ಎನ್ನುತ್ತಿಲ್ಲ. ಈ ಬಗ್ಗೆ ಜಿಲ್ಲಾ ಆರೋಗ್ಯ ಅಧಿಕಾರಿ (ಡಿಎಚ್ಓ) ಇತ್ತ ಗಮನಹರಿಸುತ್ತಿಲ್ಲ ಎಂಬ ಆರೋಪ ಕೇಳಿಬಂದಿದೆ.

**ವರದಿ:ಶಿವರಾಜ ಸಾಹುಕಾರ,ವಡಗೇರಾ**

# ಡಯಾಲಿಸಿಸ್ ಕೇಂದ್ರ ವಿಶಾಲ ಕೊಠಡಿಗೆ ಸ್ಥಳಾಂತರಿಸಲು ಆಗ್ರಹ

ತುಮಕೂರು ಜಿಲ್ಲೆಯ ಕುಣಿಗಲ್ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯುತ್ತಿರುವ ಡಯಾಲಿಸಿಸ್ ಕೇಂದ್ರವು ಕಿರಿದಾದ ಕೊಠಡಿಯಲ್ಲಿ ನಡೆಯುತ್ತಿದೆ,' ರೋಗಿಗಳಿಗೂ ಕಿರಿಕಿರಿ,ಸಿಬ್ಬಂದಿಗಳಿಗೂ ಕಿರಿಕಿರಿ ಉಂಟಾಗುತ್ತಿದೆ ಕೂಡಲೇ ವಿಶಾಲವಾದ ಕೊಠಡಿಗೆ ಸ್ಥಳಾಂತರಿಸ 'ಬೇಕು ಎಂದು ಸಾಮಾಜಿಕ ಹೋರಾಟಗಾರರಾದ ಮಡಿಕೆಹಳ್ಳಿ ರಾಮಕೃಷ್ಣ ಹಾಗೂ ಸಂತೇಪೇಟೆ ಲೋಕೇಶ್ ಒತ್ತಾಯಿಸಿದ್ದಾರೆ.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮೂರು ವರ್ಷಗಳ ಹಿಂದೆ ಕಿಡ್ನಿ ವೈಫಲ್ಯತೆಯಿಂದ ಬಳಲುತ್ತಿರುವ ರೋಗಿಗಳಿಗೆ ಡಯಾಲಿಸಿಸಿ ಕೇಂದ್ರ ಆರಂಭಿಸಿದ್ದು, ಐದು ಡಯಾಲಿಸಿಸ್ ಯಂತ್ರಗಳಿವೆ ಆದರಲ್ಲಿ ಸರ್ಕಾರದಿಂದ ಬಂದ ಮೂರು ಮತ್ತು ದಾನಿಗಳಿಂದ ಬಂದ ಎರಡು ಯಂತ್ರಗಳು ಕಾರ್ಯನಿರ್ವಹಿಸುತ್ತಿದ್ದು,ಉತ್ತಮವಾದ ಮೂರು ಮಂದಿ ಟೆಕ್ನಿಷಿಯನ್ ತಂಡವಿದೆ ಒಬ್ಬರು ಸ್ಟಾಫ್ ನರ್ಸ್ ಮತ್ತು ಒಬ್ಬರು ಅಟೆಂಡರ್ ಇದ್ದು ಬಂದ ರೋಗಿಗಳಿಗೆ ಉತ್ತಮ ಚಿಕಿತ್ಸೆ ಮಾಡಲಾಗುತ್ತಿದೆ. ಪ್ರತಿನಿತ್ಯ ಒಟ್ಟು 28 ಜನರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಕಿಡ್ನಿ ವೈಫಲ್ಯಕ್ಕೊಳಗಾದ ರೋಗಿಗಳಿಗೆ ಉತ್ತಮ ಸ್ಪಂದನೆ ಇರುವ ಈ ಕೇಂದ್ರ ತುಂಬಾ ಕಿಷ್ಠಿಂಥೆಯಲ್ಲಿ ನಡೆಯುತ್ತಿರುವುದಲ್ಲದೆ ಒಂದು ಡಯಾಲಿಸಿ ಯಂತ್ರ ಕೆಟ್ಟು ಆರು ತಿಂಗಳು ಕಳೆದಿವೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತು ವಿಷಾಲವಾದ ಕೊಠಡಿಗೆ ಡಯಾಲಿಸಿಸ್ ಕೇಂದ್ರವನ್ನ ಸ್ಥಳಾಂತರಿಸುವುದರ ಜೊತೆಗೆ ಕೆಟ್ಟು ನಿಂತ ಡಯಾಲಿಸಿಸ್ ಯಂತ್ರವನ್ನ ರಿಪೇರಿ ಮಾಡಿಸಿ ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ.

ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಗಣೇಶ್ ಬಾಬು ಮಾತನಾಡಿ ಆಸ್ಪತ್ರೆಯ ಮೇಲ್ಭಾಗದಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣವಾಗುತ್ತಿದ್ದು, ಪೂರ್ಣಗೊಂಡ ನಂತರ ಕೂಡಲೇ ಡಯಾಲಿಸಿಸ್ ಕೇಂದ್ರವನ್ನ ಸ್ಥಳಾಂತರಿಸುವುದರ ಜೊತೆಗೆ ಕೆಟ್ಟು ನಿಂತ ಯಂತ್ರವನ್ನು ರಿಪೇರಿ ಮಾಡಿಸಲಾಗುವುದು ಎಂದರು.

ವರದಿ-ಮನುಕುಮಾರ್



ಕರುನಾಡ ಕಂದ
ಸಂಪುಟ-03 । ಸಂಚಿಕೆ-02
ದಿನಾಂಕ: 16-11-2023 । ಪುಟಗಳು: 16

# ಕರ್ನಾಟಕ,ತಮಿಳುನಾಡು ಗಡಿ ಭಾಗದ ಜನರ ಸಮಸ್ಯೆಗೆ ಸ್ಪಂದಿಸಿದ ಶಾಸಕದ್ವಯರು



ಹನೂರು:ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಗಡಿ ಕಾಡಂಚಿನ ಗ್ರಾಮಗಳಲ್ಲಿ ವಾಸಿಸುವ ಜನರಿಗೆ ಅನುಕೂಲ ಕಲ್ಪಿಸಲು ಹನೂರು ಶಾಸಕ ಎಂ.ಆರ್.ಮಂಜುನಾಥ್ ಹಾಗೂ ತಮಿಳುನಾಡಿನ ಹಂದಿಯೂರು ಶಾಸಕ ಎ.ಜೆ.ವೆಂಕಟಾಚಲಂ ಪಣ ತೊಟ್ಟಿದ್ದಾರೆ.ತಾಲ್ಲೂಕಿನ ನಾಲ್ ರೋಡ್ ನಲ್ಲಿ ಎರಡು ರಾಜ್ಯಗಳ ಶಾಸಕರು ಹಾಗೂ ಕ್ಷೇತ್ರದ ಗಡಿ ಹೂಗ್ಯಂ ಪಂಚಾಯಿತ್ತಿಗೆ ಒಳಪಡುವ ಜಲ್ಲಿಪಾಳ್ಯಂ ಗ್ರಾಮದಲ್ಲಿ ಎರಡು ರಾಜ್ಯಗಳ ಅರಣ್ಯಾ ಇಲಾಖೆ ಡಿಎಫ್‌ಓ ಮತ್ತು ಆರ್ ಎಫ್‌ಓ ಸೇರಿದಂತೆ ಅಧಿಕಾರಿಗಳ ತಂಡದ ಸಮನ್ವಯ ಸಭೆಯನ್ನು ತಮಿಳುನಾಡಿಗೆ ಸೇರಿದ ಗುಡ್ಡೆಯೂರು ಗ್ರಾಮದಲ್ಲಿ ನಡೆಸಿ ಜಂಟಿ ಸರ್ವೆ ಕಾರ್ಯಚರಣೆಗೆ ತೀರ್ಮಾನಿಸಲಾಯಿತು.

ತಮಿಳುನಾಡಿಗೆ ಸೇರಿದ ಗುಡ್ಡೆಯೂರು ಮಡಿತರ್ರೈ ಮಾಕನಪಾಳ್ಯ ಸೇರಿದಂತೆ ಏಳು ಗ್ರಾಮಗಳು ರಾಜ್ಯದ ಜಲ್ಲಿಪಾಳ್ಯ,ಹೂಗ್ಯಂ ಮತ್ತು ತಮಿಳುನಾಡಿನ ಮುಖ್ಯರಸ್ತೆಗೆ ಹತ್ತಿರವಾಗಿದೆ ಈ ಗ್ರಾಮಗಳಿಗೆ ಸಮರ್ಪಕ ರಸ್ತೆಯಿಲ್ಲ ಮೂಲಭೂತ ಸೌಲಭ್ಯಗಳಂತೂ ಮರಿಚಿಕೆಯಾಗಿದೆ ಯಾವುದೇ ದಾಖಲೆ ಮಾಡಿಸಲು ನೂರಾರು ಕಿ.ಮೀ.ದೂರು ಅರಣ್ಯದಲ್ಲೆ ಸಾಗಬೇಕು ಈ ನಡುವೆ ಸೇತುವೆ ಇಲ್ಲದ ಹಳ್ಳದಲ್ಲಿ ನಿತ್ಯ ಹರಿಯುವ ಆಳುದ್ದ ನೀರಿನಲ್ಲಿ ಹಾದು ಹೋಗಬೇಕಾಗಿದೆ.


ನೂರಾರು ವರ್ಷಗಳಿಂದ ವಾಸಿಸುವ ಇವರ ಪೂರ್ವಿಕರು ಯಾರೂ ಬದುಕಿಲ್ಲ ಈಗಿನ ಯುವಕರಿಗೆ ವಿದ್ಯಾಭ್ಯಾಸ ಇಲ್ಲ ಎಂದೋ ಓಬೇರಾಯನ ಕಾಲದಲ್ಲಿ ನಿರ್ಮಿಸಿರುವ ಹಳೇ ಶಾಲಾ ಕಟ್ಟಡಗಳು ಸ್ಥಿತಿಲಾವಸ್ಥೆ ತಲುಪಿದೆ. ಮುಗ್ಧತೆಯಿಂದ ಕೂಡಿದ ಜನರು ವ್ಯವಸಾಯವೆ ಮುಖ್ಯ ಕಸುಬಾಗಿದೆ ಎರಡು ರಾಜ್ಯಗಳ ಅರಣ್ಯ ಇಲಾಖೆ ಅಧಿಕಾರಿಗಳು ಮನಸ್ಸು ಮಾಡಿದ್ದರೆ ಎಂದೋ ಸುಂದರ ಬದುಕು ಕಟ್ಟಿ ಕೊಡಬಹುದಿತ್ತು. ಒಂದು ಸೇತುವೆ ಮಾಡಿ ಕೇವಲ 3 ಕಿ.ಮಿ.ರಸ್ತೆಗೆ ಅನುಮತಿ ನೀಡಿದರೆ ತಮಿಳುನಾಡಿಗೆ 2.5 ಕಿ.ಮೀ. ಹತ್ತಿರದ ಮುಖ್ಯರಸ್ತೆ ತಲುಪಬಹುದು ಹಾಗೆಯೆ ಕರ್ನಾಟಕ ಹನೂರು ಕ್ಷೇತ್ರದ ಹೂಗ್ಯಂ ಪಂಚಾಯಿತ್ತಿಗೆ ಹತ್ತಿರ ಆಗುತ್ತದೆ ಜನರ ಅನುಕೂಲಕ್ಕಾಗಿ ಈ ಒಂದು ಕೆಲಸಕ್ಕೆ ಇಬ್ಬರ ಶಾಸಕರದ್ವಯರು ಕೈಗೊಂಡಿರುವ ಕೆಲಸ ಒಂದು ಇತಿಹಾಸ ನಿರ್ಮಾಣ ಮಾಡಿದಂತೆ ಆಗುತ್ತದೆ.

ಕಾಡೇ ಇವರಿಗೆ ಜಗತ್ತು:ಅರಣ್ಯದ ಮಧ್ಯ ವಾಸಿಸುವ ಈ ಜನರ ಗೋಳು ಹೇಳತೀರದು ಹುಷಾರು ತಪ್ಪಿದರೆ ಸೂಕ್ತ ಚಿಕಿತ್ಸೆ ಇಲ್ಲ ಹೋದರೆ ಹೂಗ್ಯಂ ಪಂಚಾಯ್ತಿ ಕೂಡ್ಲೂರಿಗೆ ಬರಬೇಕು ಇಲ್ಲ ತಮಿಳುನಾಡಿ ಹೋಗಬೇಕು ಈ ನಡುವೆ ಯಾವಾಗಲೂ ಹರಿಯುತ್ತಿರುವ ಹಳ್ಳ ಪಡಿತರ ಇಲ್ಲ ಮತದಾರರ ಚೀಟಿ ಇಲ್ಲ ಸರ್ಕಾರಿ ಸೌಲಭ್ಯ ಪಡೆಯಲು ಅವಶ್ಯಕ ದಾಖಲೆ ಇಲ್ಲ ಸರ್ಕಾರಿ ಅಧಿಕಾರಿಗಳು ಈ ಕಡೆ ಬರುವುದಿಲ್ಲ ಕಾಡಿನ ನಡುವೆ ಇರುವ ನಾವು ಕಾಡು ಪ್ರಾಣಿಗಳಂತೆ ಬದುಕುತಿದ್ದೇವೆ ಎಂದು ಅಳಲು ತೋಡಿಕೊಂಡಿದ್ದಾರೆ.

ಎರಡು ರಾಜ್ಯಗಳ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಇಬ್ಬರು ಶಾಸಕರ ಸಭೆ ನಡೆಸಿ ಚರ್ಚಿಸಿ ಜಂಟಿ ಸರ್ವೆಗೆ ಒಪ್ಪಿಸಿದ್ದಾರೆ ಬಳಿಕ ಅವರದೇ ನಾಡಿನ ಭಾಷೆಗಳಲ್ಲಿ ಶಾಸಕರದ್ವಯರು ಮಾತನಾಡಿ ಜನರು ಅನುಕೂಲಕ್ಕಾಗಿ ನಮ್ಮ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಇಂದು ನಾವು ಅಧಿಕಾರದಲ್ಲಿದ್ದೇವೆ. ಮುಂದೆ ಇಲ್ಲದಿರಬಹುದು ಆದರೆ ನಾವು ಮಾಡುವ ಕೆಲಸಗಳು ಮಾತ್ರ ಶಾಶ್ವತವಾಗಿರಬೇಕು ರಸ್ತೆ ಮಾಡುವುದರಿಂದ ಎರಡು ರಾಜ್ಯದ ಜನರಿಗೆ ಅನುಕೂಲ ಆಗುತ್ತದೆ ಸರ್ಕಾರದ ಸೌಲಭ್ಯ ತಲುಪಿಸಬಹುದು ಇದರಿಂದ ಎರಡು ರಾಜ್ಯದ ಜನರಿಗೂ ಅನುಕೂಲವಾಗಲಿದೆ ಎಂದರು.

ಈ ವೇಳೆ ಡಿಎಫ್‌ಓ ಗಳಾದ ಸಂತೋಷ್ ಸುಧಾಕರನ್,ಪ್ರಕಾಶ್,ಸೆಂಧಿಲ್ ಕುಮಾರ್,ಚೆಸ್ಕಾಂ ಎಇಇ ಶಂಕರ್ ಲೋಕೋಪಯೋಗಿ ಇಲಾಖೆ ಮಹೇಶ್,ತಾ.ಪಂ.ಎಡಿ ರವೀಂದ್ರ ಪಿಡಿಓ ಪುಷ್ಪಲತಾ ಕಾರ್ಯದರ್ಶಿ ಮಹದೇವ ಎರಡು ರಾಜ್ಯಗಳ ಪೊಲೀಸ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ವರದಿ:ಉಸ್ಮಾನ್ ಖಾನ್

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಷಯಗಳು

ಶುಭ ಕೋರುವವರು:

ಶ್ರೀ ಮಹಾಂತೇಶ್ ಛಲವಾದಿ ಶಿಕ್ಷಕರು ಹಾಗೂ ಪ್ರಜ್ಞಾವಂತ

ಮಕ್ಕಳಾದ : ಶಿವರಾಜ್, ಸಂಜನಾ, ಮುದಗಲ್,ತಾ.ಲಿಂಗಸುಗೂರು, ಜಿ.ರಾಯಚೂರು







# ವಸತಿ ನಿಲಯದ ಮಕ್ಕಳ ಸಮಸ್ಯೆಗಳಿಗೆ ಕೊನೆ ಯಾವಾಗ!?



ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಪಟ್ಟಣದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸರಕಾರಿ ವಸತಿ ನಿಲಯ(ಸಾಮಾನ್ಯ) ಹೆಸರಿಗೆ ಮಾತ್ರ ತುಂಬಾ ದೊಡ್ಡ ವಸತಿ ನಿಲಯ, ಇಲ್ಲಿರುವ ಮಕ್ಕಳಿಗೆ ಒಳ್ಳೆಯ ಆಹಾರ ಸಿಗುವುದಿಲ್ಲ ತುಂಬಾ ಕಳಪೆ ಮಟ್ಟದ ಆಹಾರವನ್ನು ನೀಡುತ್ತಿದ್ದಾರೆ ಎಂಬ ಮಾಹಿತಿ ಆಧಾರದ ಮೇಲೆ ನಾವು ನೋಡಿದಾಗ ಅವರು ಮಾಡಿ ಕೊಡುವ ರೊಟ್ಟಿ ಹಿಟ್ಟಿನಲ್ಲಿ ಸುಮಾರು ನುಸಿ ಎಂಬ ಜಾತಿಯ ಹುಳಗಳು ಇದ್ದವು ಏನು ಸರ್ ಮಕ್ಕಳಿಗೆ ಇಂಥ ನುಸಿ ಬಿದ್ದ ಆಹಾರ ತಿನಿಸುತ್ತೀರಾ ಎಂದು ಕೇಳಿದರೆ ಇಲ್ಲ ಸರ್ ನಾವು ಸ್ವಚ್ಛ ಮಾಡಿ ತಿನಿಸುತ್ತೇವೆ ಎಂದು ಉಡಾಫೆ ಉತ್ತರ ನೀಡುತ್ತಾರೆ.ಅಷ್ಟೇ ಅಲ್ಲದೆ ಮಕ್ಕಳಿಂದ ಸ್ವಚ್ಛತಾ ಕೆಲಸ ಕೂಡಾ ಮಾಡಿಸುವುದು ಕೂಡಾ ಕಂಡು ಬಂದಿದೆ.ಬಡ ವಿದ್ಯಾರ್ಥಿಗಳು ಇಲ್ಲಿ ಬರುವುದು ಏಕೆ?ಇಲ್ಲಿ ಕೆಲಸ ಮಾಡುವುದಕ್ಕಾ ಅಥವಾ ವಿದ್ಯಾಭ್ಯಾಸಕ್ಕಾ?ಎನ್ನುವುದು ವಿದ್ಯಾರ್ಥಿಗಳ ಹಾಗೂ ಪೋಷಕರ ಪ್ರಶ್ನೆಯಾಗಿದೆ. ತುಂಬಾ ದಿನಗಳಿಂದ ಹಾಸ್ಟೆಲ್ ಮೇಲೆ ಇರುವ ಸಿಂಟೆಕ್ಸ್ ತೊಳೆದಿಲ್ಲ ತುಂಬಾ ಗಲೀಜು ಆಗಿದೆ ತೊಳೆಯಲು ಎಷ್ಟು ಹೇಳಿದರೂ ಅದರ ಕಡೆ ಗಮನ ಹರಿಸಿಲ್ಲ.ಈ ಎಲ್ಲಾ ಸಮಸ್ಯೆಗಳಿಗೆ ವಾರ್ಡನ್ ಸರಿಯಾದ ಸಮಯಕ್ಕೆ ಬಾರದೆ ಇರುವುದೇ ಕಾರಣ ಎಂದು ವಿದ್ಯಾರ್ಥಿಗಳು ಆರೋಪ ಮಾಡಿದ್ದಾರೆ ಈ ರೀತಿ ಸಮಸ್ಯೆಗಳು ನಡೆದಿದೆ ಎಂದು ಅಲ್ಲಿದ್ದ ವಿದ್ಯಾರ್ಥಿಗಳು ನಮಗೆ ಫೋನ್ ಕರೆ ಮಾಡಿ ಕರೆದಿದ್ದಾಗ ಅಲ್ಲಿ ಕೆಲವೊಂದು ಸಮಸ್ಯೆಗಳು ಎದ್ದು ಕಾಣುತ್ತಿವೆ ಒಟ್ಟಾರೆಯಾಗಿ ಈ ವಸತಿ ನಿಲಯದಲ್ಲಿರುವ ಸಮಸ್ಯೆಗಳ ಕುರಿತು ಸಂಬಂಧಪಟ್ಟ ಮೇಲಾಧಿಕಾರಿಗಳು ಸರಿಯಾಗಿ ತನಿಖೆಯನ್ನು ಮಾಡಿ ತಪ್ಪು ಇದ್ದಲ್ಲಿ ಇಂಥ ವಾರ್ಡನ್ ಗಳ ವಿರುದ್ಧ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುತ್ತಾರೋ ಇಲ್ಲವೋ ಎಂಬುದನ್ನು ಕಾದು ನೋಡೋಣ...

ವರದಿ:ಅರವಿಂದ್ ಕಾಂಬಳೆ ಇಂಡಿ

ಕರುನಾಡ ಕಂದ
ಸಂಪುಟ-03 | ಸಂಚಿಕೆ-02
ದಿನಾಂಕ: 16-11-2023 | ಪುಟಗಳು: 16

# ಯಾರೂ ಹೇಳಂಗಿಲ್ಲ,ಏನೂ ಕೇಳಂಗಿಲ್ಲ ಉತ್ತರ ಮಾತ್ರ ಸಿಗೋದೆ ಇಲ್ಲ!?ಹೀಗೂ ಉಂಟಾ...





ಸಂಗೀತಾ ಬಗಲಿ ಪಿಡಿಓ

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಇಂಗಳಗಿ ಗ್ರಾಮ ಪಂಚಾಯಿತಿಯಲ್ಲಿ ಸಂಗೀತ ಬಗಲಿಯವರು 4 ರಿಂದ 5 ಐದು ವರ್ಷದವರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.ಇವರು ಇಲ್ಲಿಯವರೆಗೆ ಮಾಡಿದ ಕೆಲಸಗಳು ಎಲ್ಲವೂ ಕಳಪೆ ಮಟ್ಟದಿಂದ ಹೊಂದಿರುತ್ತವೆ ಏಕೆಂದರೆ ಜನರಿಗೆ ಹೇಳುವುದು ಮಾಡುವುದು ಇನ್ನೊಂದು ಮಾಡುತ್ತಾ ಬಂದಿದ್ದಾರೆ. ಹೌದು 14 ಮತ್ತು 15 ಹಣಕಾಸಿನಲ್ಲಿ ಬಂದಂತಹ ಯೋಜನೆಗಳಲ್ಲಿ ತಮ್ಮದೇ ಆದ ಒಂದು ಕ್ರಿಯಾ ಯೋಜನೆ ಮಾಡಿಕೊಂಡು ಕಾಮಗಾರಿಗಳನ್ನು ನಡೆಸಿದ್ದಾರೆ.ಒಂದೊಂದು ಕಾಮಗಾರಿಗೆ ಒಂದೊಂದು ಎಸ್ಟಿಮೇಟ್ ಕೂಡಾ ಹೊಂದಿರುತ್ತದೆ ಆದರೆ ಇಲ್ಲಿಯವರೆಗೆ ಇವರು ಮಾಡಿದ ಕಾಮಗಾರಿಯು ಯಾವುದೇ ರೀತಿಯ ಎಸ್ಟಿಮೇಟ್ ಕಾಪಿಯ ಪ್ರಕಾರ ಆಗಿಲ್ಲ,ಎಲ್ಲವೂ ಕಳಪೆ ಮಟ್ಟದಿಂದ ಆಗಿವೆ ಎಂಬುದು ಮೇಲ್ನೋಟಕ್ಕೆ ಕಾಣಿಸಿಕೊಂಡಿದೆ.

**ವರದಿ:ಅರವಿಂದ್ ಕಾಂಬಳೆ ಇಂಡಿ**

14ನೇ ಮತ್ತು 15 ನೇಯ ಹಣಕಾಸಿನ ಮಾಹಿತಿಯನ್ನು ಕೇಳಿದ್ದೆ 2021 ರಿಂದ 2023ರ ವರೆಗೆ ಯಾವ ಯಾವ ಯೋಜನೆಗಳಲ್ಲಿ ಯಾವ ಯಾವ ಕಾಮಗಾರಿ ಮಾಡಿದ್ದೀರಿ ಹಾಗೂ ಈ 15 ನೆಯ ಹಣಕಾಸಿನಲ್ಲಿ ಎಸ್ ಸಿ ಎಸ್ ಟಿ ಸಮುದಾಯಕ್ಕೆ ಯಾವ ಯಾವ ಕಾಮಗಾರಿಗಳನ್ನು ಇಟ್ಟುಕೊಂಡಿದ್ದೀರಿ ನನಗೆ ಭಾವಚಿತ್ರದ ಸಮೇತ ಮಾಹಿತಿಯನ್ನು ಒದಗಿಸಿಕೊಡಬೇಕು ಎಂದು ಕೇಳಿದೆ ನಾನು ಮಾಹಿತಿಯನ್ನು ಕೇಳಿ 30 ದಿನಗಳು ಕಳೆದು ಹೋಗಿವೆ ಯಾವುದೇ ರೀತಿ ಮಾಹಿತಿಗಳನ್ನು ಇಲ್ಲಿಯವರೆಗೆ ಕೊಟ್ಟಿಲ್ಲ ಈ ಅಧಿಕಾರಿಗೆ ಎಷ್ಟು ದಿನಗಳು ಬೇಕೋ ಮಾಹಿತಿ ಕೊಡಲು?ಈ ಅಧಿಕಾರಿಗೆ ಮಾಹಿತಿ ಹಕ್ಕು ನಿಯಮಗಳು ಗೊತ್ತೋ ಇಲ್ಲವೋ?ಏಕೆಂದರೆ ಮಾಹಿತಿ ಹಕ್ಕು ನಿಯಮದ ಪ್ರಕಾರ 30 ದಿನಗಳವರೆಗೆ ಕೇಳಿದಂತಹ ಮಾಹಿತಿಯನ್ನು ಕಡ್ಡಾಯವಾಗಿ ಕೊಡಬೇಕು ಎಂಬುದು ಇದೆ ಈ ಅಭಿವೃದ್ಧಿ ಅಧಿಕಾರಿ ಆದ ಸಂಗೀತ ಬಗಲಿ ಮೇಡಂ ಅವರಿಗೆ ಮಾಹಿತಿ ಹಕ್ಕಿನ ನಿಯಮವು ಗಮನಕ್ಕೆ ಇದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ,ನಾನು ತುಂಬಾ ದಿನಗಳಿಂದ ಈ ಪಂಚಾಯತಿಯಲ್ಲಿ ಸೇವೆಯನ್ನು ಸಲ್ಲಿಸಿದ್ದೇನೆ ಈ ಮಾಹಿತಿಯನ್ನು ಕೊಟ್ಟರೆಷ್ಟು ಬಿಟ್ಟರೆಷ್ಟು ಅಂದುಕೊಂಡಿದ್ದಾರೆ ಏನೋ ಅನಿಸುತ್ತದೆ ಆದರೆ ಇನ್ನೊಂದು ವಿಷಯ ಅಂದರೆ ಇಲ್ಲಿವರೆಗೆ ಸಾಕಷ್ಟು ಜನ ಮಾಹಿತಿಯನ್ನು ಕೇಳಿದ್ದಾರೆ ಇಲ್ಲಿಯವರೆಗೆ ಯಾರಿಗೂ ಇವರು ಮಾಹಿತಿಯನ್ನು ಒದಗಿಸಿ ಕೊಟ್ಟಿಲ್ಲ ಹೀಗಾಗಿ ಇವರಿಗೂ ಕೂಡಾ ಯಾಕೆ ಕೊಡಬೇಕು ಅಂದುಕೊಂಡಿದ್ದಾರೆ ಏನೋ?ಈ ಅಭಿವೃದ್ಧಿ ಅಧಿಕಾರಿಯ ಮೇಲಾಧಿಕಾರಿಗಳು ಇವರು ಮಾಡಿದ ಎಲ್ಲಾ ಕಾಮಗಾರಿಗಳನ್ನು ಪರಿಶೀಲನೆ ಮಾಡಿ ಇವರು ಮಾಡಿದ ತಪ್ಪುಗಳಲ್ಲಿ ಆ ತಪ್ಪುಗಳ ತಕ್ಕಂತೆ ಸೂಕ್ತವಾಗಿ ಇವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂಬುದನ್ನು ಕಾದು ನೋಡೋಣ."

**– ಅರವಿಂದ್ ಕಾಂಬಳೆ,**
**ಕರುನಾಡ ಕಂದ ವರದಿಗಾರರು**
**ಹಾಗೂ ಸ್ಥಳೀಯ ನಿವಾಸಿ,ಆರ್.ಟಿ.ಐ**
**ಕಾರ್ಯಕರ್ತರು**

# ಹಲ್ಬರ್ಗಾದ ಅನುಗ್ರಹ ಶಾಲೆಯಲ್ಲಿ ಪೋಷಕ ಶಿಕ್ಷಕರ ಸಭೆ





ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಹಲ್ಬರ್ಗಾದ ಅನುಗ್ರಹ ಶಾಲೆಯಲ್ಲಿ 2023-24 ನೇ ಸಾಲಿನ ಪೋಷಕ ಶಿಕ್ಷಕರ ಸಭೆಯನ್ನು ಹಮ್ಮಿಕೊಳ್ಳಲಾಯಿತು.ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಸ್ಥಾನವನ್ನು ಶ್ರೀ ಎಂ.ಡಿ.ಮಜಹರ್ ಹುಸೇನ್ ಕ್ಷೇತ್ರ ಶಿಕ್ಷಣಾಧಿಕಾರಿಗಳು ಭಾಲ್ಕಿರವರು ಅಲಂಕರಿಸಿದರು.ಅಧ್ಯಕ್ಷ ಸ್ಥಾನವನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಫಾದರ್ ಪ್ರಸನ್ನ ಕುಮಾರ್ ಅವರು ವಹಿಸಿಕೊಂಡಿದ್ದರು.

ಪೋಷಕರ ಪ್ರತಿನಿಧಿಯಾಗಿ ಶ್ರೀ ಉಮಾಕಾಂತ್ ಜಾಂತಿರವರು,ಶ್ರೀಮತಿ ಭಾಗ್ಯಲಕ್ಷ್ಮಿ ಮೂಲ್ಗೆರವರು ಹಾಗೂ ಫಾದರ್ ಸತೀಶ್ ಕುಮಾರ್,ಫಾದರ್ ಲಾರೆನ್ಸ್ ಉಪಸ್ಥಿತರಿದ್ದರು. ಮನೆಯೇ ಮೊದಲ ಪಾಠಶಾಲೆ ಜನನೀಯೇ ಮೊದಲ ಗುರು,ಪೋಷಕ ಶಿಕ್ಷಕರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಪಾತ್ರ ಅತಿ ಮುಖ್ಯವಾದದ್ದು ಮಕ್ಕಳ ಅಭಿವೃದ್ಧಿಯಲ್ಲಿ ಶಿಕ್ಷಕರು ಹಾಗೂ ಪೋಷಕರು ಅತಿ ಪರಿಶ್ರಮದಿಂದ ಹಾಗೂ ಕಾಳಜಿಯಿಂದ ಅವರಿಗೆ ಮಾರ್ಗದರ್ಶನ ಮಾಡಬೇಕು ದೇಶದ ಅಭಿವೃದ್ಧಿಯಲ್ಲಿ ಆ ಮಕ್ಕಳ ಪಾತ್ರವೂ ಅತಿ ಅವಶ್ಯಕವಾಗಿದೆ ಒಬ್ಬ ಒಳ್ಳೆಯ ಪ್ರಜೆಯನ್ನು ನಿರ್ಮಾಣ ಮಾಡುವುದರಲ್ಲಿ ಪೋಷಕರು ಶಿಕ್ಷಕರು ಒಟ್ಟಾಗಿ ಸೇರಿ ದುಡಿಯಬೇಕು ಆಗ ಮಾತ್ರ ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಲು ಸಾಧ್ಯವಾಗುತ್ತದೆ ಮಕ್ಕಳದಾವರು ಕುಚೇಷ್ಟೆ ಮಾಡುವುದು ಸಹಜ ಆದರೆ ತಿದ್ದಿ ನಾವೆಲ್ಲರೂ ಬುದ್ಧಿ ಹೇಳುವುದು ಬಹು ಮುಖ್ಯವಾಗಿದೆ.

ಮಕ್ಕಳಿಗೆ ಬೇರೆ ಮಕ್ಕಳೊಂದಿಗೆ ಹೋಲಿಕೆಯನ್ನು ಯಾವ ಪೋಷಕರೂ ಕೂಡಾ ಮಾಡಬಾರದೆಂದು ಕಿವಿಮಾತು ಹೇಳಿದರು ಶಾಲೆಯ ಮುಖ್ಯೋಪಾಧ್ಯಾಯರಾದ ಫಾದರ್ ಪ್ರಸನ್ನ ಕುಮಾರ್ ಅವರು ಮಾತನಾಡಿ ಮಕ್ಕಳ ಅಭಿವೃದ್ಧಿಯ ಹಿತ ದೃಷ್ಟಿಯಿಂದ ಹಲವು ಯೋಜನೆಗಳನ್ನು ಕಾರ್ಯಗತಗೊಳಿಸಿದ್ದೇವೆ ಇನ್ನೂ ಯಾವುದೇ ನೀವು ಸಲಹೆ ಸೂಚನೆಗಳನ್ನು ನೀಡಿದರೂ ನಾವು ಅದನ್ನು ಪಾಲಿಸಲು ಸದಾ ಸಿದ್ಧರಿದ್ದೇವೆ ಎಂದು ಹೇಳಿದರು.ಕಾರ್ಯಕ್ರಮದ ನಿರೂಪಣೆಯನ್ನು ಮಂಜುನಾಥ್ ರವರು, ಸ್ವಾಗತವನ್ನು ಮಿಸ್.ಶಿವಕುಮಾರಿ ರವರು ನಡೆಸಿಕೊಟ್ಟರು.

**ವರದಿ-ಮಹಾನ್ ಕೋಟೆ**

ನಾಡಿನ ಸಮಸ್ತ ಜನತೆಗೆ ದೀಪಾವಳಿ
ಹಬ್ಬದ ಹಾರ್ದಿಕ ಶುಭಾಶಯಗಳು

ಶುಭ ಕೋರುವವರು:

ಶ್ರೀ ಕೆ ಆರ್ ದೇವರಾಜು
ಅಧ್ಯಕ್ಷರು ಕೃಷಿ ಪತ್ತಿನ
ಸಹಕಾರ ಸಂಘ ಕರಡಿ,
ಮಾಜಿ ಅಧ್ಯಕ್ಷರು
ಹಾಲಿ ಸದಸ್ಯರು
ಕರಡಿ ಗ್ರಾಮ ಪಂಚಾಯಿತಿ.
ತಾ.ತಿಪಟೂರು
ಜಿ.ತುಮಕೂರು

ಕರುನಾಡ ಕಂದ
ಸಂಪುಟ-03 । ಸಂಚಿಕೆ-02
ದಿನಾಂಕ: 16-11-2023 । ಪುಟಗಳು: 16

# ಶತಮಾನದ ಇತಿಹಾಸವುಳ್ಳ ಧಾರೂರ ಜಾತ್ರೆ ಮುಂದೂಡಿಕೆ



ಬೀದರ್:14/11/2023 ರಿಂದ 19/11/2023 ನಡೆಯಬೇಕಿದ್ದ ಪವಿತ್ರ ಧಾರೂರು ಜಾತ್ರೆಯು ಕಾರಣಾಂತರದಿಂದ ಮುಂದೂಡಲಾಗಿದೆ. ಇದೇ ಪವಿತ್ರ ಜಾತ್ರೆಯನ್ನು ದಿನಾಂಕ 5/12/2023 ರಿಂದ 10/12/2023 ರಂದು ನಿಗದಿಪಡಿಸಲಾಗಿದೆ. ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ನಡೆಯಬೇಕಿದ್ದ ಈ ಜಾತ್ರಾ ಮಹೋತ್ಸವವು ಡಿಸೆಂಬರ್ ತಿಂಗಳಿಗೆ ಮುಂದೂಡಲು ಕಾರಣ ತೆಲಂಗಾಣ ರಾಜ್ಯದಲ್ಲಿ ವಿಧಾನ ಸಭೆಯ ಚುನಾವಣೆ.ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ದೇಶದ ನಾನಾ ಕಡೆಯಿಂದ ಬಂದು ಸೇರುವವರು ಅವರಿಗೆ ಸೂಕ್ತ ಪೋಲೀಸ್ ಬಂದೋಬಸ್ತ್ ಗೆ ತೊಂದರೆಯಾಗುತ್ತದೆ ಎಂದು ರೆವೆರೆಂಟ್ ಎನ್.ಎಲ್.ಕರ್ಕರೆ ಬೆಂಗಳೂರು,ರೀಜನಲ್ ಕಾನ್ಫರೆನ್ಸ್ ಬಿಷಪ್ ಅಯ್ಯನವರು,ರೆವೆರೆಂಟ್. ಎಂ ಎ.ಡ್ಯಾನಿಯಲ್ ಹೈದ್ರಾಬಾದ್,ರೀಜನಲ್ ಕಾನ್ಫರೆನ್ಸ್ ಬಿಷಪ್ ಅಯ್ಯನವರು ಹಾಗೂ ಜಾತ್ರಾ ಸಮಿತಿಯ ಮುಂದಾಲೋಚನೆ ಮಾಡಿ ಇದನ್ನು ಮುಂದೂಡಿದ್ದಾರೆ ಈ ಐತಿಹಾಸಿಕ ಜಾತ್ರೆಯ ಬಗ್ಗೆ ಮಾತನಾಡಿದ ಸೆಂಟ್ ಪೌಲ್ ಮೆಥಡಿಸ್ಟ್ ಚರ್ಚ್ ಬೀದರ್ (ಉತ್ತರ) ಜಿಲ್ಲಾ ಮೇಲ್ವಿಚಾರಕರಾದ ರೆವೆರೆಂಟ್ ನೆಲ್ಸನ್ ಸುಮಿತ್ರರವರು ಧಾರೂರ ಜಾತ್ರೆಯು ಅತೀ ಪವಿತ್ರವಾದದ್ದು ಪ್ರತಿಯೊಬ್ಬ ಭಕ್ತಾದಿಗಳು ಜಾತ್ರೆಗೆ ಬರುವಾಗ ಅತಿ ಶ್ರದ್ದೆ ಭಕ್ತಿ ಪೂರ್ವಕವಾಗಿ ಹಾಗೂ ಶಿಸ್ತಿನಿಂದ

ಭಾಗವಹಿಸಬೇಕೆಂದು ಮನವಿ ಮಾಡಿದ್ದಾರೆ . ಚುನಾವಣೆ ಸಮಯದಲ್ಲಿ ನಿಗದಿ ಮಾಡಿದರೆ ಭಕ್ತಾದಿಗಳಿಗೆ ಸೂಕ್ತ ಪೋಲೀಸ್ ಬಂದೋಬಸ್ತ್ (ರಕ್ಷಣೆ) ನೀಡುವುದು ತೊಂದರೆಯಾಗುತ್ತದೆ ಎನ್ನುವುದನ್ನು ಮನಗಂಡು ಈ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ ಎಂದು ತಿಳಿಸಿದರು ನಮಗೆ ಎಲ್ಲಕ್ಕಿಂತಲೂ ಮಿಗಿಲಾಗಿ ಭಕ್ತಾದಿಗಳ ರಕ್ಷಣೆ ಅತಿ ಅವಶ್ಯಕ ಈ ಜಾತ್ರೆಯು ಯಶಸ್ವಿಯಾಗಲು ಪ್ರಾರ್ಥನೆ ಮಾಡಬೇಕೆಂದು ಸಮಸ್ತ ಭಕ್ತಾದಿಗಳಲ್ಲಿ ಇದೇ ಸಂದರ್ಭದಲ್ಲಿ ವಿನಂತಿಸಿದರು.

**ವರದಿ-ಮಹಾನ್ ಕೋಟೆ**

# ಗುರುದತ್ತ ಧ್ಯಾನ ಮಂದಿರದಲ್ಲಿ ಭರ್ಜರಿ ಕೋಲಾಟ ಪ್ರದರ್ಶನ





ಬೀದರ ನಗರದ ರಾಂಪೂರೆ ಕಾಲೋನಿಯಲ್ಲಿರುವ ಗುರುದತ್ತ ಧ್ಯಾನ ಮಂದಿರದಲ್ಲಿ ಭರ್ಜರಿ ಕೋಲಾಟ ಮತ್ತು ವಿವಿಧ ಪಾತ್ರಗಳ ಪ್ರದರ್ಶನ ನಗರದ ಗುರುದತ್ತ ಧ್ಯಾನ ಮಂದಿರದಲ್ಲಿ ಪೂಜ್ಯ ಗುರುದತ್ತ ಗುರೂಜಿಯವರ 73ನೇ ಜನ್ಮ ದಿನಾಚರಣೆ ನಿಮಿತ್ಯವಾಗಿ ಸಹಜ ಸ್ಥಿತಿ ಯೋಗದ ಹಲವಾರು ಸತ್ಸ0ಗಿಗಳಿಂದ ಕೋಲಾಟ ಪ್ರದರ್ಶನ ಜರುಗಿತು,ಇದೇ ಸಂದರ್ಭದಲ್ಲಿ ಸತ್ಸಂಗಿಗಳು ವೈವಿಧ್ಯಮಯ ವೇಷಧಾರಿಗಳಾಗಿ ಮನಸೊರೆಗೊಳ್ಳುವ ಪ್ರದರ್ಶನವನ್ನು ಸಹ ನೀಡುವುದರ ಮೂಲಕ ಜನರ ಮನ ಸೆಳೆದರು. ವಿವಿಧತೆಯಲ್ಲಿ ಏಕತೆ ಎಂಬಂತೆ,ವಿವಿಧ ಪಾತ್ರಗಳಾದ ಗುರು ಬಸವಣ್ಣ,ಮಾತೆ ಅಕ್ಕ ಮಹಾದೇವಿ,ಅಲ್ಲಮಪ್ರಭು,ಇನ್ನೂ ಹಲವು ಶರಣ ಶರಣೆಯರು ಹಾಗೂ ಶ್ರೀರಾಮಚಂದ್ರ,ಲಕ್ಷ್ಮಣ, ಸೀತಾ,ಹನುಮಂತ,ಮಾಯಾಮೃಗ,ಕೃಷ್ಣ,ರಾಧ ', ಗೋಪಿಕೆಯರು,ಒನಕೆ ಓಬವ್ವ,ಶಿವ,ಗಣಪತಿ, ಸರ್ದಾರ್ ಜಿ,ಛತ್ರಪತಿ ಶಿವಾಜಿ,ವಕೀಲ,ಡಾಕ್ಟರ್, ಚೆನ್ನ,ಚೆನ್ನಿ,ರಾವಣ,ರೋಗಿ ಮುಂತಾದ ವೇಷಗಳನ್ನು ತೊಟ್ಟು ಆಕರ್ಷಕವಾದ ಕೋಲಾಟ ಆಡುವುದರೊಂದಿಗೆ ನಡುವೆ ವಿವಿಧ ರಾಮಾಯಣ, ಮಹಾಭಾರತದ ದೃಶ್ಯ ರೂಪಕಗಳನ್ನು ಪ್ರದರ್ಶನ ಮಾಡಿದರು ಕೇಂದ್ರ ಸಂಚಾಲಕರಾದ ವೀರಶೆಟ್ಟಿಕಾರ ಇವರ ನೇತೃತ್ವದಲ್ಲಿ ಹಾಗೂ ರಾಜಕುಮಾರ ಸಂಗೊಳಗಿ,ವಿಶ್ವನಾಥ ಸಂಗೊಳಗಿ,ರಾಜಕುಮಾರ ಹುಮನಾಬಾದ ಹಾಗೂ ವಿಶ್ವನಾಥ ಇವರು ನೀಡಿರುವ ತರಬೇತಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು.

ಈ ಕೋಲಾಟವನ್ನು ವೀಕ್ಷಿಸಲು ಅಪಾರ ಸಂಖ್ಯೆಯಲ್ಲಿ ಸತ್ಸಂಗಿಗಳು,ಕಲಾ ಪ್ರೇಮಿಗಳು, ಕಿಕ್ಕಿರಿದ ಜನಸ್ತೋಮ ಕಾರ್ಯಕ್ರಮಕ್ಕೆ ಕಳೆ ತರುವ ಮೂಲಕ ಯಶಸ್ವಿಗೆ ಸಾಕ್ಷಿಯಾದರು.

ವೀರಶೆಟ್ಟಿ ಕಾಗ ದಂಪತಿಗಳು ಎಲ್ಲಾ ಕಲಾವಿದರಿಗೆ ಆರತಿ ಬೆಳಗಿ ಪುಷ್ಪಾರ್ಚನೆಗೈದು ಸರ್ವರಿಗೂ ಸ್ವಾಗತ ಕೋರಿದರು,ಬಸವರಾಜ ಮೂಲಗೆಯವರು ಕಾರ್ಯಕ್ರಮದ ಕುರಿತು ಮಾತನಾಡಿದರು ಹಾಗೂ ಶರಣು ಹಣಮಶೆಟ್ಟೆಯವರು ಎಲ್ಲರಿಗೂ ಧನ್ಯವಾದ ಸಮರ್ಪಣೆ ಮಾಡಿದರು.

**ವರದಿ-ಮಹಾನ್ ಕೋಟೆ**

# ಜಯ ಕರ್ನಾಟಕ ಜನಪರ ವೇದಿಕೆಯಿಂದ ಕನ್ನಡ ರಾಜ್ಯೋತ್ಸವ ಆಚರಣೆ



ಧಾರವಾಡ:ಕರ್ನಾಟಕ ರಾಜ್ಯೋತ್ಸವವನ್ನು ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಧಾರವಾಡದ ಶ್ರೀನಗರ ವೃತ್ತದಲ್ಲಿ ವೇದಿಕೆಯ ರಾಜ್ಯ ಉಪಾಧ್ಯಕ್ಷರಾದ ಶ್ರೀಮುತ್ತು ಬೆಳ್ಳಕ್ಕಿ ನೇತೃತ್ವದಲ್ಲಿ ತಾಯಿ ಭುವನೇಶ್ವರಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಅದ್ದೂರಿಯಾಗಿ ಆಚರಿಸಲಾಯಿತು,ಇದೆ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಾದ ಮಹಾದೇವ ಸತ್ತಿಗೇರಿ ಉತ್ತರ ಕರ್ನಾಟಕದ ಖ್ಯಾತ ಹಾಸ್ಯ ಕಲಾವಿದರು,ಕುಮಾರಿ ಭೂಮಿಕಾ ಬನ್ನಿಕೊಪ್ಪ ಟೈಕ್ವಾಂಡೊ ಕರಾಟೆ ಕಂಚಿನ ಪದಕ,ಕುಮಾರಿ ದಾಮಿನಿ ಬನ್ನಿಕೊಪ್ಪ ಟೈಕ್ವಾಂಡೊ ಕರಾಟೆ ಬೆಳ್ಳಿಯ ಪದಕ,ಬಸವರಾಜ ಹುಬ್ಬಳ್ಳಿ ಶಿಕ್ಷಕರು,ಮಾಜಿ ಸೈನಿಕರಾದ ಉಳ್ಳವಪ್ಪ ಶಿಗಿಹಳ್ಳಿ ಸಿಂಕದ್ರ ಶೇಖಯವರಿಗೆ ವೇದಿಕೆಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆಯ ಪದಾಧಿಕಾರಿಗಳಾದ ಜಗದೀಶ ಜಾದವ,ಮಲ್ಲಿಕಾರ್ಜುನ ಅಸುಂಡಿ, ಮಂಜುನಾಥ ಅಂಗಡಿ,ಸುಭಾಷ ಪಾಳೇಕರ,ಅನ್ವರ ನದಾಫ್,ಜ್ಯೋತಿಬಾ ಪಾಟೀಲ,ಅರ್ಷದ ಪಠಾಣ, ಅರುಣ ಜಾದವ,ದಯಾನಂದ ಜಾದವ, ಮಲ್ಲಿಕಾರ್ಜುನ ಬಂಡೆ ಉಮೇಶ ಶಿಂಧೆ, ಮೆಹಬೂಬ್ ಮೆಹಬೂಬ ಪಠಾಣ,ಯೋಗೇಶ ಪೂಳ,ವಿಠಲ ಚಿಮ್ಮಲಗಿ,ರಾಘವೇಂದ್ರ ಸುಣಗದ, ಸಂತೋಷ ಇಂಗಳೆ ಸಂಜಯ ಹೊಸಮನಿ,ವಿನಯ ಬೆಳ್ಳಕ್ಕಿ,ಜೈಲಾನಿ ಜೀಗರ,ವಿವೇಕಾನಂದ ಕಡೇಮನಿ,ಅಶೋಕ ಶೆಟ್ಟಿ, ಸುಭಾಷ ಅಮ್ಮನಭಾವಿ,ಮಂಜುನಾಥ ಪೂಜಾರ ಮಹ್ಮದ ನೀಲಿ,ರಾಜು ಆಲೂರು,ವೆಂಕಟೇಶ ಮೂರ್ತಿ, ಪ್ರಮೋದ ಶೆಟ್ಟಿ,ರವಿ ಮೇಟಿ,ಅರುಣ ತೆಲಗಾರ, ಕರೀಮಖಾನ ಮುಲ್ಲಾ,ಪ್ರಶಾಂತ ಶೆಟ್ಟಿ, ಮುಂತಾದವರು ಉಪಸ್ಥಿತರಿದ್ದರು.

**ವರದಿ-ಸದಾಶಿವ ಭೀಮಪ್ಪ ಮುಡೆಮ್ಮನವರ**

# ಎಂಟು ತಿಂಗಳಾದರೂ ಪೂರ್ಣಗೊಳ್ಳದ ಕಾಮಗಾರಿ



ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಇಂಗಲವಾಡಿ ಗ್ರಾಮದಲ್ಲಿ ಮಾರ್ಚ್ ತಿಂಗಳಲ್ಲಿ ಕಾಮಗಾರಿಗೆ ಮಾಜಿ ಶಾಸಕ ನಿರಂಜನ್ ಕುಮಾರ್ ಅವರು ಚಾಲನೆ ನೀಡಿದ್ದು ಇದುವರೆಗೂ ಪೂರ್ಣವಾಗಿಲ್ಲ ಇದರಿಂದಾಗಿ ಊರಿನಲ್ಲಿ ತಿರುಗಾಡಲು ತುಂಬಾ ತೊಂದರೆ ಆಗಿದೆ ಆದಷ್ಟು ಬೇಗ ಕಾಮಗಾರಿಯನ್ನು ಮುಗಿಸಲು ಟೆಂಡರ್ ವ್ಯಕ್ತಿಗೆ ಕರೆ ಮಾಡಿದರೆ ಇನ್ನೂ ಬಿಲ್ಲು ಆಗಿಲ್ಲ ಅಂತ ಹೇಳುತ್ತಿದ್ದಾನೆ ಗ್ರಾಮಸ್ಥರು ಕರುನಾಡ ಕಂದ ಪತ್ರಿಕೆಗೆ ತಿಳಿಸಿದ್ದಾರೆ.

**ವರದಿ-ಕುಮಾರ್ ಗುಂಡ್ಲುಪೇಟೆ**

ಕರುನಾಡ ಕಂದ
ಸಂಪುಟ-03 | ಸಂಚಿಕೆ-02
ದಿನಾಂಕ: 16-11-2023 | ಪುಟಗಳು: 16

# ಪರಿಶಿಷ್ಟರಿಗೆ ಸಾಲ ಸೌಲಭ್ಯ ನೀಡಲು ಕ್ರಮ:ಶಾಸಕ ಗಣೇಶ್ ಪ್ರಸಾದ್

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಇತ್ತೀಚೆಗೆ ಎಸ್.ಸಿ,ಎಸ್.ಟಿ ಹಿತ ರಕ್ಷಣಾ ಸಭೆ ಜರುಗಿತು.ಈ ಕಾರ್ಯಕ್ರಮದಲ್ಲಿ ಪರಿಶಿಷ್ಟ ಸಮುದಾಯದವರಿಗೆ ವಿವಿಧ ನಿಗಮಗಳಿಂದ ನೀಡುವ ಸಾಲ ಸೌಲಭ್ಯಗಳನ್ನು ನೀಡಲು

ಅಗತ್ಯಕ್ರಮ ಕೈಗೊಳ್ಳುವುದಾಗಿ ಶಾಸಕ ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ನಡೆದ ಎಸ್ ಸಿ,ಎಸ್ ಟಿ ಹಿತರಕ್ಷಣಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಆರ್ ಬಿ ಐ ನಿಯಮಾನುಸಾರ ಬ್ಯಾಂಕ್ ಗಳು ಸಾಲ ಸೌಲಭ್ಯ ನೀಡುತ್ತವೆ ಎಂದು ಹೇಳಿದರು.

ಅಂಬೇಡ್ಕರ್ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಆಯ್ಕೆಯಾಗಿರುವ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಸೌಲಭ್ಯ ನೀಡಲು ವಿನಾಕಾರಣ



ವರ್ಷಪೂರ್ತಿ ಅಲೆಸುತಿದ್ದಾರೆ ಎಂದು ದಲಿತ ಮುಖಂಡರು ದೂರು ನೀಡಿದರು.

ಇದಕ್ಕೆ ಉತ್ತರಿಸಿದ ಲೀಡ್ ಬ್ಯಾಂಕ್ ಅಧಿಕಾರಿ ಸುರೇಖಾ ಆರ್ ಬಿ ಐ ನಿಯಮಾವಳಿ ಪ್ರಕಾರ ಸಾಲ ನೀಡಲಾಗುತ್ತದೆ ಎಂದು ಹೇಳಿದರು ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಮುಖಂಡ ಶಿವಕುಮಾರ್ ತಾಲ್ಲೂಕಿನ ಕನ್ನೇಗಾಲ ಗ್ರಾಮದ ಪರಿಶಿಷ್ಟ ಸಮುದಾಯದ ಯುವಕನಿಗೆ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲು ಎರಡು ವರ್ಷಗಳಿಂದ ಅಲೆಸುತ್ತಿದ್ದಾರೆ ಸಬ್ಸಿಡಿ ಹಣ ಬ್ಯಾಂಕಿನಲ್ಲಿ ಇದ್ದು ಇದಕ್ಕೆ ನೀವೇನಾದರೂ ಬಡ್ಡಿ ನೀಡುತ್ತೀರಾ ಸರ್ಕಾರ ನೀಡಿರುವ ಸಬ್ಸಿಡಿ ಹಣ ನೀಡಲು ಯಾಕೆ ಇಷ್ಟು ಸತಾಯಿಸುತ್ತಿರಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆರ್.ಬಿ.ಐ ನಿಯಮದ ಪ್ರಕಾರ ಪ್ರತಿ ಮೂರು ತಿಂಗಳಿಗೆ ಗ್ರಾಹಕರ ಸಭೆ ನಡೆಸಬೇಕು ಇದನ್ನು ಪಾಲಿಸಿದ್ದಾರಾ ಎಂದು ವಕೀಲ ಕಾಂತರಾಜು ಅಧಿಕಾರಿಯನ್ನು ಪ್ರಶ್ನೆ ಮಾಡಿದರು ಇದಕ್ಕೆ ಉತ್ತರಿಸಿದ ಅವರು ಆಗಸ್ಟ್ ತಿಂಗಳಲ್ಲಿ ಸಭೆ ನಡೆಸಿದ್ದು ಮುಂದಿನವಾರದ ಮತ್ತೊಂದು ಸಭೆಯನ್ನು ಏರ್ಪಡಿಸುವುದಾಗಿ ಹೇಳಿದರು.


ರಾತ್ರಿ ಹಗಲು ಎನ್ನದೆ ಅಕ್ರಮವಾಗಿ ಕ್ವಾರೆ ನಡೆಸುತಿದ್ದು ಸ್ಮಶಾನವನ್ನು ಒತ್ತುವರಿ ಮಾಡಿಕೊಂಡು ಕ್ವಾರೆ ನಡೆಸುತ್ತಿರುವುದರಿಂದ ಶವವನ್ನು ಹೂಳಲು ಜಾಗವಿಲ್ಲದೆ ಪರದಾಡುತ್ತಿದ್ದೇವೆ ಎಂದು ಹಿರಿಕಾಟಿ ಗ್ರಾಮಸ್ಥರು ಶಾಸಕರ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು ಇದಕ್ಕೆ ಸ್ಪಂದಿಸಿದ ಶಾಸಕ ಗಣೇಶ್ ಪ್ರಸಾದ್ ಇನ್ನೆರಡು ಮೂರು ದಿನಗಳಲ್ಲಿ ತಹಸೀಲ್ದಾರ್ ಮತ್ತು ನಾನು ಭೇಟಿ ನೀಡುವುದಾಗಿ ಹೇಳಿದರು.ಸಭೆಯಲ್ಲಿ ಪುರಸಭಾ ಮಾಜಿ ಅಧ್ಯಕ್ಷ ಪಿ.ಗಿರೀಶ್,ಪುರಸಭಾ ಸದಸ್ಯರಾದ ಕುಮಾರ್,ಶ್ರೀನಿವಾಸ್ ಕಣ್ಣಪ್ಪ,ರಂಗಸ್ವಾಮಿ,ತಹಸೀಲ್ದಾರ್ ರಮೇಶ್ ಬಾಬು,ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ರಾಮಲಿಂಗಯ್ಯ,ಎಸ್. ಸಿ.ಮತ್ತು ಎಸ್.ಸಿ,ಎಸ್.ಟಿ ಹಿತರಕ್ಷಣಾ ಸಮಿತಿಯ ಶ್ರೀನಿವಾಸ್,ಕೆಂಪರಾಜು,ಬಂಗಾರನಾಯಕ , ಇನ್ಸ್ಪೆಕ್ಟರ್ ಪರಶಿವಮೂರ್ತಿ,ಬೇಗೂರು ವೃತ್ತ ನಿರೀಕ್ಷಕ ವನರಾಜು ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

**ವರದಿ-ಕುಮಾರ್ ಗುಂಡ್ಲುಪೇಟೆ**

# ಅಧಿಕಾರಿಗಳ ನಿರ್ಲಕ್ಷದ ಕಾರಣ ರೈತರ ನಡುವೆ ಪ್ರತಿ ದಿನ ಹೊಡೆದಾಟ-ಗುದ್ದಾಟ

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಮುರಗಾನೂರ ಗ್ರಾಮದಲ್ಲಿ ಕಾನೂನು ಬಾಹಿರವಾಗಿ ಮುಖ್ಯ (ದೊಡ್ಡ) ಕಾಲುವೆಗೆ ಅಡ್ಡಗಟ್ಟಿ ಗುಮ್ಮಿ ಹಾಕಿಕೊಂಡು ಎಫ್ ಆಯ್ ಸಿ ಗೆ ನೀರು ಹರಿಸಿಕೊಂಡಿರುವ ರೈತರನ್ನು ಕಣ್ಣಾರೆ ಕಂಡ ಕೆ ಬಿ ಜಿ ಎನ್ ಎಲ್ ಜೆಇ ಮಹೇಶ ಪಾಟೀಲ್ ಕಣ್ಮುಚ್ಚಿ ಕುಳಿತುಕೊಂಡಿದ್ದಾರೆ,ನನ್ನ ಹೊಲಕ್ಕೆ ಅಡ್ಡಗಟ್ಟಿ ಗುಮ್ಮಿ ಹಾಕಿಕೊಂಡು ಕೆಳಗಿರುವ ರೈತರು ತೆಗೆದುಕೊಂಡ ಎಫ್ ಆಯ್ ಸಿ ಕಾಲುವೆಯು ತುಂಬಾ ಮಿತಿ-ಮೀರಿ ನೀರನ್ನು ತೆಗೆದುಕೊಂಡು ಹೋಗುತ್ತಿರುವುದರಿಂದ ಮೇಲಿನ ರೈತರಾದ ರಾಜಕುಮಾರವರ ಹೊಲ ಜೀತುಬಿದ್ದು ಹೋಗಿದ್ದರಿಂದ ರಾಜಕುಮಾರ ರವರ ಹೊಲದಲ್ಲಿನ ಬೆಳೆಗಳು ನಷ್ಟವಾಗಿ,ಕಬ್ಬಿನ ವಾಹನ,ಜನ,ಜಾನುವಾರಗಳು ಅಡ್ಡಾಡದ ಹಾಗೆ ಬಿದ್ದು ಹೋಗಿದೆ.ರಾಜಕುಮಾರ ಹೊಲದ ಮೇಲಿನ ರೈತರಾದ ಚಂದ್ರಾಮ ಚೀರಲ್ದಿನ್ನಿ,ಸಿದ್ದಣಗೌಡ ಇವರಿಬ್ಬರು ಹೊಲದಿಂದ ಎಫ್ ಆಯ್ ಸಿ ಕಾಲುವೆಯಿಂದ ಕೆಳಗಿರುವ ರಾಜಕುಮಾರ ಮತ್ತು ಉಳಿದ ರೈತರಿಗೆ ನೀರು ಸಾಗುತ್ತದೆ ಮೇಲಿರುವ ರೈತ ಚಂದ್ರಾಮ ಮತ್ತು ಸಿದ್ದಣಗೌಡರ ಹೊಲದಲ್ಲಿನ ಎಫ್ ಆಯ್ ಸಿ ಕಾಲುವೆ ಸ್ವಚ್ಚಗೊಳಿಸದಿರುವುದರಿಂದ ನಾವು ಕೆಳಗಿರುವ ರೈತರು ಅಡ್ಡಗಟ್ಟಿ ನೀರನ್ನು ತೆಗೆದುಕೊಂಡು ಹೋಗುತ್ತೇವೆ.ಕೃಷ್ಣ ಭಾಗ್ಯ ಜಲ ನಿಗಮದ ಅಧಿಕಾರಿಗಳು ಸ್ವಚ್ಚ ಮಾಡಿಕೊಡುತ್ತಿರೋ ಅಥವಾ ನಿಮ್ಮ ನಿಮ್ಮ ಸಂಬಂಧ ಪಟ್ಟ ಮೇಲಿನ ರೈತರು ಸ್ವಚ್ಚ ಮಾಡತ್ತೀರೋ ಇಲ್ಲವೋ ಗೊತ್ತಿಲ್ಲ ಯಾರಾದರೂ ಒಬ್ಬರು ಮಾಡಿಕೊಟ್ಟರೆ ನಾವು ನೀರನ್ನು ಓಪೀಯಮ್ ನಿಂದ ತೆಗೆದುಕೊಂಡು ಹೊಗುತ್ತೇವೆ ಎಂದು ರೈತರು ಪಟ್ಟು ಹಿಡದಿದ್ದಾರೆ. ಮೇಲೆ ಮತ್ತು ಕೆಳಗಿರುವ ರೈತರಿಗೆ ಕೇಳಿದರೆ ಸುಮಾರ ಐದು ಜನರು ಗುಂಪು ಕಟ್ಟಿಕೊಂಡು ಹೊಡೆಯಲು ಬರುತ್ತಾರೆ ನಾನು ಅಂದು ಅಲ್ಲಿಂದ ತಪ್ಪಿಸಿಕೊಂಡು ಬೇರೆ ಕಡೆ ಹೋಗದಿದ್ದರೆ ಅವತ್ತು ನನ್ನನು ಹೊಡೆದು ಸ್ಮಶಾನಕ್ಕೆ ಸೇರಸ್ತಾ ಇದ್ರು ಹಾಗೆಯೇ ಜೆ.ಇ ಮಹೇಶ ಸರ್ ರವರಿಗೆ ಹಲವಾರು ಬಾರಿ ಕರೆ ಮಾಡಿ ಹೇಳಿದರೂ ಕ್ಯಾರೆ ಎನ್ನಲಿಲ್ಲ ಎಂದು ರೈತ ರಾಜುಕುಮಾರವರು ಕರುನಾಡು ಕಂದ ಪತ್ರಿಕೆಯ ಮುಂದೆ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.ಸಂಬಧ ಪಟ್ಟ ಅಧಿಕಾರಿಗಳು ಮುಂದಿನ ದಿನಗಳಲ್ಲಿ ಯಾವ ರೀತಿಯಾದ ಕಾನೂನು ಸೂಕ್ತ ಕ್ರಮ ಕೈಗೊಳ್ಳುತ್ತಾರೆಂದು ಕಾದು ನೋಡಬೇಕು.

**ವರದಿ:ಚಂದ್ರಶಾಗೌಡ ಮಾಲಿ ಪಾಟೀಲ್**



# ಅವೈಜ್ಞಾನಿಕ ಕಾಮಗಾರಿ:ಬಂಕಾಪುರ ರಸ್ತೆಯಲ್ಲಿ ನಿರ್ಮಾಣವಾದ ಸಿಡಿಗೆ ಸಾರ್ವಜನಿಕರ ಆಕ್ರೋಶ




ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ನಗರದ ಬಂಕಾಪುರ ರಸ್ತೆಯ ಆಂಜನೇಯ ದೇವಸ್ಥಾನ ಬಳಿ ಪಟ್ಟಣ ಪಂಚಾಯ್ತಿ ಮುಂಡಗೋಡ ಅವರಿಂದ ನಿರ್ಮಾಣವಾದ ಅವೈಜ್ಞಾನಿಕ ಸಿಡಿ(ಹಂಪ್) ಬಗ್ಗೆ ಸಾರ್ವಜನಿಕರು ಹಿಡಿ ಶಾಪ ಹಾಕುತ್ತಿದ್ದು, ರಸ್ತೆಯಿಂದ ಸುಮಾರು ಒಂದೂವರೆ ಅಡಿ ಎತ್ತರಕ್ಕೆ ಸಿಡಿ ನಿರ್ಮಾಣ ಮಾಡಿದ್ದು ಇದರಿಂದ ಕಾರು,ಬಸ್ ಹಾಗೂ ಲಾರಿಗಳ ಬಂಪರ್ ಕಿತ್ತುಕೊಂಡು ಬರುತ್ತಿದೆ ಎಂದು ಹತ್ತಿರದಲ್ಲೇ ಇರುವ ಗ್ಯಾರೇಜ್ ಮಾಲೀಕರು ಸಿಡಿ ನಿರ್ಮಾಣ ದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸ್ ಪೇದೆ ಬಿದ್ದು ಗಾಯ:

ಇದೇ ಸಿಡಿಯ ಮೇಲೆ ಸಾಗುವಾಗ ಮುಂಡಗೋಡ ಪೊಲೀಸ್ ಠಾಣೆಯ ಪೇದೆಯೊಬ್ಬರು ಬುಲೆಟ್ ಬೈಕ್ ನಿಂದ ಬಿದ್ದು ತೀವ್ರ ಗಾಯ ಮಾಡಿಕೊಂಡಿದ್ದಾರೆ

ದಂಪತಿಗೆ ಗಾಯ:

ನ್ಯಾಸರ್ಗಿ ಮೂಲದ ದಂಪತಿಗಳಿಬ್ಬರೂ ಸೋಮವಾರ ಸಂತೆಗೆಂದು ಮುಂಡಗೋಡಕ್ಕೆ ಬರೋವಾಗ ಆಯತಪ್ಪಿ ಬಿದ್ದು ಬೈಕ್ ಗೆ ಹಾನಿಯಾಗಿ ದಂಪತಿಗಳಿಗೆ ತೀವ್ರ ರೀತಿಯ ಪೆಟ್ಟಾಗಿದ್ದು ಸಾರ್ವಜನಿಕರಿಗೆ ಉಪದ್ರವಕಾರಿಯಾಗಿರುವ ಈ ಸಿಡಿಯ ತೊಂದರೆಗೆ ವಿರಾಮ ಕೊಡಬೇಕೆಂದು ಸಾರ್ವಜನಿಕರು ಆಗ್ರಹ ಮಾಡುತ್ತಿದ್ದಾರೆ.

**-ಕರುನಾಡ ಕಂದ**

# ಲಕ್ಷ್ಮೇಶ್ವರದ ಪಂಪ ಮಹಾ ಕವಿಯ ಅಂಗಳದಲ್ಲಿ ಕನ್ನಡ ಹಬ್ಬ ರಾಜ್ಯೋತ್ಸವದ ಸಂಭ್ರಮ



ಗದಗ ಜಿಲ್ಲೆ ಲಕ್ಷ್ಮೇಶ್ವರ ಪಟ್ಟಣದ ಪಂಪ ಮಹಾಕವಿಯವರ ವೃತ್ತದಲ್ಲಿ ಆಟೋ ಚಾಲಕರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಚರಣೆ ಮಾಡಲಾಯಿತು.ಈ ಸಮಯದಲ್ಲಿ ಶ್ರೀ ರಂಬಾಪುರಿ ಶ್ರೀ ಶ್ರೀ 1008 ಜಗದ್ಗುರು ಡಾ.ವೀರಸೋಮೇಶ್ವರ ರಾಜದೇಶಿ ಕೇಂದ್ರ ಶಿವಾಚಾರ್ಯರು ಬಾಳೆಹೊನ್ನೂರ ಸಾನಿಧ್ಯವಹಿಸಿದ್ದರು ಮಾಜಿ ಶಾಸಕರಾದ ಶ್ರೀ ಗಂಗಣ್ಣ ಮಹಾಂತಾಶೆಟ್ಟರ,ಶ್ರೀ ವಿಜಯ ಹತ್ತಿಕಾಳ, ಶ್ರೀ ಮೆಕ್ಕಿ ಮತ್ತು ಸಹೋದರರು,ಗಂಗಣ್ಣ ಮೇನಶಿನಕಾಯಿ,ಆಟೋ ಚಾಲಕ ಸಂಘದವರು ಪಾಲ್ಗೊಂಡಿದ್ದರು ಈ ಸಂದರ್ಭದಲ್ಲಿ

ಶ್ರೀಗಳು ಮಾತನಾಡಿ ಇಂದಿನ ಆಧುನಿಕ ಯುಗದಲ್ಲಿ ನಮ್ಮ ನೆಲ,ಜಲ,ಭಾಷೆಯ ಬಗ್ಗೆ ನಮ್ಮ ಶಾಲಾ -ಕಾಲೇಜು ಮಕ್ಕಳಿಗೆ,ಮಹಿಳೆಯರಿಗೆ ಭಾಷಾಭಿಮಾನ ಬೆಳಸಬೇಕಾಗಿದೆ ನಮ್ಮ ಪಾಲಕರು ಕೇವಲ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆದರೆ ಮಾತ್ರ ಜಾಣರಾಗುತ್ತಾರೆ ಅನ್ನೋ ಮನಸ್ಥಿತಿಯಲ್ಲಿ ಇದ್ದಾರೆ ದಯಮಾಡಿ ನಮ್ಮ ಭಾವಿ ಪ್ರಜೆಗಳಲ್ಲಿ ನಮ್ಮ ಕನ್ನಡ ನಾಡು-ನುಡಿಯ ಬಗ್ಗೆ ಅರಿವು ಮೂಡಿಸಬೇಕೆಂದು ತಿಳಿಸಿದರು.

**ವರದಿ-ಸದಾಶಿವ ಭೀ ಮುಡೆಮ್ಮನವರ**

ಕರುನಾಡ ಕಂದ
ಸಂಪುಟ–03 । ಸಂಚಿಕೆ–02
ದಿನಾಂಕ: 16–11–2023 । ಪುಟಗಳು: 16

# ಸರ್ವರೋಗಕ್ಕೂ ದುಡ್ಡೇ ಮದ್ದು

ದುಡ್ಡಿಗೆ ನಾನಾತರಹದ ಹೆಸರಿದೆ, ದೇವಸ್ಥಾನದ ಹುಂಡಿಯಲ್ಲಿ ಸಿಕ್ಕರೆ ಕಾಣಿಕೆ,ತಂದೆ ಕೊಟ್ಟರೆ ಪಾಕೆಟ್ ಮನಿ,ಮಂತ್ರಿಗಳ ಮನೆಯಲ್ಲಿ ಸಿಕ್ಕರೆ ಕಪ್ಪು ಹಣ,ವೃದ್ಧಾಶ್ರಮಕ್ಕೆ ಕೊಟ್ಟರೆ ದಾನ, ಕಾರ್ಮಿಕನಿಗೆ ಕೊಟ್ಟರೆ ಕೂಲಿ. ಈ ವಾಸ್ತವದಲ್ಲಿ ಹಣವೆಂಬುದು ಮೂಲಭೂತ ಸೌಕರ್ಯಗಳಲ್ಲಿ ಒಂದು ಎಂದರೆ ನಿಜಕ್ಕೂ ತಪ್ಪಾಗದು. ಹಣ ಜೀವನದಲ್ಲಿ ಮುಖ್ಯವಾದ ಒಂದು ಸಹಾಯಕ ಸಾಧನವಾಗಿದೆ. ಈ ಹಿಂದೆ "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಗಾದೆಯೊಂದಿತ್ತು ಅದು ಈಗಲೂ ಇದೆ ಆದರೆ ಈಗ "ಧನೋ ರಕ್ಷತಿ ರಕ್ಷಿತಃ" ಎಂಬ ಘೋಷವಾಕ್ಯವು ಬಲವಾಗುತ್ತಿದೆ ಮತ್ತು ಪ್ರಬಲವಾಗುತ್ತಿದೆ.

ಮನುಷ್ಯನಿಗೆ ಹುಟ್ಟಿನಿಂದ ಸಾಯುವವರೆಗೆ, ತೊಟ್ಟಿಲಿನಿಂದ ಸ್ಮಶಾನದವರೆಗೆ,ಎಲ್ಲಿಗೆ ಹೋಗಬೇಕೆಂದರೂ,ಎಲ್ಲಿ ತಲುಪಬೇಕೆಂದರೂ, ಏನನ್ನು ನೋಡಬೇಕೆಂದರೂ ದುಡ್ಡು ಎಂಬ ಇಂಧನ ಬೇಕೇ ಬೇಕು.

ಒಂದು ಕಾಲದಲ್ಲಿ ನೀತಿಗೆ,ನಿಯತ್ತಿಗೆ, ಪ್ರಾಮಾಣಿಕತೆಗೆ,ಒಳ್ಳೆಯತನಕ್ಕೆ ಬೆಲೆ ಗೌರವಗಳು ಇದ್ದವು,ಮತ್ತೊಂದು ಕಾಲದಲ್ಲಿ ದೈಹಿಕ ಮತ್ತು ಮಾನಸಿಕ ಶಕ್ತಿಗೆ,ಮಗದೊಂದು ಕಾಲದಲ್ಲಿ ಪ್ರತಿಭೆಗೆ,ಶಿಕ್ಷಣಕ್ಕೆ,ರೂಪಕ್ಕೆ ಗೌರವಾದರಗಳು ಇದ್ದವು ಇತ್ತೀಚಿನ ಕಾಲಮಾನದಲ್ಲಿ ಜೀವನದಲ್ಲಿ ದುಡ್ಡು ಎಂಬುದು ಬಹಳ ಮುಖ್ಯವಾದ ಸಂಗತಿಯಾಗಿಬಿಟ್ಟಿದೆ ಜೀವನದಲ್ಲಿ ಪ್ರತಿಯೊಂದು ವಸ್ತುವನ್ನು ಕೊಳ್ಳಲು,ಸುಖವನ್ನು ಅನುಭವಿಸಲು, ನೆಮ್ಮದಿಯನ್ನು ಪಡೆಯಲು ಆಹಾರ, ವಸತಿ,ಆರೋಗ್ಯ,ವಾಹನ,ಪ್ರಯಾಣ ಇತ್ಯಾದಿ ಪ್ರತಿಯೊಂದು ಸೇವೆ ಮತ್ತು ವಸ್ತುಗಳನ್ನು ಪಡೆಯಲು ಹಣ ಅತ್ಯಂತ ಅನಿವಾರ್ಯವಾದ ವಿಷಯವಾಗಿದೆ.

"ಧೈರ್ಯಂ ಸರ್ವಾರ್ಥ ಸಾಧನಂ" ಎಂಬುದು ಹೇಗೋ ಹಾಗೆಯೇ "ಧನಂ ಸರ್ವತ್ರ ಸಾಧನಂ" ಆಗುತ್ತಿದೆ. ಎಷ್ಟೋ ಸಾರಿ ಹಣವಿಲ್ಲದಿದ್ದರೆ ಎದೆಯಲ್ಲಿ ಧೈರ್ಯವೇ ಇರೋದಿಲ್ಲ,ಮನಸ್ಸಿನಲ್ಲಿ ನೆಮ್ಮದಿ ಕೂಡ ಇರೋದಿಲ್ಲ ಮತ್ತು ಮುಖದಲ್ಲಿ ನಗು ಅಂತೂ ಇರೋದೇ ಇಲ್ಲ.ಹಣವಿದ್ದರೆ ಎಂತಹ ಪರಿಸ್ಥಿತಿಯನ್ನು ಎದುರಿಸುತ್ತೇನೆ ಎಂಬ ಧೈರ್ಯ ಎದೆಯಲ್ಲಿ ಮನೆ ಮಾಡಿರುತ್ತದೆ ಅದು ಪೂರ್ಣ ಸತ್ಯವಿಲ್ಲದಿರಬಹುದು,ಆದರೂ ಸಹ ಅದೂ ಕೂಡಾ ನಿಜ.

ಇಂದಿನ ಆಧುನಿಕ ಜಗತ್ತಿನಲ್ಲಿ ಹಣದ ಮಹತ್ವವು ಹಿಂದೆಂದಿಗಿಂತಲೂ, ಎಂದೆಂದಿಗಿಂತಲೂ ಹೆಚ್ಚಾಗಿದೆ. "ಹಣವಿದ್ದರೆ ನೀ ದಿನಕರನಂತೆ ಇಲ್ಲದಿದ್ದರೆ ಶ್ವಾನನಂತೆ" ಎಂಬ ಮಾತಿದೆ "ದುಡ್ಡೇ ದೊಡ್ಡಪ್ಪ " ಅನ್ನೋ ಗಾದೆ ಮಾತೂ ಇದೆ ಭೂಮಿ ಸೂರ್ಯನ ಸುತ್ತಲೂ ಸುತ್ತುತ್ತದೆ ಎಂಬುದು ಎಷ್ಟು ಸತ್ಯವೋ, ಭೂಮಿಯ ಮೇಲಿನ ಜನರು ಹಣದ ಸುತ್ತಲೂ ಸುತ್ತುತ್ತಾರೆ ಎಂಬುದೂ ಕೂಡಾ ಅಷ್ಟೇ ಸತ್ಯ.

ಒಂದು ವಿಷಯವನ್ನು ಗಮನಿಸಿ ನೋಡಿ, ಹಣವಿದ್ದವನಿಗೆ, ಶ್ರೀಮಂತನಿಗೆ ಜನ ವಿನಾಕಾರಣ ಗೌರವ ಕೊಡುತ್ತಾರೆ ಸದ್ಯಕ್ಕೆ ಈ ಜಗತ್ತಿನಲ್ಲಿ ಅವನೇ ದುಡ್ಡು ಮಾಡಿರುವವನೇ ಆದರ್ಶ ವ್ಯಕ್ತಿ ಹಣವನ್ನು ಅವನು ಯಾವ ಮಾರ್ಗದಿಂದಲಾದರೂ ಸಂಪಾದಿಸಿರಲಿ,ಮೋಸ,ವಂಚನೆ,ಕೊಲೆ,ಸುಲಿಗೆ, ಲಂಚ,ಅಪ್ರಾಮಾಣಿಕತೆ ಏನೇ ಮಾಡಿರಲಿ,ಅವನು ಜನರಿಗೆ ಹಣದ ಸಹಾಯ ಮಾಡಲಿ,ಬಿಡಲಿ ಸ್ವಾರ್ಥಿಯಾಗಲಿ,ಜಿಪುಣನಾಗಲಿ ಜುಗ್ಗನಾಗಲಿ, ಕ್ರೂರಿಯಾಗಲಿ, ಸ್ಫುರದ್ರೂಪಿಯಾಗಿರಲಿ, ಕುರೂಪಿಯಾಗಿರಲಿ ಈಗಿನ ಪೀಳಿಗೆಗೆ,ಈಗಿನ ಜನರಿಗೆ, ಈಗಿನ ಯುವಕರಿಗೆ ಅವನೇ ಆದರ್ಶ ಪುರುಷನಾಗುತ್ತಾನೆ.ಜನ ಅವನನ್ನೇ ಅನುಕರಿಸಲು, ಓಲೈಸಲು,ಪ್ರಯತ್ನಿಸುತ್ತಿರುತ್ತಾರೆ.

ಜಗತ್ತಿನ ಎಲ್ಲಾ ಸಣ್ಣ ಪುಟ್ಟ ಝರಿ,ತೊರೆಗಳು ಹೇಗೆ ದೊಡ್ಡ ನದಿಗಳನ್ನು ಸೇರುತ್ತವೆಯೋ,ಎಲ್ಲಾ ದೊಡ್ಡ ನದಿಗಳು ಸೇರಿ ಹೇಗೆ ಸಮುದ್ರವನ್ನು, ಸಾಗರವನ್ನು ಸೇರುತ್ತವೆಯೋ ಹಾಗೆಯೇ ಹಣವಿದ್ದ ಕಡೆಗೆ ಅಧಿಕಾರ,ಹಣವಿದ್ದ ಕಡೆಗೆ ಆನಂದ, ಹಣವಿದ್ದ ಕಡೆಗೆ ಸೌಂದರ್ಯ, ಹಣವಿದ್ದ ಕಡೆಗೆ ಸಕಲ ಸೌಭಾಗ್ಯಗಳು ಸಹ ಹರಿದು ಹೋಗಲು ಸದಾ ತವಕಿಸುತ್ತಿರುತ್ತವೆ.

ಹಾಗಾಗಿ ಯಾರು ಏನೇ ಹೇಳಲಿ, ದುಡ್ಡು ದುಡಿಯಬೇಕು ಬೇರೆಯವರಿಗೆ ತೊಂದರೆಯಾಗದ ಹಾಗೆ,ಮೋಸ ಮಾಡದ ಹಾಗೆ ದುಡಿಯಬೇಕು. ನಮಗಾಗಿ,ನಮ್ಮವರಿಗಾಗಿ,ನಮ್ಮತನವನ್ನು,ನಮ್ಮ ಆತ್ಮಾಭಿಮಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಗಳಿಸಬೇಕು ನಮ್ಮ ಶ್ರಮದಿಂದ,ನಮ್ಮ ಕೌಶಲ್ಯದಿಂದ ದುಡ್ಡು ಮಾಡಬೇಕು ನಾವು ದುಡಿಯುವ ದುಡ್ಡು ನಮ್ಮ ಬೆವರಿನಿಂದ ಬರಬೇಕೇ ಹೊರತು, ಬೇರೆಯವರ ಕಣ್ಣೀರಿನಿಂದ ಅಲ್ಲ. ದುಡಿಯುವುದು ಅಷ್ಟೇ ಅಲ್ಲ ಪ್ರತಿ ಪೈಸೆಯನ್ನು, ಪ್ರತಿ ರೂಪಾಯಿಯನ್ನು ಖರ್ಚು ಮಾಡುವಾಗಲೂ ಸಹ ಯೋಚಿಸಿ ವ್ಯವಸ್ಥಿತವಾಗಿ ಮತ್ತು ಜಾಣತನದಿಂದ ಖರ್ಚು ಮಾಡಬೇಕು. "ಉಳಿತಾಯ ಮಾಡುವುದು ಸಹ ಗಳಿಕೆಯ ಒಂದು ಭಾಗ"ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಂಡಿರಬೇಕು ಇಲ್ಲದಿದ್ದರೆ ಜೀವನವಿಡಿ ದುಡಿದರೂ ಸಹ ಹಣಕ್ಕಾಗಿ ಪರದಾಟ ನಿಲ್ಲುವಂತದ್ದಲ್ಲ.

**"ಜನರು ಹಣವನ್ನು ಮುಖ್ಯ ಅಲ್ಲ ಅಂತ ಹೇಳ್ತಾರೆ. ಆದರೆ ಅದು ಆಮ್ಲಜನಕದಷ್ಟೇ ಮಹತ್ವ ಪಡೆದಿದೆ" –ಜೇಬ್ ಬ್ಲಾಂಟ್**

ಹಣ ಆಮ್ಲಜನಕದಷ್ಟೇ ಮಹತ್ವ ಪಡೆದಿದೆ ಅಂತ ಅತಿ ದೊಡ್ಡ ಬರಹಗಾರರು ಹೇಳ್ತಾರೆ. ಒಟ್ಟಿನಲ್ಲಿ, ಹಣ ಕಂಡ್ರೆ ಹೆಣ ಕೂಡ ಬಾಯಿ ಬಿಡತ್ತೆ ಅನ್ನೋದು ಗಾದೆ ಅಷ್ಟೇ ಅಲ್ಲ,ಅದು ಅನುಭವದ ಮಾತು.

**–ರಕ್ಷಿತ್ ಆರ್. ಪಿ., ಎಂಜಿಮ್ ಕಾಲೇಜು**



ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಷಯಗಳು

ಶುಭ ಕೋರುವವರು :

ಶ್ರೀ ಹರೀಶ್, ಶ್ರೀ ಪರಮೇಶ,
ಶ್ರೀ ರಮೇಶ್, ಶ್ರೀ ಮಂಜೇಗೌಡ,
ಶ್ರೀ ಕಾರ್ತಿಕ್, ಶ್ರೀ ಮನು ಎಸ್ ಎಂ,
ಶ್ರೀ ಬೋರೇಗೌಡ,
ವೀರ ಸೇನಾನಿ ಶಿವಣ್ಣ ವಂದೇ ಮಾತರಂ,
ಶ್ರೀಮತಿ ಶಶಿಕಲಾ ಶಿವಣ್ಣ ವಂದೇ ಮಾತರಂ,
ಕು.ಗಿರೀಶ್ ಶಿವಣ್ಣ ವಂದೇ ಮಾತರಂ




ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳ ವೀರ ಸೇನಾನಿ ಶಿವಣ್ಣ ವಂದೇ ಮಾತರಂ ಅಭಿಮಾನಿ ಬಳಗ.

ಕರುನಾಡ ಕಂದ
ಸಂಪುಟ-03 | ಸಂಚಿಕೆ-02
ದಿನಾಂಕ: 16-11-2023 | ಪುಟಗಳು: 16

# ಶಿಕ್ಷಣವೇ ಶಕ್ತಿ;ಮನುಷ್ಯನನ್ನು ಸ್ವಾವಲಂಬಿ ಮತ್ತು ನಿಸ್ವಾರ್ಥಿಯನ್ನಾಗಿ ಮಾಡುವುದೇ ಶಿಕ್ಷಣ

ಶಿಕ್ಷಣಕ್ಕೆ ಭಾರತೀಯ ಪರಂಪರೆಯಲ್ಲಿ ಚಾರಿತ್ರಿಕ ಮಹತ್ವವಿದೆ ಪ್ರಾಚೀನ ಕಾಲದಿಂದ ಇಂದಿನವರೆಗೆ

ಮಾನವನು ಅಭಿವೃದ್ಧಿಯನ್ನು ಸಾಧಿಸಿರುವುದು ಶಿಕ್ಷಣದಿಂದಲೇ ಎಂದು ಹೇಳಬಹುದು.'ವಿದ್ಯಾ ವಿಹೀನ ಪಶುಃ' (ವಿದ್ಯೆ ಇಲ್ಲದವನು ಪಶುವಿಗೆ ಸಮಾನ),'ನಹಿ ಜ್ಞಾನೇನ ಸದೃಶಂ'(ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ) ಎಂಬ ಮಾತುಗಳಿಂದ ವಿದ್ಯೆಯ ಪ್ರಾಮುಖ್ಯತೆ ನಮ್ಮ ಪೂರ್ವಜರಿಗೆ ಎಷ್ಟು ಅಗಾಧವಾಗಿತ್ತೆಂಬುದು ತಿಳಿಯಬಹು ದಾಗಿದೆ. ಪ್ರಾಚೀನ ಕಾಲದಲ್ಲಿ ಮೌಖಿಕ ಪರಂಪರೆಯಲ್ಲಿ ಕಂಠಪಾಠದ ಮೂಲಕ ಜ್ಞಾನದ ಪ್ರಸರಣೆ

ನಡೆಯುತ್ತಿತ್ತು ಮನುಷ್ಯ ಅಕ್ಷರಗಳನ್ನು ಕಲಿತು, ಬರೆಯುವ ಸಲಕರಣೆಗಳನ್ನು ಆವಿಷ್ಕರಿಸಿದ ನಂತರ ತನ್ನ ಸ್ಮೃತಿಪಟಲದಲ್ಲಿ ಅಡಗಿರುವ ಜ್ಞಾನದೀಪ್ತಿಯನ್ನು ಬರವಣಿಗೆಯಲ್ಲಿ ಇಳಿಸಲು ಪ್ರಾರಂಭಿಸಿದ ಹಂತಹಂತವಾಗಿ

ಬೆಳವಣಿಗೆ ಕಂಡ ಶಿಕ್ಷಣ ಪರಂಪರೆ ಗುರುಕುಲ, ಅಗ್ರಹಾರ,ಘಟಿಕಸ್ಥಾನ,ಮದರಸಗಳ ಮೂಲಕ ದೊರೆಯತೊಡಗಿತು ಗುರು ಕೇಂದ್ರಿತವಾದ ಈ ಶಿಕ್ಷಣ ಪದ್ಧತಿಗಳು ಕೇವಲ ಕೆಲವು ವರ್ಗಗಳಿಗೆ ಮಾತ್ರ ಸೀಮಿತವಾಗಿತ್ತೇ ವಿನಃ ಸಾಮಾಜಿಕರಣಗೊಂಡಿರಲಿಲ್ಲ.

12ನೇ ಶತಮಾನದಲ್ಲಿ ಕನ್ನಡ ನಾಡಿನ ಕಲ್ಯಾಣದಲ್ಲಿ ಬಸವಾದಿ ಶರಣರಿಂದ ಶಿಕ್ಷಣದ ಸಾಮಾಜಿಕರಣ ಅಥವಾ ಸರ್ವತ್ರೀಕರಣವಾಯಿತು ಎಂದರೆ ತಪ್ಪಾಗಿರಲಿಕ್ಕಿಲ್ಲ ನಮ್ಮ ಕನ್ನಡ ನಾಡು ಅದರಲ್ಲಿಯೂ ಹಿಂದುಳಿದ ಭಾಗ ಎಂಬ ಹಣೆಪಟ್ಟಿ ಹಚ್ಚಿಕೊಂಡ ನಮ್ಮ ಕಲ್ಯಾಣ ಕರ್ನಾಟಕದಲ್ಲಿ ಇಂತಹ ಕ್ರಾಂತಿ ಆಗಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ.

ಜಗತ್ತಿನಲ್ಲಿ ಮೊತ್ತಮೊದಲಬಾರಿಗೆ ಅನುಭವ ಮಂಟಪ ಎಂಬ ಸಂಸತ್ತಿನ ಮೂಲಕ ವಚನಕ್ರಾಂತಿಯೊಂದಿಗೆ ಸಾಮಾಜಿಕ,ಧಾರ್ಮಿಕ,ಆರ್ಥಿಕ ಕ್ರಾಂತಿಗಳೊಂದಿಗೆ ಲಿಂಗ ಅಸಮಾನತೆಯನ್ನು ಹೋಗಲಾಡಿಸುವ ಕ್ರಾಂತಿಯೂ ನಡೆಯಿತು ಎಂಬುದು ಅದ್ವಿತೀಯ, ಎಲ್.ಬಸವರಾಜು ಅವರು 12ನೇ ಶತಮಾನವನ್ನು ನೆಲಕ್ಕೆ ನಾಲಿಗೆ ಬಂದ ಕಾಲ ಎಂದು ಕರೆದಿರುತ್ತಾರೆ. ಮೋಳಿಗೆ ಮಾರಯ್ಯ ಅರಸನಾಗಿದ್ದರೂ ಕಟ್ಟಿಗೆಯ ಕಾಯಕದಲ್ಲಿ ತೊಡಗಿರುವುದು,ಮದ್ದಳೆಯನ್ನು ಬಾರಿಸುವ ಅಲ್ಲಮ ಶೂನ್ಯ

ಸಿಂಹಾಸನದ ಪೀಠವನ್ನು ಏರಿರುವುದು ಗಮನಿಸಿದರೆ, ಸಾಮಾಜಿಕ ಮತ್ತು ಶೈಕ್ಷಣಿಕ ಸಮಾನತೆ ಆ ಕಲದಲ್ಲಿ ಆಗಲೇ ಜಾರಿಗೆ ಬಂದಿರುವದನ್ನು ಗಮನಿಸಬಹುದಾಗಿದೆ. ಅಕ್ಕಮಹಾದೇವಿ,ಆಯ್ದಕ್ಕಿ ಲಕ್ಕಮ್ಮ,ಸೂಳೆ ಸಂಕವ್ವ ಮುಂತಾದ ವಚನಕಾರ್ತಿಯರ ವಚನಗಳನ್ನು ನೋಡುವದಾದರೆ ಸಮಾಜದಲ್ಲಿ ಮಹಿಳೆಯರ ಸ್ಥಾನ ಉನ್ನತವಾಗಿರುವದು ತಿಳಿಯಬಹುದಾಗಿದೆ.

ಮುಂದಿನ ದಿನಗಳಲ್ಲಿ ಇದೇ ಪದ್ಧತಿ ಮುಂದುವರೆಯದೇ ಇರುವದು ವಿಷಾದನೀಯವಾಗಿದೆ.

ಶತಮಾನಗಳು ಕಳೆದಂತೆ ಸಮಾಜದಲ್ಲಿ ಹಲವಾರು ಬದಲಾವಣೆಗಳಾಗಿ 18ನೇ ಶತಮಾನದಲ್ಲಿ ಭಾರತಕ್ಕೆ ಯುರೋಪಿಯನ್ನರ ಆಗಮನದ ನಂತರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಎಲ್ಲಾ ಕ್ಷೇತ್ರಗಳಲ್ಲೂ ವ್ಯಾಪಕ ಬದಲಾವಣೆಗಳುಂಟಾದವು. ಮೇಲ್ವರ್ಗದವರ ಸೊತ್ತಾಗಿ ಕೆಳ ವರ್ಗದವರಿಗೆ ಗಗನ ಕುಸುಮವಾದ

ಶಿಕ್ಷಣವನ್ನು ಎಲ್ಲರ ಕೈಗೆಟುಕುವಂತೆ ಯುರೋಪಿಯನ್ನರು ಮಾಡಿದರು ಇದರ ಹಿಂದಿನ ಉದ್ದೇಶ ಯುರೋಪಿಯನ್ನರ ವ್ಯಾಪಾರಾಭಿವೃದ್ಧಿ ಆಗಿದ್ದರೂ ಸಹ ಸಾಮಾನ್ಯ ಜನರ ಜೀವನ ಮಟ್ಟ ಸುಧಾರಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಇಂಗ್ಲಿಷ್ ವಸಾಹಾತುಶಾಹಿ ಹಲವಾರು ರೀತಿಯ ಶೋಷಣೆಗಳನ್ನು ಮಾಡಿದರೂ

ಸಹ ಶೋಷಿತರಿಗೆ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಹೆಜ್ಜೆಯನಿಟ್ಟಿತು.ಬ್ರಿಟಿಷರು ಈ ದೇಶಕ್ಕೆ ಬಾರದೆ

ಹೋಗಿದ್ದರೆ,ಈ ದೇಶದ ಶೂದ್ರರು ಇನ್ನೂ ಮಲ ಹೊರಬೇಕಾಗುತ್ತಿತ್ತು ಎಂಬ ರಾಷ್ಟ್ರ ಕವಿ ಕುವೆಂಪು

ಅವರ ಮಾತು ಅತಿ ಮಾರ್ಮಿಕಮಾಗಿದೆ.

ಈ ಎಲ್ಲಾ ಹಂತಗಳನ್ನು ದಾಟಿಕೊಂಡು ಕೆಲವು ಸಾಂಪ್ರದಾಯಿಕ ಪದ್ಧತಿಗಳನ್ನು ಕಳಚಿಕೊಳ್ಳುತ್ತಾ

ಹಲವು ನಾವಿನ್ಯ ಪ್ರಯೋಗಾತ್ಮಕ ಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಾ ಶಿಕ್ಷಣ ಕ್ಷೇತ್ರವು ವ್ಯಾಪಕವಾಗಿ

ಬೆಳೆದಿದೆ ಹರಿವ ನೀರು ಸ್ವಚ್ಛಂದವಾಗಿ ಹರಿಯುತ್ತಾ ಎಲ್ಲರ ದಾಹ ನೀಗಿಸುತ್ತದೆ,ಎಂಬಂತೆಯೆ ನಮ್ಮ ಶಿಕ್ಷಣ ಕ್ಷೇತ್ರವು ಕಾಲಕಾಲಕ್ಕೆ ಆಗಿರುವಂತಹ ಬದಲಾವಣೆಗಳನ್ನು ಮೈಗೂಡಿಸಿಕೊಂಡು ಆಧುನಿಕತೆಯನ್ನು ಆದರದಿಂದ ಸ್ವಾಗತಿಸುತ್ತಾ ವಿವಿಧ ಪ್ರಯೋಗಗಳನ್ನು ಅಳವಡಿಸಿಕೊಳ್ಳುತ್ತಾ ಬೆಳೆಯುತ್ತಿದೆ ಇಂದು ಶಿಶುಕೇಂದ್ರಿತ ಶಿಕ್ಷಣ ವಿಧಾನದಲ್ಲಿ ಗುರು ಅಥವಾ ಶಿಕ್ಷಕ ವಿದ್ಯಾರ್ಥಿಗಳಿಗೆ ಅನುಕೂಲಿಸುವವನಾಗಿ ಮಾತ್ರ

ಕಾರ್ಯ ನಿರ್ವಹಿಸಬೇಕಾಗಿದೆ ಮಗುವಿನಲ್ಲಿ ಅಡಗಿರುವ ಸುಪ್ತಶಕ್ತಿಯನ್ನು ಹೊರಗೆಳೆಯುವ ಸಾಧಕನಾಗಿ ಶಿಕ್ಷಕ ಕಾರ್ಯ ನಿರ್ವಹಿಸಬೇಕಾಗಿದೆ.

ಇಂದಿನ ಆಧುನಿಕ ಯುಗದಲ್ಲಿ ವಿವಿಧ ರೀತಿಯ ತರಬೇತಿ ತಂತ್ರಜ್ಞಾನವನ್ನು ಕಲಿತ ಶಿಕ್ಷಕರು ಆಧುನಿಕ

ಜಗತ್ತಿನ ಸವಾಲುಗಳನ್ನು ಎದುರಿಸುತ್ತಾ ಶಿಕ್ಷಣವನ್ನು ನೀಡುತ್ತಿದ್ದಾರೆ ನಮ್ಮ ಸಂವಿಧಾನದ 2002ರ 86ನೇ ತಿದ್ದುಪಡಿಯ ಮೂಲಕ ಸಂವಿಧಾನದ 21ಎ ಕಲಂನಲ್ಲಿ 6ರಿಂದ14 ರ?ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ನೀಡಿದೆ ಇಂದಿನ ದಿನಮಾನಗಳಲ್ಲಿ ಆಹಾರ, ವಸತಿ,ಉಡುಪಿನೊಂದಿಗೆ ಶಿಕ್ಷಣವೂ ಮೂಲಭೂತ ಅವಶ್ಯಕತೆಯಾಗಿದೆ ಆದ್ದರಿಂದಲೇ ಸರಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಯಶಸ್ವಿಯಾಗಿ ಜಾರಿಗೆ ತರುವುದರೊಂದಿಗೆ ಸರಕಾರಿ ಶಾಲೆಗಳಲ್ಲಿ ದಾಖಲಾತಿ ಮತ್ತು

ಹಾಜರಾತಿ ಹೆಚ್ಚಿಸುವ ನಿಟ್ಟಿನಲ್ಲಿ ಸರಕಾರವು ಉಚಿತ ಸಮವಸ್ತ್ರ,ಶೂ,ಸಾಕ್ಸ, ಪಠ್ಯಪುಸ್ತಕಗಳೊಂದಿಗೆ

ಮಕ್ಕಳಲ್ಲಿ ಪೌಷ್ಟಿಕಾಂಶ ಹೆಚ್ಚಿಸಿ ಸದೃಢ ದೇಹ ನಿರ್ಮಾಣವಾಗಲು ಬೆಳಗ್ಗೆ ಹಾಲನ್ನು ನೀಡಲಾಗುತ್ತಿದೆ ಇದರ ಜೊತೆಗೆ ಮದ್ಯಾಹ್ನ ಅಕ್ಷರ ದಾಸೋಹದ ಅಡಿಯಲ್ಲಿ ಬಿಸಿಯೂಟವನ್ನು ನೀಡಲಾಗುತ್ತಿದೆ ಇದಲ್ಲದೆ ಮಕ್ಕಳ ಆರೋಗ್ಯದ ಕಡೆಗೆ ಗಮನವಹಿಸಿ ಆರೋಗ್ಯ ತಪಾಸಣೆಯನ್ನು ಮಾಡುವುದರೊಂದಿಗೆ ವಿಟಮಿನ್ ಯಕ್ತ

ಮಾತ್ರೆಗಳನ್ನು ನೀಡಲಾಗುತ್ತಿದೆ ಸರಕಾರವು ಮಕ್ಕಳಿಗೆ ಶಿಕ್ಷಣಕ್ಕಾಗಿ ಪ್ರೋತ್ಸಾಹ ಧನ (ಸ್ಕಾಲರಶಿಪ್) ನೀಡಿ ಶಾಲೆಗೆ ಬರುವಂತೆ ಪ್ರೋತ್ಸಾಹಿಸುತ್ತಿದೆ.ಇಂದಿನ ಆಧುನಿಕ ಜಗತ್ತನ್ನು ಎದುರಿಸಲು,ಸಮಾಜದಲ್ಲಿ ಸ್ಥಾನಮಾನಗಳನ್ನು ಹೊಂದಲು ಶಿಕ್ಷಣವಂಬ ಶಕ್ತಿಯು ಬಹು ಮುಖ್ಯ ಸಾಧನವಾಗಿದೆ ಇವೆಲ್ಲವುಗಳೊಂದಿಗೆ ಮಕ್ಕಳಿಗೆ ಅತೀ ಮುಖ್ಯವಾಗಿ ಬೇಕಾಗಿರುವುದು ನೈತಿಕ ಶಿಕ್ಷಣ ನಮ್ಮ ಸಮಾಜದಲ್ಲಿ ನೈತಿಕತೆ ಕಡಿಮೆಯಾಗುತ್ತಿದೆ

ಎಂಬ ಮಾತು ಕೇಳಿಬರುತ್ತಿದೆ ಆದ್ದರಿಂದ ಶಿಕ್ಷಕರ ಬಹು ದೊಡ್ಡ ಜವಾಬ್ದಾರಿ ಮಕ್ಕಳಲ್ಲಿ ನೈತಿಕತೆ

ತುಂಬಿ ಅವರನ್ನು ಸಮಾಜದಲ್ಲಿ ಸತ್ಪ್ರಜೆಗಳನ್ನಾಗಿ ಮಾಡುವುದಾಗಿದೆ ಋಗ್ವೇದದಲ್ಲಿ ಶಿಕ್ಷಣದ ವ್ಯಾಖ್ಯೆ

ಹೀಗೆ ನೀಡಲಾಗಿದೆ:ಮನುಷ್ಯನನ್ನು ಸ್ವಾವಲಂಬಿ ಮತ್ತು ನಿಸ್ವಾರ್ಥಿಯನ್ನಾಗಿ ಮಾಡುವುದೇ ಶಿಕ್ಷಣ,

ಶಿಕ್ಷಣದ ಉದಾತ್ತವಾದ ಉದ್ದೇಶವು ಮಾನವನು ಪರಾವಲಂಬಿಯಾಗಿರಬಾರದು ಮತ್ತು

ಅಗತ್ಯವಿರುವವರಿಗೆ ಸಹಾಯ ಹಸ್ತ ನೀಡುವ ಉದಾರ ಮನೋಭಾವನೆ ಉಳ್ಳವನಾಗಿರಬೇಕು ಎಂಬ ಆಶಯ ಇಲ್ಲಿದೆ ಆದ್ದರಿಂದ ಶಿಕ್ಷಕರ ಜವಾಬ್ದಾರಿ ಮಕ್ಕಳಲ್ಲಿ ಆತ್ಮಸ್ಥೈರ್ಯ ಬೆಳೆಸುವುದು,ಮಾನವೀಯ ಮೌಲ್ಯ,ಸಾಮಾಜಿಕ ಕಳಕಳಿ,ದೇಶಾಭಿಮಾನ ಮೂಡಿಸುವುದು ಮಕ್ಕಳು ಹೆಚ್ಚು ಅಂಕ ಪಡೆದಾಗ ಬೀಗುವ,ಕಡಿಮೆ ಅಂಕ ಪಡೆದಾಗ, ಮಾಡಬೇಕೆಂದಿರುವ ಕೋರ್ಸ್ ಸಿಗದಿರುವಾಗ ಅಥವಾ ತಮಗೆ ಬೇಕಾದ ವಸ್ತು ಕೈಗೆಟುಕದಿರುವಾಗ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗಗಳನ್ನು ನಮ್ಮ ಸುತ್ತಮುತ್ತ ನೋಡುತಲಿದ್ದೇವೆ ಶಿಕ್ಷಣ ಕ್ಷೇತ್ರಕ್ಕೆ ಈ ಸಮಸ್ಯೆ ಸವಾಲಾಗಿದೆ. ಮಕ್ಕಳಲ್ಲಿ ಮಾನಸಿಕ ಸ್ಥೈರ್ಯ ಹೆಚ್ಚಿಸಿ ಸೋಲುಗೆಲುವುಗಳನ್ನು ಸಮಾನವಾಗಿ ಕಂಡು ಬಂದುದೆಲ್ಲವನ್ನೂ ಎದುರಿಸುವ ಎದೆಗಾರಿಕೆಯನ್ನು ಬೆಳೆಸುವ ಹೊಣೆ ಶಿಕ್ಷಣ ಮತ್ತು ಶಿಕ್ಷಕರದ್ದಾಗಿದೆ.ಹೆತ್ತ ತಂದೆ-ತಾಯಿಯನ್ನು ನೋಡಿಕೊಳ್ಳುವ,ಗುರು-ಹಿರಿಯರನ್ನು ಗೌರವಿಸುವ, ತನಗಿಂತ ಕಿರಿಯರನ್ನು ಪ್ರೀತಿಸುವ-ಪ್ರೇರೇಪಿಸುವ ಮನಸ್ಸನ್ನು ಮಕ್ಕಳಲ್ಲಿ ನರ?ಮಿಸಬೇಕಾಗಿದೆ ಕೆಲವುಪ್ರಾಕೃತಿಕ ವಿಕೋಪಗಳಾದ ನೆರೆಹಾವಳಿ,ಭೂಕಂಪ ಇತ್ಯಾದಿಗಳು ಸಂಭವಿಸಿದಾಗ ಹಲವಾರು ಕಾಲೇಜು ವಿದ್ಯಾರ್ಥಿಗಳು ಯುವಕ-ಯುವತಿಯರು ನೆರವಿಗಾಗಿ ಮಾಡುವ ಪ್ರಯಾಸಗಳನ್ನು ನೋಡುವುದಾದರೆ ಮಾನವೀಯ ಮೌಲ್ಯಗಳ ಜೀವಂತಿಕೆಯನ್ನು ಕಂಡು ಸಂತೃಪ್ತಿಯಾಗುತ್ತದೆ.

ಒಟ್ಟಿನಲ್ಲಿ ಶಿಕ್ಷಣದ ಮೂಲಗುರಿ ಮಗುವಿನಲ್ಲಿ ಅಡಗಿರುವ ಅತ್ಯುತ್ತಮವಾದದ್ದನ್ನು ಹೊರಗೆತರುವುದಾಗಿದೆ. ಈ ನಿಟ್ಟಿನಲ್ಲಿ ಸ್ವತಃ ವಿದ್ಯರ?ಥಿ, ಪಾಲಕರು, ಶಿಕ್ಷಕರು, ಸಮುದಾಯ ಮತ್ತು ಸರಕಾರ ಎಲ್ಲರೂ ಕೈಜೋಡಿಸಿ ಸುಸಂಸ್ಕೃತ, ಸುಶಿಕ್ಷಿತ ಸಮಾಜವನ್ನು ನಿರ್ಮಿಸಬೇಕಾಗಿದೆ.

**ಓದು ಏಕಾಂತದಲ್ಲಿ ಸಂತೋಷ ಕೊಡುತ್ತದೆ, ಸಂಭಾಷಣೆಯಲ್ಲಿ ಭೂಷಣವಾಗುತ್ತದೆ,ಕೆಲಸ ಕಾರ್ಯದಲ್ಲಿ ದಕ್ಷತೆ ಉಂಟುಮಾಡುತ್ತದೆ.- ಪ್ರಾನ್ಸಿಸ್ ಬೇಕನ್.**

**ಲೇಖಕಿ-ಡಾ.ಮೇರಿ ಬಿವ್ಲಾ ಎಲೀಷಾ, ಕನ್ನಡ ಶಿಕ್ಷಕರು, ಸರಕಾರಿ ಮಾದರಿಯ ಪ್ರಾಥಮಿಕ ಶಾಲೆ ಮಳಚಾಪೂರ.**



# ಗಂಡನ ಮನೆ



ನನ್ನ ಮನೆ ನನ್ನ ಗಂಡನ ಮನೆ
ನನ್ನ ಮನೆ ನನ್ನ ಗಂಡನ ಮನೆ ಋ

ಶಿವನ ಸ್ವರೂಪದ ಪತಿಯ ಮನೆ
ತಾಯಿ ರೂಪದ ಅತ್ತೆಯ ಮನೆ
ತಂದೆರೂಪದ ಮಾವನ ಮನೆ
ಅವಿಭಕ್ತ ಕುಟುಂಬದ ಸುಂದರ ಮನೆ
ಮನೆ ಮನೆ ಇದು ನನ್ನ ಮನೆ ನನ್ನ ಗಂಡನ ಮನೆ

ನಾಡಗೌಡ ಮನೆತನದ ಸಿರಿವಂತ ಮನೆ
ಮೈದುನ ನಾದಿನಿಯ ಹೆಮ್ಮೆಯ ಮನೆ
ಮೂರು ಜನ ಅಣ್ಣ ತಮ್ಮಂದಿರ ಸಂಬಂಧದ ಮನೆ
ಇಬ್ಬರು ಅಕ್ಕ ತಂಗಿಯರ ಬಾಂಧವ್ಯದ ಮನೆ
ಮನೆ ಮನೆ ಇದು ನನ್ನ ಮನೆ ನನ್ನ ಗಂಡನ ಮನೆ

ರಾಷ್ಟ್ರ ನಿರ್ಮಾಪಕರಾದ ಶಿಕ್ಷಕರ ಮನೆ
ರಾಷ್ಟ್ರ ರಕ್ಷಕರಾದ ಸೈನಿಕರ ಮನೆ
ರಾಷ್ಟ್ರದ ಬೆನ್ನೆಲುಬಾದ ರೈತರ ಮನೆ
ಶಿಕ್ಷಕ ಸೈನಿಕ ರೈತ ಗಣ್ಯರಮನೆ
ಮನೆ ಮನೆ ನನ್ನ ಮನೆ ನನಗ ನನ್ನ ಗಂಡನ ಮನೆ

ಮೂರು ಜನ ನೆಗಣಿಯರ ಒಗ್ಗಟ್ಟಿನ ಮನೆ
ಆರುಜನ ಮೊಮ್ಮಕ್ಕಳ ಪ್ರೀತಿಯ ಮನೆ
ಸಂಸಾರವೆಂಬ ದೋಣಿಯಲ್ಲಿ ಜಯಿಸಿದ ಮನೆ
ನಾಡಗೌಡರಲ್ಲಿ ನಾನೊಬ್ಬಳು ನಾಡಗೌಡತಿಯಾಗಿ ಮೆರೆದ ಮನೆ
ಮನೆ ಮನೆ ನನ್ನ ಮನೆ ನನ್ನ ಗಂಡನ ಮನೆ

ಆದರ್ಶ ಶಿಕ್ಷಕ ದಂಪತಿಗಳಾಗಿ ಬಾಳುತ್ತಿರುವ ಮನೆ
ಹಿರಿಯರಿಗೆ ಗೌರವ ನೀಡುವ ಆಚರಣೆಯ ಮನೆ
ನನ್ನ ಮಗಳಂತೆ ಕಾಣುವ ವಾತ್ಸಲ್ಯದ ಮನೆ
ಕೊನೆಯ ಉಸಿರಿರುವವರೆಗೂ ಮರೆಯಲಾರದ ಮನೆ
ಮನೆ ಮನೆ ನನ್ನ ಮನೆ ನನ್ನ ಗಂಡನ ಮನೆ

ನನ್ನ ಮನೆ ನನ್ನ ಗಂಡನ ಮನೆ
ನನ್ನ ಮನೆ ನನ್ನ ಗಂಡನ ಮನೆ

**ರಚನೆ: ಶ್ರೀಮತಿ.ಮಡಿವಾಳಮ್ಮ.ಎಸ್.ಜಿ, (ನಾಡಗೌಡ) ಸಹ ಶಿಕ್ಷಕರು, ಎಂ ಪಿ ಎಸ್ ಬಳಗಾನೂರ.**

ಕರುನಾಡ ಕಂದ
ಸಂಪುಟ–03 । ಸಂಚಿಕೆ–02
ದಿನಾಂಕ: 16–11–2023 । ಪುಟಗಳು: 16

# ರೈತರ ಸಂಕಷ್ಟಕ್ಕೆ ಸ್ಪಂಧಿಸುವವರು ಯಾರು ಶಿವ?



ವಿಜಯನಗರ:ರೈತ ಕಷ್ಟ ಪಟ್ಟು ಸಾಲ ಸೂಲ ಮಾಡಿ,ಬಿತ್ತನೆ ಮಾಡಿದರೂ,ಹಾಕಿದ ಬಂಡವಾಳವು ಬರದೆ ಕಂಗಲಾಗಿದ್ದಾರೆ. ಇಲ್ಲದೆ ಬೆಳೆ ಬಂದರು,ಬಂದ ಬೆಳೆಯನ್ನು ಕೊಯಿಲು ಮಾಡಿ,ದನಗಳಿಗೆ ಸಂಗ್ರಹ ಮಾಡಿ ಇಡಲು,ಕೈಯಲ್ಲಿ ಕಾಸು ಇಲ್ಲದಂತೆ ಆಗಿದೆ.ಇತ್ತ ತಲೆ ಮೇಲೆ ಕೈ ಹೊತ್ತು,ರೈತ ಯೋಚಿಸುತ್ತಾ ಕುಳಿತರೆ,ಆ ರೈತನಿಗೆ ಹೊಳೆಯುವ ಒಂದೇ ಉಪಾಯವೆಂದರೆ ಉದ್ಯೋಗಖಾತ್ರಿಯಿಂದ ಮೇವು ಸಂಗ್ರಹಿಸಿ,ಕೊಯಿಲು ಮಾಡಲು, ನರೇಗಾದ ಕ್ರಿಯಾಯೋಜನೆಯಲ್ಲಿ ಸೇರಿಸಿದರೆ, ಅವರಿಗೆ ಒಂದು ಹ್ಯಾಟ್ಸ್ ಆಫ್ ಹೇಳಿ ಬಿಡೋಣ ಅಂತ.ನೀವು ಏನಂತೀರ? ಇವರ ಕಷ್ಟಗಳಿಗೆ ಸ್ಪಂಧಿಸಿ,ಮೇವು ಕೊಯಿಲು ಮಾಡಿ,ಸಂಗ್ರಹ ಮಾಡಿ ಕೊಡಬೇಕೆಂಬುದೇ ನಮ್ಮ "ಕರುನಾಡ ಕಂದ"ಪತ್ರಿಕೆಯ ಆಶಯ.

ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕು ಹ್ಯಾಳ್ಯಾ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆವತಿಯಿಂದ, ಮಳೆ ಇಲ್ಲದೆ ಬರಗಾಲ ಆಗಿದ್ದು,ಜನರಿಗೆ ಅನೇಕ ತೊಂದರೆಗಳಾಗಿವೆ. ಇದರಿಂದ ಗುಳೇ ಹೋಗುವುದು ತಪ್ಪಿಸಬೇಕೆಂದು ಸರ್ಕಾರ ಮಾಡಿರುವ ನರೇಗಾ,ಕೂಲಿ ಕೆಲಸ ನೀಡಬೇಕು ನರೇಗಾ ಕೂಲಿ ಮಾನವ ದಿನಗಳನ್ನು 100ರಿಂದ 150ಕ್ಕೆ ಹೆಚ್ಚಿಸಬೇಕು.

ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ನರೇಗಾ ಕೆಲಸ ನಡೆಯುತ್ತಿದ್ದು ನಮ್ಮ ಹ್ಯಾಳ್ಯಾ ಗ್ರಾಮ ಪಂಚಾಯತಿಯಲ್ಲಿ ಕೆಲಸ ನೀಡಿರುವುದಿಲ್ಲ ಇದರ

ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕು.

ರಾಜ್ಯ ರೈತ ಸಂಘದ ಉಪಾಧ್ಯಕ್ಷರಾದ ಎನ್.ಭರಮಣ್ಣನವರು,ರಾಜ್ಯದಲ್ಲಿ ಬರಗಾಲ ಬಂದು ಜನರು ದನ ಕರುಗಳಿಗೆ ಮೇವು ಸಹ ಕಲೆ ಹಾಕದಿರುವ ಪರಿಸ್ಥಿತಿಯಾಗಿದೆ ನರೇಗಾ ಸಹಾಯದಿಂದ ಮೇವು ಸಂಗ್ರಹಣೆ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಮಾಡಬೇಕು ಎಂದು ಭರಮಣ್ಣ ಮತ್ತು ತಾಲೂಕು ಅಧ್ಯಕ್ಷರಾದ ಶ್ರೀಧರ ಎಸ್ ಒಡೆಯರ್ ಸರಕಾರವನ್ನು ಒತ್ತಾಯಿಸಿದರು.

ಕೆ ರಾಮಪ್ಪನವರು ಮಾತನಾಡಿ ಮಂತ್ರಿಗಳು ಕೆಂಪು ಕೋಟೆಯಿಂದ ತಮ್ಮ ಮನೆಯವರೆಗೂ ಒಳ್ಳೆಯ ಡಾಂಬರೀಕರಣವನ್ನು ಮಾಡಿಸಿರುತ್ತಾರೆ ಆದರೆ ರೈತರು ತಮ್ಮ ಹೊಲಗಳಿಗೆ ಮಳೆಗಾಲದಲ್ಲಿ ಸಂಚಾರ ಮಾಡಲು ಹೊಲಕ್ಕೆ ಹೋಗುವ ದಾರಿ, ತಮ್ಮ ಪ್ರಾಣವನ್ನೂ ಕೈ ಹಿಡಿತದಲ್ಲಿ ಇಟ್ಟುಕೊಂಡು ಹೋಗಬೇಕು ಈ ಒಂದು ವ್ಯತ್ಯಾಸ ಏಕೆ ಎಂದು ಸರಕಾರವನ್ನು ಪ್ರಶ್ನಿಸಿದರು.

ಹ್ಯಾಳ್ಯಾದಿಂದ ಸಂಗಮೇಶ್ವರ ಹಾಗೂ ಹ್ಯಾಳ್ಯಾದಿಂದ ಗಜಾಪುರ ಗ್ರಾಮಕ್ಕೆ ಹೋಗುವ ದಾರಿ ಸರಿಪಡಿಸಬೇಕು ಅವರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘದವರು ಮಾಧ್ಯಮಕ್ಕೆ ತಿಳಿಸಿದರು.

ಈ ಸಂದರ್ಭದಲ್ಲಿ ತಾಲುಕಿನ ಹೆಚ್.ಶೇಖರಪ್ಪ ಉಪಾಧ್ಯಕ್ಷರು,ಡಿ ವೆಂಕಟೇಶ್,ಎಸ್ ಕೊಟ್ರಯ್ಯ, ಎಂ ಶಿವಕುಮಾರ್,ಟಿ ಪ್ರಕಾಶ್,ಕೆ ರಾಮಪ್ಪ,ಎನ್ ರಾಮಪ್ಪ ಇವರುಗಳು ತಹಶೀಲ್ದಾರರಿಗೂ, ಜಿಲ್ಲಾಧಿಕಾರಿಗಳಿಗೂ ಹಾಗೂ ಶಾಸಕರಾದ ಕೆ ನೇಮಿರಾಜ್ ನಾಯ್ಕ್ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಇವರುಗಳಿಗೆ ನಮ್ಮ ಸುದ್ದಿ ವಾಹಿನಿ ಮೂಲಕ ಮನವಿ ಮಾಡಿಕೊಂಡರು.ಈ ಎಲ್ಲಾ ನಮ್ಮ ಬೇಡಿಕೆಗಳನ್ನು ಈಡೇರಿಸದೆ ಹೋದರೆ ತಮ್ಮ ಕಚೇರಿಗಳ ಮುಂದೆ ಧರಣಿ ಕೂರಬೇಕಾಗುತ್ತದೆ ಎಂದು ಮುನ್ನೆಚ್ಚರಿಕೆ ನೀಡಿದರು.

# ಕನ್ನಡ ಬಳಸಿ ಕನ್ನಡ ಉಳಿಸಿ

ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು.ಪ್ರಕೃತಿಯೇ ಸ್ವರ್ಗ ಎನ್ನಿಸುವಷ್ಟು ಹಸಿರಿನಿಂದ ಮೈದುಂಬಿಕೊಂಡು ಸೃಷ್ಟಿಯ ಅದ್ಭುತಕ್ಕೆ ಸಾಕ್ಷಿಯಾದ ಕಪ್ಪು ಮಣ್ಣಿನ ನಾಡು ನಮ್ಮ ಕರುನಾಡು ಕರ್ನಾಟಕ ಎಂದರೆ ಒಂದು ಸಂಸ್ಕೃತಿ ವಿಶ್ವವೇ ಬೆರಗಾಗಿ ನೋಡುತ್ತಿರುವ ಪರಂಪರೆಯ ಸೊಬಗು,ಕರುನಾಡು ಭಾವೈಕ್ಯತೆಯ ಬೀಡು,ಈ ನಾಡಿನಲ್ಲಿ ಹುಟ್ಟುವುದೇ ಪುಣ್ಯ,ಈ ನಾಡಿನ ಮಣ್ಣಿನಲ್ಲಿ ಕರುಣೆ ಇದೆ,ಪಾವಿತ್ರ್ಯತೆ ಇದೆ, ಶಕ್ತಿ ಇದೆ.

ಶತಮಾನದಿಂದ ಹಂಚಿ ಹೋಗಿದ್ದ ನಮ್ಮ ಕರ್ನಾಟಕ ಒಂದು ಗೂಡಿ ವಿಶಾಲ ಮೈಸೂರು ರಾಜ್ಯ ಉದಯವಾಗಿ 1973 ನವೆಂಬರ್ 1 ಮೈಸೂರು ರಾಜ್ಯ ಕರ್ನಾಟಕ ಎಂದು ನಾಮಕರಣವಾಯಿತು. ನಮ್ಮ ಕನ್ನಡಕ್ಕೆ ಸಾವಿರ ವರ್ಷಗಳ ಇತಿಹಾಸ ಇದೆ.

ಕನ್ನಡದ ಸಾಹಿತ್ಯ ಪರಂಪರೆ,ಇತಿಹಾಸ, ಸಂಸ್ಕೃತಿ,ಕಾವ್ಯ ಆಚಾರ ವಿಚಾರ ನಮ್ಮ ಕನ್ನಡದ ಹಿರಿಮೆ,ಸಾಧು,ಸಂತರು,ದಾಸರು,ಶಿವ ಶರಣರು, ಕವಿಗಳು ನಮ್ಮ ನಾಡಿನ ಹೆಮ್ಮೆ ಕನ್ನಡದ ಹೆಮ್ಮೆ. ಜಗತ್ತಿನಲ್ಲಿ ಎಲ್ಲಿಯೂ ಇರದ ಶಿಲ್ಪಕಲೆ ನಮ್ಮ ನಾಡಿನಲ್ಲಿದೆ.




ನಮ್ಮ ಕನ್ನಡ ಪರಿಪೂರ್ಣ ಭಾಷೆ,

ನಮ್ಮ ಕನ್ನಡ ಕನ್ನಡಿಗರ ಮಾತೃ ಭಾಷೆ ಕರ್ನಾಟಕದ ರಾಜ್ಯ ಭಾಷೆ.

ನಾವು ಮಾತನಾಡುದ್ದನ್ನ ಬರೆಯಬಹುದು , ಬರೆದದ್ದನ್ನು ಓದಬಹುದಾದ ಒಂದು ಸುಂದರ ವಿಶಿಷ್ಟ ಭಾಷೆ.ನಮ್ಮ ಕನ್ನಡ ಭಾಷೆ ಕೇವಲ ಒಂದು ಭಾಷೆಯಲ್ಲ ಅದು ಕನ್ನಡಿಗರ ಭಾವನೆ ಯೋಚನೆ ಮಾಡುವ ರೀತಿ.

ನಮ್ಮ ಕನ್ನಡ ಭಾಷೆ ಜಗತ್ತಿನ ನಾಲ್ಕುವರೆ ಸಾವಿರ ಭಾಷೆಗಳಲ್ಲಿ ಅತ್ಯಂತ ಶ್ರೀಮಂತ ಭಾಷೆ ಭಾರತದ ಪುರಾತನ ಭಾಷೆಗಳಲ್ಲಿ ಒಂದು ನಮ್ಮ ಕನ್ನಡ. ಕನ್ನಡ ಭಾಷೆ ಅಭಿಜಾತ ಭಾಷೆಯೆಂಬ ಸ್ಥಾನಮಾನವನ್ನು ಕೇಂದ್ರ ಸರ್ಕಾರದಿಂದ ಪಡೆದಿದೆ. ನಮ್ಮ ಭಾರತದ ಶಾಸ್ತ್ರೀಯ ಸ್ಥಾನಮಾನ ಪಡೆದ 3ನೇ ಭಾಷೆ ನಮ್ಮ ಕನ್ನಡ ವೈಜ್ಞಾನಿಕವಾಗಿ ಅತ್ಯಂತ ಸ್ಪಷ್ಟತೆ ಇರೋ ಭಾಷೆ.

ಕನ್ನಡ ಲಿಪಿಯನ್ನು ಆಚಾರ್ಯ ವಿನೋಬಾ ಭಾವೆಯವರು "ಜಗತ್ತಿನ ಲಿಪಿಗಳ ರಾಣಿ"ಎಂದು ಕರೆದಿದ್ದಾರೆ ಅಂತಹ ಸುಂದರ ಭಾಷೆಯ ನಾಡು ನಮ್ಮದು ಇಂತಹ ಪುರಾತನ ಇತಿಹಾಸ ಸಂಸ್ಕೃತಿ ಇರುವ ನಮ್ಮ ಕನ್ನಡ ನಮ್ಮಿಂದ ದೂರವಾಗಿ ಇಂದು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಜಾಗೃತವಾಗಬೇಕಿದೆ ಇಂದಿನ ಯುವ ಜನಾಂಗ ಕನ್ನಡ ಬಗ್ಗೆ ಕೀಳರಿಮೆ ಇಂದ ನಿತ್ಯ ಜೀವನದಲ್ಲಿ ಕನ್ನಡವು ದೂರ ಉಳಿಯುವಂತಾಗಿದೆ ಕನ್ನಡಿಗರಿಂದಲೇ ಕನ್ನಡಕ್ಕೆ ಭಯವಾಗುತ್ತಿದೆ ಕನ್ನಡಿಗರೇ ಕನ್ನಡಕ್ಕೆ ಇಂದು ಶತ್ರುಗಳಾಗಿಬಿಡಬಹುದು ಎರಡೂವರೆ ಸಾವಿರ ವರ್ಷದಿಂದ ಉಳಿದ ನಮ್ಮ ಕನ್ನಡ ಇಂದು ಮರುಗುತ್ತಿದೆ ಕನ್ನಡಿಗರು ಮನಸ್ಸು ಮಾಡಿದರೆ ಮಾತ್ರ ಉಳಿಸಬಹುದಾದ ಸ್ಥಿತಿಗೆ ಬಂದಿದೆ ಜ್ಞಾನ ಸಂಪಾದನೆಗೆ ಬೇರೆ ಭಾಷೆ ಬೇಕು ಅಷ್ಟೇ ನಮ್ಮ ಕನ್ನಡ ಉಳಿಸುವುದು ನಮ್ಮ ಕರ್ತವ್ಯವಾಗಿದೆ.

ನಮ್ಮ ಭಾಷೆ ನಮ್ಮ ನಾಡಿನ ಬಗ್ಗೆ ಹೆಮ್ಮೆ ಇರಲಿ. ಎಂದೂ ನಾವು ನಮ್ಮ ಭಾಷೆಯನ್ನು ಬಿಟ್ಟು ಕೊಡದೆ ಗೌರವಿಸಿ ಉಳಿಸಬೇಕಿದೆ ನಿತ್ಯ ಜೀವನದಲ್ಲಿ ಕನ್ನಡವನ್ನು ಬಳಸಬೇಕು ಮತ್ತೊಮ್ಮೆ ಕನ್ನಡದ ಬಗ್ಗೆ ಹೆಮ್ಮೆ ಮತ್ತು ಗೌರವ ಇರಲಿ ಎಂದು ಹೇಳುವೆ ಇದು ಒಂದು ದಿನಕ್ಕೆ ಸೀಮಿತವಾಗದೆ ನಿತ್ಯ ಉತ್ಸವವಾಗಿ ರಾರಾಜಿಸಬೇಕು ಕನ್ನಡವನ್ನು ಬಳಸಬೇಕು ಕನ್ನಡ ಭಾಷೆಯ ಬಗ್ಗೆ ಅಭಿಮಾನ ಗೌರವ ಇರಲಿ. ಕನ್ನಡವನ್ನು ಉಳಿಸೋಣ ಕನ್ನಡವನ್ನು ಬೆಳೆಸೋಣ.

ಕಲಿಯೋಕೆ ಕೋಟಿ ಭಾಷೆ ಆಡೋಕೆ ಒಂದೇ ಭಾಷೆ ಕನ್ನಡ ಕನ್ನಡ ಕಸ್ತೂರಿ ಕನ್ನಡ.

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು.

**ಕನ್ನಡವೇ ಸತ್ಯ ಕನ್ನಡವೇ ನಿತ್ಯ.**

**–ಮಾನಸ.ಎಂ.ಸೊರಬ**



# ಕರುನಾಡ ರಾಜ್ಯ ಕಾರ್ಮಿಕರ ಸಂಘದ ಬಾಗೇಪಲ್ಲಿ ತಾಲ್ಲೂಕು ಕಚೇರಿ ಉದ್ಘಾಟನೆ ಪ್ರಯುಕ್ತ ಸರ್ಕಾರಿ ಶಾಲೆಗಳಿಗೆ ಪುಸ್ತಕ ವಿತರಣೆ

ಚಿಕ್ಕಬಳ್ಳಾಪುರ:ಕರುನಾಡ ರಾಜ್ಯ ಕಾರ್ಮಿಕರ ಸಂಘದ ವತಿಯಿಂದ ಬಾಗೇಪಲ್ಲಿ ತಾಲ್ಲೂಕು ಕಚೇರಿ ಉದ್ಘಾಟನೆ ಪ್ರಯುಕ್ತ ತಾಲೂಕಿನ ಹಲವು ಸರ್ಕಾರಿ ಶಾಲೆಗಳಿಗೆ ಪುಸ್ತಕ ವಿತರಣೆ ಮಾಡಲಾಯಿತು,ಈ ಸಂದರ್ಭದಲ್ಲಿ ಸಂಘಟನೆಯ ಸಂಸ್ಥಾಪಕ ರಾಜ್ಯ ಅಧ್ಯಕ್ಷರಾದ ನವೀನ್ ಕುಮಾರರವರು,ಮಹಿಳಾ ರಾಜ್ಯ ಅಧ್ಯಕ್ಷರಾದ ಪ್ರೀತಿರವರು,ತಾಲೂಕು ಅಧ್ಯಕ್ಷರಾದ ಆದಿನಾರಾಯಣರವರು,ಮಹಿಳಾ ಅಧ್ಯಕ್ಷರಾದ ಗೌತಮಿರವರು, ಉಪಾಧ್ಯಕ್ಷರಾದ ಬೈರಶೆಟ್ಟಿರವರು,ತಾಲೂಕು ಯುವ ಘಟಕದ ರಾಮಾಂಜಿನಪ್ಪರವರು ಹಾಗೂ ಸಂಘದ ಹಲವು ಸದಸ್ಯರು ಭಾಗವಹಿಸಿದ್ದರು.

KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR